# ಅಖಿಲ ಭಾರತ ಪತ್ರಿಕೆ

## ನವೆಂಬರ್ 2025



# ಮಹಾಕಾಳಿ



ಬೆಲೆ : 15/-



ಪ್ರಾಣಮಯದಲ್ಲಿ ಕಾಳಿಯ ಸಾನಿಧ್ಯ

# ಅಖಿಲ ಭಾರತ ಪತ್ರಿಕೆ

## ನವೆಂಬರ್ 2025

ಸಂಪುಟ: 35 ಸಂಚಿಕೆ: 11

## ಪರಿವಿಡಿ

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindocomplex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

### ಮಹಾಕಾಳಿ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಮಹಾಕಾಳಿಯ ಪ್ರಕ್ರಿಯೆಗಳು** 11
**ಮಹಾಕಾಳಿ ಮತ್ತು ಕಾಳಿ** 13
ಅನು: ಡಾ॥ ಮಹಾದೇವ ಸಕ್ರಿ

**ಮಹಾಕಾಳಿಯ ವರ್ಣನೆಗಳು** 20
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**ಮಹಾಕಾಳಿಯ ಗುಣಲಕ್ಷಣಗಳು** 30
**ಕೃಷ್ಣ ಮತ್ತು ಕಾಳಿ – ದುಷ್ಟ ಸಂಹಾರಕರು** 39
ಅನು: ಶ್ರೀ ಕಿಶೋರಕುಮಾರ ಕಾಸಾರ

**ಕೃಷ್ಣ ಮತ್ತು ಕಾಳಿ** 47
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 50
ಅನು: ಜಾನ್ವಿ

**ಶ್ರೀ ಅರವಿಂದರ 'ಉರ್ವಶಿ'** 59
ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ)

**ವಾರ್ತಾಪತ್ರ** 72

# ಸಂಪಾದಕರ ಟಿಪ್ಪಣಿ

ಪರಮಾತ್ಮನು ಅತ್ಯುತ್ಸಾಹದಿಂದಲೂ ಮತ್ತು ಮುಕ್ತ ಹಸ್ತದ ಸೃಷ್ಟಾರನಾಗಿ, ಸಹಕಾರಿಯಾಗಿ, ಸದಾ ಸಹಾಯ ಹಸ್ತದಿಂದ ಕೂಡಿದವನಾಗಿ ಪರಮ ದಯಾಳವೂ ಆಗಿದ್ದಾನೆ, ಅಲ್ಲದೇ ತನ್ನದೇ ಈ ಸೃಷ್ಟಿಯನ್ನು ತಾನೇ ಸ್ವಾಹಾ ಮಾಡುವದಕ್ಕೂ ಮತ್ತು ಅದರ ಪ್ರಳಯಕ್ಕೂ ಕಾರಣನಾಗಿದ್ದಾನೆ. ಈ ಪ್ರಳಯ ಸ್ವರೂಪದ ಸಂಗತಿಗಳೆಲ್ಲಕ್ಕೂ ರೂಪಧಾರಣೆ ಮಾಡುತ್ತಿರುವದೇ ಕಾಳಿಯ ಲೀಲೆಗಳಾಗಿವೆ ಅಲ್ಲದೇ ಪ್ರೇಮಮಯಿ ಕೃಷ್ಣನ ಅನಿರ್ವಚನೀಯ ಲೀಲಾವಿನೋದಗಳಾಗಿವೆ. ನಾವು ಸಾಗುತ್ತಿರುವ ಪಥವು ಸಂಕರದ ಕಾರಣದಿಂದಾಗಿ, ಅಹಂ–ಕೇಂದ್ರಿತ ಮನೋಭಾವದಿಂದ ತುಂಬಿ, ಕೇವಲ ಅಹಂ ಮಾತ್ರ ಮುಖ್ಯವಾಗಿ ಸಾಗಿದ್ದರಿಂದ ಅದು ಸಹಜವಾಗಿ ಯಾತನೆಯಿಂದ ತುಂಬಿ ವಿನಾಶಕಾರಕವಾಗಿದ್ದರೂ, ಸಾಧಕನ ಅವಿರತ ಸಾಧನೆಯಿಂದ ಅಲ್ಲಿ ತೋಷವನ್ನು ಶಾಂತಿಯನ್ನು ಜೊತೆಗೆ ವಿಷಯವನ್ನು ತರುವ ಪಥವೂ ಇದಾಗಿದೆ. ಈ ಸಾಧನಾ ಪಥದಲ್ಲಿ ಸುರಕ್ಷಿತವಾಗಿ ಯಾನ ಮಾಡಲು, ರೂಪಾಂತರಣ ಹೊಂದಲು ಸಾಧಕನಿಗೆ ಅತ್ಯಾವಶ್ಯವಿರುವ ಮಾರ್ಗವೂ ಇದೇ ಆಗಿದೆ. ಈ ಮೂಲಕ ವಿಶ್ವ ಪ್ರೇಮವನ್ನು ಸ್ಪಂದಿಸುವ ಸಲುವಾಗಿ ಇಲ್ಲಿ ಸೂತ್ರಗಳು ಇವೆ. ಕಾಳಿಯ ಅಬ್ಬರ ಮತ್ತು ಕೃಷ್ಣ ಕುರುಕ್ಷೇತ್ರದ ಘಟನೆಗಳು ಘಟಿಸಿದ ನಂತರದಲ್ಲಿ, ಸಾಧಕನಿಗೆ ಇಲ್ಲೊಂದು ಸುಸ್ಪಷ್ಟವಾದ ಪಥ ಗೋಚರಿಸಿದೆ. ಈ ಮೂಲಕ ಚೇತನವು ಅತ್ಯಂತ ಸುಭದ್ರವಾದ ಮತ್ತು ವಿಚಲನೆಗೊಳ್ಳದ ಹಂತದಲ್ಲಿ ಪ್ರಗತಿಗೊಳ್ಳುತ್ತಿರುವದನ್ನು ಕಾಣಬಹುದು.

ಈ ಮೂಲಕ ಇಲ್ಲಿ, ಉತ್ಸಾಹಪೂರ್ಣ ಹಾಗು ಸಮರ್ಥಶೀಲ ರಕ್ಷಣೆಯ ಜ್ಯೋತಿಯಾಗಿರುವ ಆ ದಿವ್ಯ ಜ್ಯೋತಿಯನ್ನು, ಶಕ್ತಿಯನ್ನು, ಪರಮ ಸತ್ಯವೇ ಸಾಕಾರವಾಗಿರುವ ಈ ದಿವ್ಯ–ಮಾತೆಯ ಸಾಕ್ಷಾತ್ಕಾರವನ್ನು ಕಾಣಬಹುದು. ಇವಳು ಅಂತರಂಗದಲ್ಲಿ ಬಹಿರಂಗದಲ್ಲಿ ಎಲ್ಲೆಡೆಯಲ್ಲಿಯೂ ತುಂಬಿಕೊಂಡಿದ್ದಾಳೆ.

ಸಾಧಕನು ಈ ಪೂರ್ಣ ಯೋಗದ ಪಥದಲ್ಲಿಯೇ ಸಾಗಬೇಕಾಗುತ್ತದೆ. ಅವನು ಸಾಗಲಿರುವ ಪಥವು ಅವನದೇ ಇಚ್ಛೆಯಂತೆಯೇ ಇರುತ್ತದೆ. ಈ ಸಂಚಿಕೆಯಲ್ಲಿ ಕೃಷ್ಣ ಮತ್ತು ಕಾಳಿಯನ್ನು ಕುರಿತು ನಮ್ಮ ಹಿರಿಯರು ಅಭಿವ್ಯಕ್ತಿಸಿರುವ ಈ ದಿವ್ಯ ವಾಣಿಯ ಅನುಭವಗಳನ್ನು ಕಾಣಬಹುದು. (ಎಐಎಮ್)

# ಸಂಪಾದಕೀಯ

## ಕೃಷ್ಣ–ಕಾಳಿ

ಮಹರ್ಷಿ ಅಗಸ್ತ್ಯರು ಮತ್ತು ಶ್ರೀ ಅರವಿಂದರು 'ಕಾಳಿ ಮಾತೆ'ಯ ಸ್ವರೂಪಗಳ ಬಗೆಗೆ ಹಲವು ಆಯಾಮಗಳನ್ನು ಅಭಿವ್ಯಕ್ತಿಸಿದ್ದಾರೆ. ಶ್ರೀ ರಾಮಕೃಷ್ಣ ಪರಮಹಂಸರು 'ಕಾಳಿಮಾತೆ'ಯನ್ನು ಆತ್ಮಪೂರ್ವಕವಾಗಿ ಭಕ್ತಿಯಿಂದ ಆರಾಧಿಸಿ, ಅವಳ ಕೃಪೆಯನ್ನು ಪಡೆದವರು. ಇಲ್ಲಿ ಅಗಸ್ತ್ಯರು ಮತ್ತು ಶ್ರೀ ಅರವಿಂದರು ದರ್ಶಿಸಿದ ಕಾಳಿ ಮಾತೆಯ ವಿವರಗಳನ್ನು ತುಲನಾತ್ಮಕವಾಗಿ ಕಾಣಬಹುದು;

| ಲಕ್ಷಣಗಳು | ಶ್ರೀ ಅರವಿಂದರ 'ಮಹಾಕಾಳಿ' | ಅಗಸ್ತ್ಯರ 'ಮಹಾಕಾಳಿ' |
|---|---|---|
| ಮೂಲ | ಶ್ರೀ ಅರವಿಂದರ 'ಪೂರ್ಣ ಯೋಗ'ದಲ್ಲಿ, ಲೋಕಮಾತೆ ಮಹಾಕಾಳಿಯ ನಾಲ್ಕು ಸ್ವರೂಪಗಳಲ್ಲಿ (ಮಾಹೇಶ್ವರಿ, ಮಹಾಲಕ್ಷ್ಮೀ ಮತ್ತು ಮಹಾಸರಸ್ವತಿ) ಅಭಿವ್ಯಕ್ತಿಸುತ್ತಾರೆ. ಇದು ಅಧಿಮಾನಸ ಹಂತದೊಂದಿಗೆ ಸ್ಪಂದಗೊಳ್ಳುತ್ತದೆ. | ವೇದಗಳ ಪ್ರಾರಂಭಿಕ ಹಂತದಲ್ಲಿ ರೂಪಿತಗೊಂಡ ಆಯಾಮಗಳಲ್ಲಿ ಅಗಸ್ತ್ಯರು ಮಹಾಕಾಳಿಯನ್ನು ವರ್ಣಿಸುತ್ತಾರೆ. ಕಾಳಿಯನ್ನು 'ಅಗ್ನಿ' ದೇವತೆಯಂತೆ ಹೇಳಿ, ಅಗ್ನಿಯ ಅಂತರಂಗದಲ್ಲಿ ಇರುವ ರೂಪಾಂತರಣದ ಶಕ್ತಿಯ ಕುರಿತು ಪಥ ನಿರ್ಮಿಸಿದ್ದಾರೆ. |
| ಸ್ವರೂಪ ಮತ್ತು ದರ್ಶನ | ಮಹಾಕಾಳಿಯು ಅಧಿಮಾನಸದ ದೇವತೆಯಾಗಿದ್ದು ಅವಳೆಂದೂ ಕಪ್ಪು ವರ್ಣದವಳಂತೆ ಕಂಡರೂ ಭಯಾನಕಳಾಗಿರುವದಿಲ್ಲ. ಅವಳು ಸ್ವರ್ಣ ವರ್ಣದಿಂದ ಕಂಗೊಳಿಸುತ್ತಾಳೆ, ಸೌಂದರ್ಯದ ಸಾಕಾರ ರೂಪವಾಗಿದ್ದಾಳೆ. ಭ್ರಮೆ ಮತ್ತು ಅಸತ್ಯದ ವಿರುದ್ಧವಾಗಿ ಹೋರಾಡುವ ಶಕ್ತಿವಂತೆಯಾಗಿದ್ದಾಳೆ. | ಪರಂಪರೆಯ ಆಯಾಮದಲ್ಲಿ ಅಗಸ್ತ್ಯ ಮುನಿಯಿಂದ ಅಭಿವ್ಯಕ್ತಿಗೊಂಡಿರುವ ಕಾಳಿಯು, ಉಗ್ರ ಸ್ವರೂಪದವಳು, ಕಪ್ಪು ವರ್ಣದವಳು ಆಗಿದ್ದಾಳೆ. ಭಯಾವಹ ಸ್ವರೂಪದ ಈ ದೇವಿಯ ಪ್ರಳಯ ಸ್ವರೂಪಿ ಸ್ವಭಾವವನ್ನು ಚಿತ್ರಿಸುತ್ತದೆ. ಅದರಲ್ಲೂ ತಾಂತ್ರಿಕ ಪಂಥದಲ್ಲಿ ಇವಳೇ ಆರಾಧನೆಯ ಕೇಂದ್ರ ಸ್ಥಾನವೂ ಆಗಿದ್ದು ಜೊತೆಗೆ ಅಗಸ್ತ್ಯ ಮುನಿಯಿಂದ ಆದಿಯಾಗಿರುವ ಆಧ್ಯಾತ್ಮಿಕ ಪರಂಪರೆಯ ಆದಿದೇವತೆಯಾಗಿದ್ದಾಳೆ. |

| ಲಕ್ಷಣಗಳು | ಶ್ರೀ ಅರವಿಂದರ 'ಮಹಾಕಾಳಿ' | ಅಗಸ್ತ್ಯರ 'ಮಹಾಕಾಳಿ' |
|---|---|---|
| ಉದ್ದೇಶ<br>ಮತ್ತು<br>ಕ್ರಿಯೆ | ಶ್ರೀ ಅರವಿಂದರ ಅಭಿವ್ಯಕ್ತಿಯಲ್ಲಿ<br>ಮಹಾಕಾಳಿಯು<br>ಪ್ರಚಂಡವಾಗಿರುವ ಹಾಗು<br>ಅದಮ್ಯವಾಗಿರುವ<br>ಶಕ್ತಿಯಾಗಿದ್ದಾಳೆ. ಅಲ್ಲದೇ<br>ತೀವ್ರಾತಿತೀವ್ರವಾಗಿರುವ ಮತ್ತು<br>ಸದಾ ಪರಿವರ್ತನಕಾರಿ–<br>ಯಾಗಿರುವ ಕಾರ್ಯಗಳನ್ನೇ<br>ಮಾಡುತ್ತಾಳೆ. ಅಪ್ರತಿಮ<br>ಯೋಧೆಯಾಗಿರುವ ಇವಳು<br>ಸೀಮಾತೀತಳಾಗುತ್ತಾಳೆ.<br>ಅಂತರಂಗದಲ್ಲಿರುವ<br>ಅಹಂಕಾರವನ್ನು ತೊಡೆದು<br>ಹಾಕುತ್ತಾಳೆ. ಈಶ್ವರ<br>ಪ್ರಣೀತವಾಗಿರುವ ಕಾರ್ಯಗಳು<br>ಅನುಷ್ಠಾನಗೊಳ್ಳಲೆಂದು<br>ಅವುಗಳಿಗೆ ಬರುವ ಎಲ್ಲ<br>ವಿರೋಧಗಳನ್ನೂ ತನ್ನ<br>ನಿರ್ಮಮ ಇಚ್ಛಾಶಕ್ತಿಯಿಂದ<br>ಕತ್ತರಿಸುತ್ತಾಳೆ.<br>ಸುಪ್ತವಾಗಿರುವದನ್ನು<br>ಜಾಗರಣಗೊಳಿಸಿ ಆತ್ಮವು<br>ತೀವ್ರಾತಿತೀವ್ರವಾಗಿ<br>ಪರಮಾನಂದವನ್ನು<br>ಪಡೆದುಕೊಳ್ಳುವಂತೆ<br>ಹರಸುತ್ತಾಳೆ. | ಅಗಸ್ತ್ಯ ಮುನಿಯ 'ಮಹಾಕಾಳಿ'ಯು,<br>ಪೌರಾಣಿಕ ಕಥಾನಕದ ಪ್ರಕಾರವಾಗಿ,<br>ಓರ್ವ ವಿನಾಶಕಾರೀ ಶಕ್ತಿಯಾಗಿದ್ದಾಳೆ,<br>ಆದರೆ ಇಲ್ಲಿರುವ ಉದ್ದೇಶವೆಂದರೆ,<br>ವಿನಾಶಕಾರಿಯಾದ ಅಂಶಗಳನ್ನು<br>ನಿವಾರಿಸಿ ನಿಷ್ಕ್ರಿಯಗೊಳಿಸುವ<br>ದೇವಿಯಾಗಿದ್ದಾಳೆ. ದೇವತೆಗಳ<br>ಸಲುವಾಗಿ ಇವಳು ರಾಕ್ಷಸರ<br>ಸಂಹಾರವನ್ನು ಮಾಡುತ್ತಾಳೆ. ಈ<br>ಮೂಲಕ ಈ ರೀತಿಯ ಕಾರ್ಯದಲ್ಲಿ<br>ಪ್ರಕೃತಿಯ ಶಕ್ತಿಯ ಮಹತ್ವವನ್ನು<br>ತಿಳಿಸುತ್ತಾರೆ. ಇಲ್ಲಿ ಅವಳು<br>ಸೃಜನಶೀಲಳೂ ಹೌದು ಮತ್ತು ತಾಂತ್ರಿಕ<br>ದೃಷ್ಟಿಕೋನದಲ್ಲಿ ಅಧಿಕಾಧಿಕ<br>ಶಕ್ತಿಯಾಗಿರುವ ಪರಂಪರೆಯನ್ನು<br>ಕಾಣಬಹುದು. |
| ಸಾಧಕ–<br>ರೊಡನೆ<br>ಸಂಪರ್ಕ | ಶ್ರೀ ಅರವಿಂದರ ಮಹಾಕಾಳಿಯು<br>ಆಧ್ಯಾತ್ಮದ ಸಾಧಕರಿಗೆ<br>ಗತಿಶೀಲತೆಯನ್ನು ಕೃಪೆಗೊಳಿಸುವ<br>ಮಾತೆಯಾಗಿದ್ದಾಳೆ. ಭಯಭೀತ<br>ಜನಸಮುದಾಯಕ್ಕೆ ಇವಳು<br>ಕಷ್ಟವನ್ನು ಕೊಡುವಂತೆ<br>ಕಂಡರೂ, ಅವಳು ಮಾನವನ<br>ಅಂತರಂಗದಲ್ಲಿರುವ | ಅಗಸ್ತ್ಯ ಮುನಿಯ ಪರಂಪರೆಯಲ್ಲಿ<br>'ಗುರು–ಶಿಷ್ಯ' ಭಾವವೇ ಪ್ರಾಶಸ್ತ್ಯದಲ್ಲಿದೆ.<br>ಈ ಪರಂಪರೆಯಲ್ಲಿರುವ ಆಧುನಿಕ<br>ಸಮರ್ಥಕರೂ ಭಕ್ತರ ಕಲ್ಯಾಣಕ್ಕಾಗಿ<br>'ಮಹಾಕಾಳೀ–ಅಗಸ್ತ್ಯೇಶ್ವರ<br>ಮಹಾಯಜ್ಞವನ್ನು ಮಾಡುತ್ತಾರೆ. |

| | | |
|---|---|---|
| | ತೊಂದರೆಗಳನ್ನು ತುಂಡರಿಸುವ ಸಲುವಾಗಿ ಮತ್ತು ಪ್ರಗತಿಯನ್ನು ನಿರಂತರಗೊಳಿಸವದರ ಮೂಲಕ ತೀವ್ರಗೊಳಿಸುವದರ ಸಲುವಾಗಿ ಇರುತ್ತಾಳೆ. ಇವಳನ್ನು ಆರಾಧಿಸುವವರು ಶಕ್ತಿಶಾಲಿಗಳು ಮತ್ತು ಸತ್ಪುರಷರು ತಮ್ಮ ವಿರುದ್ಧವಿರುವ ಎಲ್ಲ ವಿದ್ರೋಹಿ ಅಂಶಗಳನ್ನು ಕತ್ತರಿಸುವ ಶಕ್ತಿಯಾಗಿದ್ದಾಳೆ. | |
| ರೂಪಾಂತ–ರಣದ ಸೀಮೆ | ಶ್ರೀ ಅರವಿಂದರ ದರ್ಶನದಲ್ಲಿ, ಮಹಾಕಾಳಿಯು ಪೂರ್ಣ ಯೋಗದ ವ್ಯಾಪಕತ್ವವನ್ನು ಹೊಂದಿದ್ದು, ವಿಕಾಸವಾದದ ಪ್ರಕ್ರಿಯೆಯಲ್ಲಿ ಪ್ರಧಾನವಾಗಿದ್ದಾಳೆ. | ಅಗಸ್ತ್ಯ ಮುನಿಯ ಪರಂಪರೆಯಲ್ಲಿ ಪ್ರಾಚೀನ ಸಿದ್ಧ ಮತ್ತು ವೈದಿಕ ಋಷಿಗಳಿಂದ ಅಭಿವ್ಯಕ್ತಿಸಲ್ಪಟ್ಟ ರಹಸ್ಯಮಯ ಅನುಷ್ಠಾನಕ್ಕೆ ಸಮೀಪವಿದೆ. ಅದರೊಡನೆ ಹೆಚ್ಚು ನಿಕಟಮಯವಾಗಿದೆ. ಅಲ್ಲಿರುವ ವ್ಯಾಪ್ತಿ, ಕಾರ್ಯ ಮತ್ತು ಅವುಗಳಲ್ಲಿರುವ ಬ್ರಹ್ಮಾಂಡೀಯ ಶಕ್ತಿಯ ಕುರಿತು ಅದನ್ನು ನಿಯಮಾನುಸಾರವಾಗಿ ವಿಶೇಷ ಅಧ್ಯಯನದ ಪಾಠವಿದೆ. ಅಂಧಕಾರವನ್ನು ಸಮರ್ಥವಾಗಿ ಎದುರಿಸುವ ಮನುಕುಲಕ್ಕೆ ತಿಳಿಸಿಕೊಡುವ ಜ್ಞಾನವಿದೆ. |

ಶ್ರೀ ಅರವಿಂದರ ದೃಷ್ಟಿಯಂತೆ, 'ಮಹಾಕಾಳಿ ಮುಖವು ಅಸುರರಿಗೆ ಭಯಾನಕವಾಗಿದೆ. ಈಶ್ವರನ ಕೃಪಾಕಟಾಕ್ಷಕ್ಕಿಂತ ಇವಳ ಭಾವವು ಭಯಾನಕ ಮತ್ತು ನಿರ್ದಯದಿಂದ ಕೂಡಿದೆ. ಏಕೆಂದರೆ ಇವಳು ಲೋಕ–ಲೋಕಗಳನ್ನು ರಕ್ಷಿಸಲು ಹೋರಾಡುತ್ತಿರುವ ಯೋಧೆಯಾಗಿದ್ದಾಳೆ. ಯಾವದೇ ಸಮಯದಲ್ಲಿಯೂ ಯುದ್ಧದಿಂದ ಹಿಂದೆ ಸರಿಯುವದಿಲ್ಲ. ಅಪೂರ್ಣತೆಯೆನ್ನುವದನ್ನು ಇವಳೆಂದಿಗೂ ಸಹಿಸುವದಿಲ್ಲ. ಹೀಗಾಗಿ ಅಪೂರ್ಣತೆಯಲ್ಲಿಯೇ ಬಳಲುತ್ತಿರುವ ಮನುಕುಲದೊಡನೆ ಕಠೋರಳಾಗಿಯೇ ವರ್ತಿಸುತ್ತಾಳೆ. ಯಾರು ಹಠದಿಂದ ಕೂಡಿರುತ್ತಾರೆಯೋ ಅಜ್ಞಾನಿಗಳಾಗಿರುತ್ತಾರೆಯೋ, ಅವರ ವಿಷಯದಲ್ಲಂತೂ ಮತ್ತೂ ಕಠೋರ ಭಾವವನ್ನು ತಾಳುತ್ತಾಳೆ. ಅಸತ್ಯ ಮತ್ತು ದುಷ್ಟ ಭಾವನೆಗಳನ್ನು ಕಂಡಲ್ಲಿ ತಕ್ಷಣವೇ ಅವುಗಳನ್ನು ದಂಢಿಸಿ ಸರಿ ದಾರಿಗೆ ತರುತ್ತಾಳೆ. ಈಶ್ವರೇಚ್ಛೆಯ ಕಾರ್ಯಗಳಲ್ಲಿ

ಉದಾಸೀನತೆಯನ್ನಾಗಲೀ ಮತ್ತು ಬೇಜವಾಬ್ದಾರಿಯಿಂದ ನಡೆದುಕೊಳ್ಳುವದನ್ನು ಎಂದಿಗೂ ಸಹಿಸುವದಿಲ್ಲ. ಆಲಸ್ಯವನ್ನಂತೂ ಎಂದಿಗೂ ಕಾಣಲಿಚ್ಛಿಸುವದಿಲ್ಲ. ನಿಯಮರಾಹಿತ್ಯದ ಜೀವನ ವಿಧಾನವನ್ನು ಅನುಸರಿಸುವ ಜನ ಸಮುದಾಯವನ್ನು ತೀವ್ರ ಶಿಕ್ಷೆಯಿಂದ ದಂಡಿಸುತ್ತಾಳೆ.

ಇದನ್ನೇ ಶ್ರೀಮಾತೆಯವರು ಮಹಾಕಾಳಿಯನ್ನು, 'ಇವಳ ಸ್ವರೂಪವೇ ವಿಭಿನ್ನವಾಗಿದೆ. ಇಲ್ಲಿ ವಿಶಾಲತೆ ಇಲ್ಲದಿದ್ದರೂ ಔನ್ನತ್ಯವಿದೆ. ಬುದ್ಧಿಗಿಂತ ಪ್ರಾಧಾನ್ಯವಾಗಿ ಬಲ (ಸಾಮರ್ಥ್ಯ) ಇದೆ. ಇದೇ ಅವಳ ವಿಶಿಷ್ಟ ಶಕ್ತಿಯೂ ಅಗಿದೆ. ಅದಮ್ಯ ತೀವ್ರತೆಯ ಮತ್ತು ಸಾಮರ್ಥ್ಯ ಪ್ರಾಪ್ತಿಯ ಪ್ರಬಲವಾದ ಇಚ್ಛೆ ಇದೆ. ದಿವ್ಯವಾದ ಪ್ರಚಂಡ ತೀವ್ರತೆ ಇದೆ. ಸಾಮರ್ಥ್ಯವನ್ನು ಪಡೆದುಕೊಳ್ಳುವ ಬಲವಾದ ಅಭೀಪ್ಸೆ ಇದೆ. ಈ ದಿವ್ಯ ಪ್ರಚಂಡತೆಯು ಸೀಮೆಗಳನ್ನು ಛಿದ್ರಗೊಳಿಸಿ ಅಖಂಡತೆಯನ್ನು ಸ್ಥಾಪಿಸುತ್ತದೆ. ಇವಳ ಈ ಸಮಸ್ತ ದಿವ್ಯತ್ವವೂ ಪ್ರಚಂಡ ಕ್ರಿಯೆಗಳ ಮೂಲವ ವೈಭವವನ್ನು ಪಡೆದುಕೊಳ್ಳುತ್ತದೆ. ಈ ರೀತಿಯ ತೀವ್ರತೆ ಮತ್ತು ಅದರ ಪ್ರಭಾವದ ಪ್ರಕ್ರಿಯೆಗಾಗಿ ಅಲ್ಲಿ ಅವಶ್ಯವಿರುವ ತೀವ್ರಾತಿತೀವ್ರವಾಗಿರುವ ಪ್ರಹಾರಕ್ಕಾಗಿ, ನೇರಾನೇರ ಆಕ್ರಮಣಕ್ಕೂ ಸಿದ್ಧಳಿದ್ದಾಳೆ. ಸರ್ವಸ್ವವನ್ನೂ ತನ್ನ ಸಮಕ್ಷಮ ತಂದುಕೊಳ್ಳುತ್ತಾಳೆ.

ಆಧುನಿಕ ಅಧ್ಯಯನದಲ್ಲಿ ಮಹಾಕಾಳಿಯನ್ನು ಕೃಷ್ಣ ರಂಧ್ರಕ್ಕೆ ಸಮನಾಗಿ ಕಾಣಲಾಗುತ್ತಿದೆ, ಇದಕ್ಕೆ ಕಾರಣ ಅವಳಿಗಿರುವ 'ಕಪ್ಪು ವರ್ಣ'ವೂ ಮುಖ್ಯವಾಗಿದೆ. ಪ್ರಳಯ ಸ್ವರೂಪದ ಕ್ರಿಯೆಯಲ್ಲಿ ಇರುವ ಈ ಕೃಷ್ಣ ರಂಧ್ರದ ಹಾಗೆ ವಿನಾಶ–ಗೊಳಿಸುವದೂ ಒಂದು ಪಾಠವಾಗಿ ಮತ್ತೆ ಮರುಸೃಷ್ಟಿಗಾಗಿ ಸ್ಪಂದಿಸುತ್ತಿರುವ ಕೃಷ್ಣ ರಂಧ್ರವನ್ನು 'ಮಹಾಕಾಳಿ' ಎಂದೇ ಅಧ್ಯಯನವಿದೆ. ಮಹಾಕಾಳಿಯು ಬ್ರಹ್ಮಾಂಡೀಯ ಮತ್ತು ವೈಶ್ವಿಕ ಸ್ವರೂಪದ ಮಾಯೆಯನ್ನು ಸೃಷ್ಟಿಸಿದಂತೆ ಕಾಣುತ್ತದೆ. ಆದರೆ ಕೃಷ್ಣ ರಂಧ್ರವು ಗುರುತ್ವಾಕರ್ಷಣೆ ಶಕ್ತಿಯ ಮೂಲಕ ಜಡ ಮತ್ತು ಪ್ರಕಾಶಗಳೆರಡನ್ನೂ ಸ್ವಾಹಾ ಮಾಡುತ್ತದೆ. ಆಧ್ಯಾತ್ಮದ ವಿಷಯದಲ್ಲಿ ಈ ರೀತಿಯ ತುಲನಾತ್ಮಕ ಹೋಲಿಕೆಯಿಂದ ತತ್ತ್ವಜ್ಞಾನವೂ ಸಹಿತ ಆಯಾಮಗಳಲ್ಲಿ ರೂಪಣೆಗೊಳ್ಳುತ್ತದೆ. ಹೀಗಾಗಿ ಮಹಾ ಕಾಳಿಯನ್ನು "ಕಾಲಭಕ್ಷಕಿ" ಎಂದೂ ಕರೆಯಲಾಗುತ್ತಿದೆ.

ಭಾರತದ ಪೂರ್ವ ಭಾಗವು ಅದರಲ್ಲೂ ಬಂಗಾಲ ಪ್ರದೇಶವು ಕಾಳಿ ಮತ್ತು ಕೃಷ್ಣ ಬಗೆಗೆ ಆತ್ಮಪೂರ್ವಕವಾಗಿರುವ ತಾದಾತ್ಮ್ಯತೆಯನ್ನು ಹೊಂದಿ, ಜೀವನ ವಿಧಾನವಿರುವ ಪ್ರದೇಶವಾಗಿದೆ. ಶ್ರೀ ರಾಮಕೃಷ್ಣ ಪರಮಹಂಸರಾಗಲೀ, ಸ್ವಾಮಿ

ವಿವೇಕಾನಂದರಾಗಲಿ 'ಮಹಾಕಾಳಿ'ಯನ್ನು ಭಕ್ತಿಪೂರ್ವಕವಾಗಿ ಆರಾಧಿಸಿದ್ದಾರೆ. ಶ್ರೀ ಅರವಿಂದರೂ ಸಹಿತ, ಇಂಗ್ಲಂಡಿನಿಂದ ಭಾರತಕ್ಕೆ ಮರಳಿ ಬಂದ ಮೇಲೆ, ಬಡೋದಾ ಸಂಸ್ಥಾನದಲ್ಲಿದ್ದಾಗ, ನರ್ಮದಾ ನದಿ ತೀರದ ಕರ್ನಾಲಿ ಎನ್ನುವ ಗ್ರಾಮದಲ್ಲಿರುವ 'ಮಹಾಕಾಳಿ' ದೇವಸ್ಥಾನಕ್ಕೆ ಹೋದಾಗ, ಅಲ್ಲಿರುವ ದೇವಿಯ ಮೂರ್ತಿಯು ಕೇವಲ ಶಿಲೆ ಮಾತ್ರವಾಗಿರದೇ, ಅದು ಜೀವದುಂಬಿ ಸ್ಪಂದಿಸುತ್ತಿರುವದನ್ನು ದರ್ಶಿಸುತ್ತಾರೆ. ಆ ಅನುಭವವನ್ನೇ ಮುಂದೆ 'ತ್ರಾಟಕ ಸೂರ್ಯ' ಜಾಗ್ರತಿಗಾಗಿ, ಬಂಗಾಳದ ಇನ್ನೊಂದು ಮಹಾಕಾಳಿ ದೇವಳದಲ್ಲಿ 'ಒಂದು ಸಪ್ತಾಹ'ದ ಧ್ಯಾನ–ಮೌನದ ಮೂಲಕ 'ಕಾಳಿಯ ಕೃಪೆ'ಯನ್ನು ಪಡೆದುಕೊಳ್ಳುತ್ತಾರೆ.

ಬಂಗಾಳದ ಅಸ್ಮಿತೆಯೇ ಆಗಿರುವ 'ಕೃಷ್ಣ'ನನ್ನಂತೂ ಅಲಿಪುರ ಸೆರೆಮನೆ–ಯಲ್ಲಿಯೇ ದರ್ಶಿಸುವ ಮೂಲಕ, ಈ ಕಪ್ಪು ಕೃಷ್ಣನ ಮಾಧುರ್ಯಮಯದ ಲೀಲೆಗಳು ಮತ್ತು ಮಹಾಕಾಳಿಯ ಸ್ವರೂಪದಲ್ಲಿ 'ಭವಾನಿ ಭಾರತಿ'ಯಾಗಿ ಭಾರತ ದೇಶವನ್ನು ಆರಾಧಿಸುತ್ತಾರೆ. ಮಹಾಕಾಳಿಯ ಉಗ್ರಾವತಾರದ ಕಾರಣ, ಅವಳ ಸೌಮ್ಯ ಸ್ವರೂಪದಲ್ಲಿ ಅನುಷ್ಠಾನಗೊಳ್ಳುವ 'ಕೃಷ್ಣ'ನ ಚೇತನಗಳನ್ನು ಸಮೀಕರಿಸಿ, ನವೀನ ಮಾರ್ಗವೊಂದನ್ನು ಶ್ರೀ ಅರವಿಂದರು ನಿರ್ಮಿಸಿದ್ದಾರೆ.

ಕಾಳಿಯನ್ನು 'ಮಹಾಕಾಳಿ', 'ಸ್ಮಶಾನಕಾಳಿ', 'ರುದ್ರಕಾಳಿ' ಮತ್ತು 'ಭದ್ರಕಾಳಿ' ಸ್ವರೂಪದಲ್ಲಿ, ಕಾಳಿಯು ದುಷ್ಟರನ್ನು ಸಂಹಾರ ಮಾಡಿ, ಪ್ರಶಾಂತತೆಯ ಹೊಸ ಯುಗವನ್ನು ರೂಪಿಸಲು ತಹತಹಿಸುತ್ತಾ ಇರುತ್ತಾಳೆ.

**ಮಹಾಕಾಳಿ ಮತ್ತು ಭವಾನಿ ಭಾರತೀ**

ಪರದೇಶೀಯರ ಕ್ರೂರ ದಬ್ಬಾಳಿಕೆಗೆ ಸಿಲುಕಿ ನೊಂದು, ಘಾಸಿಗೊಂಡ ಸಮುದಾಯವನ್ನು ರಕ್ಷಿಸುವ ಸಲುವಾಗಿ, ಭವಾನಿ ಭಾರತಿಯೇ ಮಹಾಕಾಳಿಯ ಉಗ್ರ ಸ್ವರೂಪದಲ್ಲಿ ಎಚ್ಚರಿಸುತ್ತ ಜನ ಸಮುದಾಯವನ್ನು ಶಕ್ತಿವಂತರನ್ನಾಗಿಸಲು ಹರಸುತ್ತಾಳೆ. ಇದನ್ನು ಶ್ರೀ ಅರವಿಂದರ 'ಭವಾನಿ ಭಾರತೀ' ಸಂಸ್ಕೃತ ಕಾವ್ಯದಲ್ಲಿ ಆಸ್ವಾದಿಸಬಹುದಾಗಿದೆ.

ಆಲಿಸಿರಿ ಎಲ್ಲ ಆವಂತಿ–ಮಗಧ–ಬಂಗಾಳ ಬಂಧುಗಳಿರಾ
ಓ ಅಂಗದೇಶಿ, ಕುರು–ಸಿಂಧ ವಾಸಿ, ಕಳಿಂಗಾದಿ ಬಂಧುಗಳಿರಾ
ಓ ದಾಕ್ಷಿಣಾತ್ಯ ಓ ಆಂಧ್ರ–ಚೋಳ ಆಲಿಸಿರಿ ಕರೆಯ ಸಾರಾ
ಓ ಶೂರ–ಧೀರ ಪಂಚ–ನದಿ–ನಾದದಾ ಉಸಿರುಸಿರುಗಳಿರಾ

ಜಗದೀಶನನ್ನು ತ್ರೈಮೂರ್ತಿಯಾಗಿ ಪೂಜಿಸುವ ಸರ್ವಜನಕೆ
ಅವನೇಕ ಮಾತ್ರ ಏಕೈಕವೆಂದು ನಮಿಸುವಾ ಯವನ–ಮನಕೆ

ನಿಮ್ಮೆಲ್ಲರಮ್ಮ ನಾನೀಗ ಕರೆಯನಿತ್ತಿರುವೆ ಏಳಿ, ಬೇಗ
ಜಡನಿದ್ರೆಯನ್ನು ತೊಡೆದೊಗೆಯಿರೀಗ ಕೇಳಿರೀ ಎದೆಯ ಕೂಗ

ಶೃಂಗದುತ್ತುಂಗ ಭೇರಿಯಲಿ ನಿನದ ಈ ಕಾಲ–ಭೇರಿ ತೂರ್ಯ
ರುದ್ರ–ನೃತ್ಯವಿದು ರೌದ್ರ–ಮೃತ್ಯುವಿದು, ಸಂದೇಶ ದೂತ ಕಾರ್ಯ
ಭೀಕರದ ಬರವು, ಭೂಕಂಪವೀಗ ಉದ್ಘೋಷಗೊಳಿಸುತಿಂದು
ನನ್ನಾತ್ಮ ಪೂರ್ಣದಾ ಬಲದ ಜೊತೆಗೆ ಆಗಮಿಸಿ ಬಂದೆನೆಂದು

ತಣಿಸೆನ್ನ ತೃಷೆಯ ಆಹುತಿಗೆ ನೀಡು ನೀ ನಿನ್ನ ದೇಹ–ಭಾವ
ದೃಷ್ಟಿಸೀಗೆನ್ನ ನಾ ಆದಿಶಕ್ತಿ ಅರಿತುಕೋ ಭಜಿಸಿದೈವ
ಮಹದ್–ಮುಂಡಗಳ ರಾಜ–ರುಂಡಗಳ ಧರಿಸಲೆನೆ ಈಪ್ಸೆಯಲ್ಲಿ
ದಿಗ್ದೆಡೆಯಲೆಲ್ಲ ಗರ್ಜಿಸತಲೀಗ ಸಂಚರಿಸಿ ಕಾಳಿ ಇಲ್ಲಿ

ಶತ–ಲಕ್ಷ–ಕೋಟಿ–ಅರ್ಬುದದ ಸರಣಿ ಅಜಬಲಿಯನಿತ್ತರೂನು
ನಾ ತೃಪ್ತಳಲ್ಲ ಈ ರಕ್ತಧಾರೆ ಧಾರೆಯೊಲು ಸವಿದರೂನು
ಭೇದಿಸುತ ನಿನ್ನ ಹೃದಯವನೆ ಉಕ್ಕಿ ಬರುತಿರುವ ರಕ್ತ ಕೇಳಿ
ಅರ್ಪಣೆಯಲೀಗ ಸಂಪೂಜೆಗೊಳುವ ಈ ಆದಿಮಾತೆ ಕಾಳಿ.

ಅಸಮಾನ ಶೂರ ವೀರಾಧಿವೀರ ನಾಯಕರು ಹೃದಯ ತುಂಬಿ
ಕುಲದ ಉದ್ಧಾರದಲಿ ಪ್ರಮುಖ–ಸಂತ–ಮಹಾ0ತ ಶೌರ್ಯದುಂಬಿ
ಆತ್ಮದಾಹುತಿಯ ನೀಡಲೆನೆ ಸಿದ್ಧರಿರಲಿಲ್ಲಿ ಸೌಮ್ಯರಾಗಿ,
ಶತ್ರುಗಳನೀಗ ತರಿಯಲೆನೆ ರಕ್ತದಲಿ–ಪುಷ್ಟ ಕರಾಳಿಯಾಗಿ

ಯಾರಿಗಂಜುತಿಹೆ ಓ ಆರ್ಯ ನೀನು, ಧುಮುಕು ನೀ ರುಧಿರ–ಸಿಂಧು
ಅಭಿವ್ಯಕ್ತಗೊಳಲಿ ನಿನ್ನಾರ್ಯ ಸತ್ವ ನಿನ್ನಾತ್ಮ ತತ್ತ್ವವೆಂದು
ಇದೋ ನೋಡಿದೋ, ದುರ್ಗಮ್ಯ–ಜ್ಯೋತಿಕಾಂತಿಯಲಿ ಮಿಂದು ತೇಜ
ಆ ತ್ರಿಶೂಲವದು ಉದಿತಗೊಳ್ಳುತಿದೆ ಅನುಸ್ಪಂದ್ತ್ವಂಥ ಓಜ।

ಓ ಕವಿಯೆ ಮತ್ತೆ ಓ ರಸಿಕ ಕೇಳಿರೋ ಮಾತೆ ವಾಣಿಯನ್ನು
ಪೂಜಿಸೋ ಮಗುವೆ ನೀನೀಗ ಕಾಳಿ–ಕರಾಳಿಯಾ ಚಂಡಿಯನ್ನು
ಕಣ್ತೆರೆದು ಕಾಣು, ಇವಳೀಗ ಮಾತೆ ಭಾರತಾಂಬೆಯೇ ಖಚಿತ
ಅರಿಗಣವ ತರಿದು ಅಪ್ಪಳಿಸೆ ಯುದ್ಧದುನ್ಮಾದ– ಧ್ವಂಸ– ಭರತ

ಮಾತೆ ಭಾರತಾಂಬೆಯೇ ಖಚಿತ: ಇಲ್ಲಿ ಶ್ರೀಮಾತೆಯನ್ನು "ಮಾತಾ ಭವಾನೀ!" ಎಂದು ಪ್ರಾರ್ಥಿಸಿ ನನ್ನ ಮೇಲೆ ಕರುಣಾ ದೃಷ್ಟಿಯನ್ನು ಬೀರು ಎಂದು ಪ್ರಾರ್ಥಿಸುವ ಭಕ್ತನು "ಭವಾನೀ ತ್ವಂ" ಎಂದು ಎರಡು ಶಬ್ದಗಳನ್ನು ಉಚ್ಚರಿಸುತ್ತಲೇ, ಅಷ್ಟಕ್ಕೇ ತೃಪ್ತಳಾದ ಅವಳು, ಆ ಕರೆಯಲ್ಲಿ 'ಅಮ್ಮಾ, ನಾನು ನೀನೇ ಆಗಬೇಕೆನ್ನುವ ಅರ್ಥವನ್ನು ಅರಿತುಕೊಂಡು ಬಿಡುತ್ತಾಳೆ.' ಇಲ್ಲಿ 'ಭವಾನಿ' ಶಬ್ದದ ಪ್ರತಿಮಾತ್ಮಕ ವಿನ್ಯಾಸ ಅಪೂರ್ವವಿದೆ. ನಾಮಪದವಾಗಿ ಭವಾನಿ ಎನ್ನುವದನ್ನು ಶಿವನ ಪತ್ನಿ ಎಂದು ಅರ್ಥವಿದೆ; ಆದರೆ "ತ್ವಮ್" ಶಬ್ದದೊಡನೆ ಅದು ಕ್ರಿಯಾಪದವಾದಾಗ, 'ನಾನು ನೀನೇ ಆಗಬೇಕು' ಎನ್ನುವ ಧ್ವನಿ ಉದಿಸುತ್ತದೆ. (ಆಧಾರ: ಸ್ವಾಮಿ ಶ್ರೀ ಸ್ವಾಮಿ ಶಾಂತಾನಂದಪುರಿಯವರ "ಲಲಿತಾ ಸಹಸ್ರ ನಾಮದ ಒಳನೋಟ"). ಇಲ್ಲಿ ಶ್ರೀ ಅರವಿಂದರು ಈ ಭವಾನಿಯನ್ನು ಭಾರತ ಮಾತೆಯನ್ನಾಗಿಸಿದ್ದಾರೆ.

ಮಹಾಕಾಳಿಯ ಸರ್ವ ಸ್ವರೂಪಗಳನ್ನೂ ಶ್ರೀ ಅರವಿಂದರು ತಮ್ಮ ಮಂತ್ರ ಸ್ವರೂಪದ ಕಾವ್ಯ 'ಸಾವಿತ್ರಿ'ಯಲ್ಲಿ ಅಭಿವ್ಯಕ್ತಿಸಿದ್ದಾರೆ. 'ದುಷ್ಟ ಜನರನ್ನು ದಂಡಿಸುವೆನೀಗ ಆ ಭಂಡ–ಪುಂಡ–ಉದ್ದಂಡ ಪಿಂಡಗಳನ್ನು' ಎಂದು ಹೇಳುತ್ತ, ಇಡೀ ಲೋಕವನ್ನು ಶೋಕ ಸಾಗರದಲ್ಲಿ ಮುಳುಗಿಸಲು, ತಮ್ಮ ಪ್ರಭಾವದಲ್ಲಿಯೇ ಅದುಮಿ ಹಿಡಿದುಕೊಂಡು ಹಿಂಸೆ ಕೊಡುತ್ತಿರುವ ಕಾಕುಗಳನ್ನು ಮತ್ತೆ ತಲೆ ಎತ್ತದಂತೆ ಕತ್ತರಿಸಿ ಹಾಕುತ್ತಾಳೆ. ಅವರ ರಕ್ತದ ಪ್ರತಿ ಕಣಕಣದಲ್ಲೂ ತುಂಬಿರುವ ಹತ್ಯೆ–ಲಾಲಸೆಯ ಬೀಜಗಳನ್ನು ಮೊಳಕೆಯಲ್ಲಿಯೇ ತರಿದು ಹಾಕುತ್ತಾಳೆ. ಸದಾ ತಮವನ್ನೇ ಹರಡಲು ಯತ್ನಿಸುತ್ತಿರುವ ಅಧಮರನ್ನು ಕತ್ತರಿಸಿ ಹಾಕುತ್ತಾಳೆ.

ಇಷ್ಟೆಲ್ಲಾ ಆದರೂ ಅವಳು ಜನ ಸಮುದಾಯಕ್ಕೆ ರಕ್ಷಣೆಯನ್ನು ಕೊಡುವದರ ಸಲುವಾಗಿ ದುರ್ಗೆಯಾಗಿ ಕಂಡರೂ, ಅಭಿಮಾನಿ ದೇವತೆಯಾಗಿದ್ದಾಳೆ. ತೇಜದಲ್ಲಿ ಜ್ಯೋತಿಯಾಗಿ ಕಂಗೊಳಿಸುತ್ತಾಳೆ. ಸೌಮ್ಯ ಸ್ವರೂಪದಲ್ಲಿ ಜ್ಞಾನವರ್ಧನೆಗಾಗಿ 'ಸರಸ್ವತಿ'ಯಾಗಿಯೂ ಕಂಗೊಳಿಸುತ್ತಾಳೆ. (ಪಿಪಿಕೆ)

# ಶಿಲಾ ದೇವಿ

ದೇವಗಣಗಳಾ ತಾಣವೊಂದರಲಿ, ಪುಟ್ಟ ದೇವಳದಿ ನೆಲೆಸಿ,
ನನ್ನ ದಿಟ್ಟಿಸಿತು ಆ ಪರಮದೈವ ಶಿಲ್ಪಗೊಂಡಂಗ ವಾಸಿ –
ಅಮರತ್ವವೊಂದು ಸಮ್ಮುಖದಿ ಜೀವ–ಚೈತನ್ಯ ಜೊತೆಗೆ ದಿವ್ಯ
ಅನಂತವದು ಸರ್ವ ಆಶ್ರಯವ ಪಡೆಯೆ ಆಕಾರ ಉದಿಸಿ  ಭವ್ಯ.

ಈ ವಿರಾಟ್–ವಿಶ್ವಮಾತೆ ಮಹತಿಯಲಿ ಜೊತೆಯವಳ  ಶಕ್ತಿ–ಇಚ್ಛೆ
ಬುವಿಯತಲ ಚರಮ–ಸುಪ್ತಿಯಲಿ ತಾನಧಿಷ್ಠಾತ್ರಗೊಂಡ ಇಚ್ಛೆ.
ನಿರ್ವಾಣಿಯಾಗಿ, ಸರ್ವಶಕ್ತಿಮಯ ಘನಗುಹ್ಯ–ಘನವೇ ಆಗಿ
ವ್ಯೋಮದಲಿ ಮತ್ತೆ ಆಳದಲಿ ಜೊತೆಗೆ ಮರುಧರೆಯ ಮೌನವಾಗಿ.

ಈಗಿದೋ ಮನದ–ಕವಚದಲಿ ವಾಸಿ, ಜೊತೆಯವಳು ಮೌನವಾಗಿ,
ನೀರವಳೆ ಆಗಿ ದುರ್ಭೇದ್ಯವಾಗಿ, ಸರ್ವ–ಸರ್ವಜ್ಞೆಯಾಗಿ,
ಅಡಗಿಸುವಳದನು, ನಮ್ಮಾತ್ಮವೀಗ ತಾ ದರ್ಶಗೊಳುವವರೆಗೆ
ಅಚ್ಚರಿಯ–ನಿಚ್ಚ ಅವತಾರ, ಅವಳ ಆ ಗುಹ್ಯವನ್ನು ಹೀಗೆ.

ಒಂದಾಗಿ ಇಂತು ಉಪಾಸಕನೊಳಗೆ ಜೊತೆ ಅಚಲ–ರೂಪವಾಗಿ,
ದೇಹದುಂಬಿ ಜೊತೆ ಸೌಂದರ್ಯವೊಂದು, ತಾ ಶಿಲಾವಸನೆಯಾಗಿ.

**ಕನ್ನಡ: ಪುಟ್ಟು ಕುಲಕರ್ಣಿ**
**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/608**

---

**ಟಿಪ್ಪಣಿ:** ಶ್ರೀ ಅರವಿಂದರು 1904–06 ರ ಅವಧಿಯಲ್ಲಿ ಬಡೋದಾ (ಗುಜರಾತ್) ಸಂಸ್ಥಾನದಲ್ಲಿದ್ದಾಗ, ನರ್ಮದಾ ನದಿ ತೀರದ ಕರ್ನಾಲಿ ಎನ್ನುವ ಊರಿನಲ್ಲಿ ಇರುವ ಮಹಾಕಾಲಿ ಮಂದಿರಕ್ಕೆ ಭೇಟಿ ನೀಡುತ್ತಾರೆ. ಆಗ ಅವರಿಗೆ ಆದ ಅನುಭೂತಿಯ ಹಿನ್ನೆಲೆಯ ಕವನವಿದು.

# ಮಹಾಕಾಳಿಯ ಪ್ರಕ್ರಿಯೆಗಳು

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

## ಯಾರು ಅದನ್ನು ತಾಳಿಕೊಳ್ಳಬಲ್ಲರು/ಸ್ವೀಕರಿಸಬಲ್ಲರು

ಈ ಎಲ್ಲಾ ಸಂಗತಿಗಳು ವ್ಯಕ್ತಿಯ ಮೇಲೆ, ಪರಿಸ್ಥಿತಿಯ ಮೇಲೆ, ಸನ್ನಿವೇಶಗಳ ಮೇಲೆ ಅವಲಂಬಿಸಿರುತ್ತವೆ. ನೀವು ಹೇಳುತ್ತಿರುವ ವಿಧಾನವನ್ನು ಶ್ರೀಮಾತೆಯವರು ಉಪಯೋಗಿಸುತ್ತಾರೆ, ಅದುವೇ ಮಹಾಕಾಳಿ ವಿಧಾನ, ಅದು ಯಾರೊಂದಿಗೆ ಎಂದರೆ: (1) ಯಾರಲ್ಲಿ ಪ್ರಗತಿ ಮಾಡಲು ಅತ್ಯಾಸಕ್ತಿ ಇದೆಯೋ ಮತ್ತು ಎಲ್ಲೋ ಪ್ರಾಣದಲ್ಲಾದರೂ ಸಹ ಪ್ರಾಮಾಣಿಕತೆ ಇದೆಯೋ ಅವರೊಂದಿಗೆ, (2) ಅವಳು ಸಲಿಗೆಯಿಂದ ಭೇಟಿ ಮಾಡುವವರೊಂದಿಗೆ ಮತ್ತು ಮುನಿಸಿಕೊಳ್ಳದವರು ಅಥವಾ ಅವಳ ತೀವ್ರತೆಯನ್ನು ಅಪಾರ್ಥ ಮಾಡಿಕೊಳ್ಳದವರು ಯಾರೆಂದು ಅವಳಿಗೆ ಗೊತ್ತಿದಿಯೋ ಅಥವಾ ಕರುಣೆ ಅಥವಾ ಅನುಗ್ರಹವನ್ನು ಹಿಂದೆಗೆದುಕೊಂಡಿದ್ದಾಳೆಂದು ತಿಳಿಯದ ಆದರೆ ಅದನ್ನು ಅವರ ಸಾಧನೆಗೆ ನಿಜವಾದ ಅನುಗ್ರಹ ಮತ್ತು ಸಹಾಯವೆಂದು ಪರಿಗಣಿಸುವ ಜನರೊಂದಿಗೆ. ಈ ವಿಧಾನವನ್ನು ತಾಳಿಕೊಳ್ಳದ ಜನರೂ ಇದ್ದಾರೆ – ಇದು ಮುಂದುವರೆದರೆ ಅವರು ತಪ್ಪು ತಿಳುವಳಿಕೆ, ಪ್ರತಿಭಟನೆ ಮತ್ತು ನಿರಾಶೆಯಿಂದ ಸಾವಿರ ಮೈಲಿಗಳಷ್ಟು ದೂರ ಓಡಿಹೋಗುತ್ತಾರೆ. ಶ್ರೀಮಾತೆಯವರು ಬಯಸುವುದೇನೆಂದರೆ, ಜನರು ತಮ್ಮ ಆತ್ಮಗಳಿಗೆ ಪೂರ್ಣ ಅವಕಾಶ ಪಡೆಯಬೇಕಾದರೆ, ವಿಧಾನವು ಚಿಕ್ಕ ಮತ್ತು ಕ್ಷಿಪ್ರವಾಗಿರಲಿ ಅಥವಾ ದೀರ್ಘ ಮತ್ತು ಸಂಕೀರ್ಣವಾಗಿರಲಿ. ಪ್ರತಿಯೊಬ್ಬರನ್ನೂ, ಅವಳು, ಅವರ ಸ್ವಭಾವಕ್ಕನುಸಾರವಾಗಿ ನೋಡಿಕೊಳ್ಳಬೇಕಾಗುತ್ತದೆ.

*

*ಈ ಎಲ್ಲಾ ವರ್ಷಗಳಿಂದ ನಾನು ನನ್ನ ಜೀವನದ ಎಲ್ಲಾ ವಿವರಗಳನ್ನು ಬರೆಯಲು ಹಿಂಜರಿಯುತ್ತಿದ್ದೆ ಏಕೆಂದರೆ ಶ್ರೀಮಾತೆಯವರು ನನ್ನನ್ನು ಬೈಯ್ಯಾತ್ತಳೆ ಎನ್ನುವ ಭಯವಿತ್ತು. ಈಗ ನಾನು ಸ್ವಲ್ಪ ಗಟ್ಟಿಯಾಗಿದ್ದೇನೆ ಮತ್ತು ಅವಳ ಗದರಿಸುವಿಕೆಯ ಜೊತೆಗೆ ಅವಳ ಶಕ್ತಿಯೂ ನನ್ನೊಳಗೆ ಕೆಲಸ ಮಾಡುತ್ತಿರುವುದನ್ನು ಅನುಭವಿಸಬಲ್ಲೆ. ಅವಳ ಅಮಿತ ಕಕ್ಕುಲತೆಯಿಂದ ನಾನು ಈಗ ಭಯಮುಕ್ತಳಾಗಿದ್ದೇನೆ.*

ನೀವು ಶ್ರೀಮಾತೆಯವರ ಗದರಿಕೆಗೆ ಹೆದರಿದರೆ, ನೀವು ಹೇಗೆ ಪ್ರಗತಿಯನ್ನು ಸಾಧಿಸುವಿರಿ? ಯಾರು ಬೇಗ ಪ್ರಗತಿಯನ್ನು ಹೊಂದಲು ಇಚ್ಛಿಸುತ್ತಾರೋ, ಅವರು ಮಹಾಕಾಳಿಯ ಪೆಟ್ಟುಗಳನ್ನೂ ಸಹ ಸ್ವಾಗತ ಮಾಡುತ್ತಾರೆ, ಯಾಕೆಂದರೆ ಅದು ಅವರನ್ನು ಸಾಧನಾ ಪಥದಲ್ಲಿ ಇನ್ನೂ ವೇಗವಾಗಿ ಮುಂದುವರೆಯುವಂತೆ ಮಾಡುತ್ತದೆ.

*

**ಭಯಪಡದಿರಿ**

*ನಾನು ದೈವೀ ಪ್ರಜ್ಞೆಯನ್ನು ಸಾಕ್ಷಾತ್ಕರಿಸಿಕೊಂಡಾಗ ಶ್ರೀಮಾತೆಯವರ ಬಯಕೆ ಮತ್ತು ನನ್ನ ಬಯಕೆಯ ನಡುವೆ ಯಾವುದೇ ವ್ಯತ್ಯಾಸವಿರುವುದಿಲ್ಲ ಎಂಬುದು ನಿಜವೇ? ಅವಳ ಇಚ್ಛೆ ಏನೇ ಅಗಿರಲಿ, ಅದನ್ನು ನನಗೆ ಹೇಳಬೇಕೆಂದು ನಾನು ಇಷ್ಟಪಡುತ್ತೇನೆ, ಅದು ನನಗೆ ಇಷ್ಟ ಇಲ್ಲದಿದ್ದರೂ ಸಹ – "ನೀವು ಇಷ್ಟಪಟ್ಟರೆ" ಅಥವಾ "ನಿಮ್ಮಿಷ್ಟದಂತೆ" ಎಂದು ಹೇಳದೆ, "ಇದನ್ನು ಮಾಡು" ಅಥವಾ "ಇದನ್ನು ಮಾಡಬೇಡ" ಎಂದು ಹೇಳಬೇಕು ಎಂದು ಇಷ್ಟಪಡುತ್ತೇನೆ.*

ಖಂಡಿತವಾಗಿ, ದೈವೀ ಪ್ರಜ್ಞೆಯು ಪೂರ್ಣವಾಗಿ ಸಾಕ್ಷಾತ್ಕಾರವಾದಾಗ, ಶ್ರೀಮಾತೆಯವರ ಇಚ್ಛೆ ಮತ್ತು ಸಾಧಕನ(ಳ) ಇಚ್ಛೆಯ ನಡುವೆ ಯಾವುದೇ ವ್ಯತ್ಯಾಸ ಇರುವುದಿಲ್ಲ.

ನೀವು ಹೇಳಿದಂತೆ ಶ್ರೀಮಾತೆಯವರು ಮಾಡಬಹುದಾದಂಥ ಒಂದು ಸಂಬಂಧವು ಇರಬೇಕೆಂದರೆ, ಸಾಧಕನು ಮಹಾಕಾಳಿ ರೂಪವನ್ನು ನೋಡಿ ಹೆದರಬಾರದು ಮತ್ತು ಕೇವಲ ಮಧುರತೆಯನ್ನು ಮಾತ್ರ ಕೇಳಬೇಕು. ಮಹಾಕಾಳಿಯ ಹೊಡೆತಗಳನ್ನು ಆಶೀರ್ವಾದವನ್ನಾಗಿ ಸ್ವೀಕರಿಸಲು ಸಾಧಕನು ಶಕ್ತನಾಗಿರಬೇಕು. ಅವನು ಅವಳ ಧೇಯೋದ್ದೇಶ, ನಿರ್ಣಯ, ಮಾತಿನ ಮೇಲೆ ನಂಬಿಕೆ ಇಡಬೇಕು, ಇಲ್ಲದಿದ್ದರೆ ಅವಳು ಅವನ ಅಹಮಿಕೆಗೆ ಇಷ್ಟವಾಗದ ಏನನ್ನಾದರೂ ಹೇಳಿದಾಗ ಅಥವಾ ಮಾಡಿದಾಗ, ಆ ಅಹಮಿಕೆಯು ಗೊಣಗುತ್ತಾ, ತನ್ನನ್ನು ಸಮರ್ಥಿಸಿಕೊಳ್ಳುತ್ತಾ, ಅವಳಿಗೆ ಹೆಸರಿಡುತ್ತಾ ಹೋಗುತ್ತದೆ – ಅವಳು ಅವರಿಗೆ ಇಷ್ಟವಾದದ್ದನ್ನು ಮಾಡದಿದ್ದಾಗ, ಈ ರೀತಿ ಮಾಡುವುದು ಅನೇಕ ಆಶ್ರಮವಾಸಿಗಳಿಗೆ ಅಭ್ಯಾಸವಾಗಿದೆ. ಇಲ್ಲಿ ಬಹಳ ಕಡಿಮೆ ಜನರು ಈ ಮನೋಭಾವವನ್ನು ಅಪೂರ್ಣವಾಗಿಯಾದರೂ ಸರಿ ತೆಗೆದುಕೊಳ್ಳಬಹುದು, ಆದರೆ ಶ್ರೀಮಾತೆಯವರ ಈ ಸಂಬಂಧ ಹೊಂದಿರುವುದು

ಅವರೊಂದಿಗೆ. ಬೇರೆ ಸ್ವಭಾವವಿರುವ ಜನರ ಜೊತೆ, ಅವಳು ಬೇರೆ ರೀತಿಯಲ್ಲಿ ವರ್ತಿಸಲೇಬೇಕು – ಏಕೆಂದರೆ ಅವಳು ಪ್ರತಿಯೊಬ್ಬರ ಜೊತೆಯೂ ಅವರ ಸ್ವಭಾವಕ್ಕೆ ತಕ್ಕಂತೆ ವರ್ತಿಸಬೇಕಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/353–54 – ಶ್ರೀ ಅರವಿಂದರು**

## ಮಹಾಕಾಳಿ ಮತ್ತು ಕಾಳಿ

### ಪ್ರಮುಖವಾದ ವ್ಯತ್ಯಾಸ

*ಚಂಡಿಯಲ್ಲಿ ವಿವರಿಸಿರುವ ಮಹಾಕಾಳಿಯ ರೂಪ ಮತ್ತು ಶ್ಯಾಮಾದಲ್ಲಿ ವಿವರಿಸಿರುವ ರೂಪದ ನಡುವಿನ ಪ್ರಮುಖವಾದ ವ್ಯತ್ಯಾಸ ಏನು?*

ಕಾಳಿ, ಶ್ಯಾಮಾ ಇತ್ಯಾದಿಗಳು ಪ್ರಾಣದ ಮೂಲಕ ನೋಡಲಾಗುವ ಸಾಮಾನ್ಯ ರೂಪಗಳು; ಅತಿಮಾನಸದಲ್ಲಿರುವಂಥ ನಿಜವಾದ ಮಹಾಕಾಳಿಯ ರೂಪವು ಕಪ್ಪು ಅಥವಾ ಗಾಢ ಬಣ್ಣದ ಅಥವಾ ಭಯಂಕರ ರೂಪವಾಗಿಲ್ಲ, ಆದರೆ ಅವಳ ರೂಪವು ಸುವರ್ಣ ವರ್ಣ ಮತ್ತು ಸೌಂದರ್ಯದಿಂದ ತುಂಬಿದೆ, ಅದು ಅಸುರರಿಗೆ ಭಯಾನಕವಾಗಿದ್ದರೂ ಸಹ.

*

*ಕೆಲವೊಮ್ಮೆ, ಶ್ರೀಮಾತೆಯವರನ್ನು ಮಹಾಕಾಳಿ ರೂಪದಲ್ಲಿ ಅಥವಾ ಅಲೌಕಿಕ ಮತ್ತು ಸರ್ವಾಂತರ್ಯಾಮಿ ಮಾತೆಯನ್ನಾಗಿ ನೋಡುತ್ತೇನೆ. ಆದರೆ ನಾನು ಅವರನ್ನು ಶ್ವೇತ ವರ್ಣದಲ್ಲಿ ಕಾಣುತ್ತೇನೆ. ಕಾಳಿ ಮಾತೆಯ ವರ್ಣವು ಕಪ್ಪಾಗಿದ್ದುದರಿಂದ ಅವಳನ್ನು ಶ್ಯಾಮಾ ಎಂದು ಕರೆಯುತ್ತಾರೆ ಎನ್ನುವುದು ನನಗೆ ಗೊತ್ತು, ಆದರೆ ನನಗೆ ಅವಳು ಕಂಡದ್ದು ಶ್ವೇತ ವರ್ಣದಲ್ಲಿ. ಇದು ಏಕೆ?*

ಮಹಾಕಾಳಿ ಮತ್ತು ಕಾಳಿ ಇಬ್ಬರೂ ಒಂದೇ ಅಲ್ಲ, ಕಾಳಿ ಸ್ವರೂಪವು ಕೊಂಚ ಕಡಿಮೆ ಪ್ರಭಾವದ ಸ್ವರೂಪ. ಉನ್ನತ ಸ್ತರಗಳಲ್ಲಿ ಮಹಾಕಾಳಿಯು ಸುವರ್ಣ ವರ್ಣದಲ್ಲಿ ಗೋಚರಿಸುತ್ತಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/68**

ಮಹೇಶ್ವರಿಯ ಸಹಜ ಸ್ಥಾನವು ಮನಸ್ಸಿಗಿಂತ ಮೇಲಿನ ಉನ್ನತ ಪ್ರಜ್ಞೆಯಲ್ಲಿದೆ, ಏಕೆಂದರೆ ಅವಳು ದೈವಿಕದ ವಿಶಾಲತೆ ಮತ್ತು ವ್ಯಾಪಕತೆ ಮತ್ತು ವಿವೇಕವಾಗಿದ್ದಾಳೆ. ಮಹಾಕಾಳಿಯು, ಶಕ್ತಿ ಹಾಗೂ ಪ್ರಾಬಲ್ಯದ ಸಾಧನವಾದ ಉನ್ನತ ಪ್ರಾಣದ ಮುಖಾಂತರ ಅತ್ಯಂತ ಸಹಜವಾಗಿ ಕಾರ್ಯ ನಿರ್ವಹಿಸುತ್ತಾಳೆ. ಮಾಹಾಲಕ್ಷ್ಮಿಯು ಹೃದಯದ ಮುಖಾಂತರ ಕಾರ್ಯ ನಿರ್ವಹಿಸುತ್ತಾಳೆ – ನಿನ್ನ ವಿಷಯದಲ್ಲಿ, ಸದ್ಯಕ್ಕೆ, ಅವಳು ಮನಸ್ಸಿನ ಮುಖಾಂತರವೂ ಕಾರ್ಯ ನಿರ್ವಹಿಸುತ್ತಿದ್ದಾಳೆ, ಆದರೆ ಅದು ಅಷ್ಟು ಸಾಮಾನ್ಯವಲ್ಲ – ಸಾಮಾನ್ಯವಾಗಿ ಅವಳು ಮಹಾಸರಸ್ವತಿಯಾಗಿರುತ್ತಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/66 – ಶ್ರೀ ಅರವಿಂದರು**

**ಕಾಳಿ ಕದನ ಮತ್ತು ನ್ಯಾಯ**

ಭೂಮಿಯ ವಾತಾವರಣದಲ್ಲಿ ಭೌತಿಕ ವಿಷಯಗಳನ್ನು ನಿಭಾಯಿಸುವಂಥ ಒಬ್ಬ ಕಾಳಿಯು ನಿಜವಾಗಿಯೂ ಅಲ್ಲಿದ್ದಾಳೆ ಮತ್ತು ಆಕೆ ಸ್ವಲ್ಪ ಮಟ್ಟಿಗೆ ಸ್ವತಂತ್ರ (ಅಭಿವ್ಯಕ್ತಿ) ಎಂದು ಹೇಳಲಾಗದು, ಆದರೂ ಮಹಾಕಾಳಿಯ ಸಂಪೂರ್ಣ ಅಭಿವ್ಯಕ್ತಿ ಅಲ್ಲ; ಆದರೆ ಆಕೆ ಮಹಾಕಾಳಿಗೆ ಸಂಪೂರ್ಣವಾಗಿ ವಿಧೇಯಳಾಗಿದ್ದಾಳೆ ಮತ್ತು ಆಕೆಯ ಪ್ರಮುಖವಾದ ಗುಣಗಳನ್ನು ಹೊಂದಿದ್ದಾಳೆ. ಅವುಗಳು ಕಡಿಮೆ ಶಕ್ತಿ ಮತ್ತು ದಕ್ಷತೆಯನ್ನು ಹೊಂದಿವೆ, ಆದರೆ ಅವುಗಳು ಇನ್ನೂ ಅಸ್ತಿತ್ವದಲ್ಲಿವೆ, ಮತ್ತು ಆಕೆಯ ಸ್ವಭಾವದ ಸೌಂದರ್ಯ ಅಲ್ಲಿದೆ. ಬಹುಶಃ ನಿಮ್ಮಲ್ಲಿ ಕೆಲವರು ಆ ಮಹಾಕಾಳಿಯ ಜೊತೆ ಸಂಬಂಧಗಳನ್ನು ಹೊಂದಿರಬಹುದು. ಅವಳು ತನಗೆ ತಾನೇ ಪ್ರತೀಕಾರ ತೀರಿಸಿಕೊಳ್ಳುವುದಿಲ್ಲ, ತನ್ನನ್ನು ಪ್ರೀತಿಸುವವರಿಗೆ ಅವಳು ಎಂದಿಗೂ ಅಪಾಯ ಮಾಡುವುದಿಲ್ಲ, ಅವಳಿಗೆ ಸಾಕಷ್ಟು ಗೌರವ ಮತ್ತು ಪರಿಗಣನೆ ತೋರಿಸದ ದೇಶಗಳ ಮೇಲೆ ಸಾಂಕ್ರಾಮಿಕ ರೋಗಗಳನ್ನು ಹರಡುವುದಿಲ್ಲ. ಆದರೆ ಅವಳಿಗೆ ಹಿಂಸೆ ಎಂದರೆ ಇಷ್ಟ, ಅವಳಿಗೆ ಕದನವೆಂದರೆ ಇಷ್ಟ ಮತ್ತು ಅವಳ ನ್ಯಾಯ ನಶಿಸುವಂತಹದ್ದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/397**

ಎಲ್ಲ ವಿನಾಶಗಳ ಹಿಂದೆ, ಅದು ಪ್ರಕೃತಿಯ ಅಗಾಧ ವಿನಾಶಗಳಾದ ಭೂಕಂಪಗಳು, ಜ್ವಾಲಾಮುಖಿ ಸ್ಫೋಟಗಳು, ಚಂಡಮಾರುತಗಳು, ಪ್ರವಾಹಗಳು ಇತ್ಯಾದಿಗಳಾಗಿರಲಿ, ಅಥವಾ ಮಾನವನ ಹಿಂಸಾತ್ಮಕ ವಿನಾಶಗಳಾದ ಯುದ್ಧಗಳು, ಕ್ರಾಂತಿಗಳು,

ದಂಗೆಗಳಾಗಿರಲಿ, ನಾನು ಕಾಳಿಯ ಶಕ್ತಿಯನ್ನು ಕಾಣುತ್ತೇನೆ, ಅವಳು ಭೂಮಿಯ ವಾತಾವರಣದಲ್ಲಿ ಪರಿವರ್ತನೆಯ ಪ್ರಗತಿಯನ್ನು ತ್ವರಿತಗೊಳಿಸಲು ಕೆಲಸ ಮಾಡುತ್ತಿದ್ದಾಳೆ.

*

ಅದು ಸಾರವಸ್ತುವಿನಲ್ಲಿ ದೈವಿಕವಾಗಿರುವುದು ಮಾತ್ರವಲ್ಲದೆ ಸಾಕ್ಷಾತ್ಕರದಲ್ಲಿಯೂ ದೈವಿಕವಾಗಿರುವಂಥದ್ದು, ಅದರ ಸ್ವಭಾವದಿಂದಲೇ ಈ ನಾಶಗಳಿಗಿಂತ ಮೇಲಿದೆ ಮತ್ತು ಅವುಗಳಿಂದ ಸ್ಪರ್ಶಿಸಲಾಗುವುದಿಲ್ಲ. ಹೀಗೆ, ವಿಪತ್ತಿನ ಪ್ರಮಾಣವು ಅಪೂರ್ಣತೆಯ ಪರಿಮಾಣವನ್ನು ನೀಡುತ್ತದೆ.

*

ಈ ವಿನಾಶಗಳು ಮತ್ತೆ ಮತ್ತೆ ಆಗದಂತೆ ತಡೆಯಲು ನಿಜವಾದ ಮಾರ್ಗ ಯಾವುದೆಂದರೆ, ಅವುಗಳಿಂದ ಪಾಠ ಕಲಿತು ಅಗತ್ಯವಾದ ಪ್ರಗತಿಯನ್ನು ಸಾಧಿಸುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/17** **– ಶ್ರೀಮಾತೆ**

### ಮಹಾಕಾಳಿಯ ಕ್ರೋಧ

*ನನ್ನ ಪ್ರೀತಿಯ ಮಾತೆಯವರೆ, ಆಶ್ರಮದಲ್ಲಿ ಒಂದು ಪ್ರತಿಕೂಲ ಶಕ್ತಿ ಇದೆ, ಅದು ಒಬ್ಬ ಆಶ್ರಮವಾಸಿಯಿಂದ ಇನ್ನೊಬ್ಬ ಆಶ್ರಮವಾಸಿಗೆ ಹೋಗುತ್ತದೆ ಮತ್ತು ಅದು ಕೇವಲ ವಿನಾಶವನ್ನು ಬಯಸುತ್ತದೆ. ಆಶ್ರಮವಾಸಿಗಳು ಆಶ್ರಮವನ್ನು ಬಿಟ್ಟು ಹೋದಾಗ, ಅದು ಹೋಗುವುದಿಲ್ಲ; ಅದು ಕೇವಲ ಹೆಚ್ಚು ಹಿಂಸಾತ್ಮಕವಾಗುತ್ತದೆ. ಆಶ್ರಮವಾಸಿಗಳು ನಂಬಿಕೆ ಮತ್ತು ಪ್ರಾಮಾಣಿಕತೆಯಿಂದ ಇದ್ದರೆ, ಅದು ಒಂದೇ ಕ್ಷಣದಲ್ಲಿ ತೊಲಗಲೇಬೇಕು.*

*ಈ ಹಠಮಾರಿ ಶಕ್ತಿಯನ್ನು ಓಡಿಸಲು ಮತ್ತು ಆಶ್ರಮವನ್ನು ನಮ್ಮ ದಿನನಿತ್ಯದ ತೊಂದರೆಯಿಂದ ಮುಕ್ತಗೊಳಿಸಲು, ಮಹಾಕಾಳಿಯ ಕ್ರೋಧವನ್ನು, ಯೋಧಳಾದ ಮಾತೆಯ ತೀವ್ರವಾದ ಪ್ರೀತಿಯನ್ನು ನಾನು ಕೇಳುತ್ತೇನೆ.*

ಮಹಾಕಾಳಿಯ ಕೋಪವು ಕಾಲಕಾಲಕ್ಕೆ ಪ್ರಕಟಗೊಳ್ಳುತ್ತದೆ ಮತ್ತು ಸರಿಯಾಗಿ ಕಾರ್ಯ ನಿರ್ವಹಿಸುತ್ತದೆ, ಆದರೆ ಅದರ ಪರಿಣಾಮವು ಹೆಚ್ಚು ಕಾಲ ಉಳಿಯುವುದಿಲ್ಲ,

ಏಕೆಂದರೆ ಪ್ರತಿಕೂಲ ಶಕ್ತಿಗಳಿಗೆ ಪ್ರತಿಕ್ರಿಯಿಸುವವರು ನಿಜವಾಗಿಯೂ ಗುಣವಾಗಲು ಬಯಸುವುದಿಲ್ಲ. ಅವರು ಪ್ರಮಾಣಿಕರಾಗಿಲ್ಲ.

ನಾವು ಮಾತ್ರ ಶಾಂತಿಯಿಂದ ಮತ್ತು ವಿಶ್ವಾಸದಿಂದ ಇರಬೇಕು, ದೈವೀ ಅನುಗ್ರಹದಲ್ಲಿ ನಮ್ಮ ನಂಬಿಕೆ ಮತ್ತು ಭರವಸೆಯು ಅಚಲವಾಗಿರಬೇಕು.

*

*ದೈವೀ ಅನುಗ್ರಹವು ಆಗಮನವಾಗುತ್ತಿರುವ ಸಂಕೇತಗಳು ಯಾವವು? ಸಾಧಕನು ಜವಾಬ್ದಾರಿಯನ್ನು ಕೊಟ್ಟ ತಕ್ಷಣ ದೈವೀ ಅನುಗ್ರಹವು ಸಾಧನೆಯ ಪೂರ್ಣ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತದೆಯೇ? ಇಲ್ಲದಿದ್ದರೆ, ಅದು ಪೂರ್ಣ ಜವಾಬ್ದಾರಿಯನ್ನು ತೆಗೆದುಕೊಳ್ಳುವುದು ಯಾವಾಗ?*

ಅವನು ನಿಜವಾಗಿಯೂ ಪೂರ್ಣ ಜವಾಬ್ದಾರಿಯನ್ನು ಸಂಪೂರ್ಣ ಶರಣಾಗತಿ ಮಾಡುವ ನಿಷ್ಠೆಯೊಂದಿಗೆ ಕೊಟ್ಟಾಗ ಮತ್ತು ದೈವೀ ಅನುಗ್ರಹಕ್ಕೆ ಅಡ್ಡಿಯಾಗದಿದ್ದಾಗ. ಎಷ್ಟು ಜನ ಅದನ್ನು ಮಾಡಬಹುದು? ಇದನ್ನು ಕೇವಲ ಒಂದು ಪದದಿಂದ ಅಥವಾ ಮಾನಸಿಕ ಭಂಗಿಯನ್ನು ತೆಗೆದುಕೊಳ್ಳುವುದರಿಂದ ಮಾಡಲು ಸಾಧ್ಯವಿಲ್ಲ.

ದೇವರನ್ನು ಕರೆದು ಎಲ್ಲಾ ಕೆಲಸ ಮಾಡಿಸಿಕೊಳ್ಳಲು ಮತ್ತು ಎಲ್ಲಾ ತೊಂದರೆಗಳು ಮತ್ತು ಹೆಣಗಾಟಗಳಿಂದ ನಮ್ಮನ್ನು ರಕ್ಷಿಸಲು ಕೇಳುವುದು ಸ್ವಯಂ ವಂಚನೆಯಾಗಿದೆ ಮತ್ತು ಅದು ಸ್ವಾತಂತ್ರ್ಯ ಮತ್ತು ಪರಿಪೂರ್ಣತೆಯ ಕಡೆಗೆ ಕರೆದೊಯ್ಯುವುದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/107**

**ಕಾಳಿಯ ಶಕ್ತಿ**

*ಜನ ನಿಮ್ಮ ವಿರುದ್ಧ ಮಾತನಾಡಿದಾಗ, ನನ್ನಲ್ಲಿ ಹಲವಾರು ನಾಲಿಗೆಗಳಿಂದ ಒಂದು ದೊಡ್ಡ ಜ್ವಾಲೆಯು ಉದ್ಭವಿಸುತ್ತಿರುವಂತೆ ಅನಿಸುತ್ತದೆ ಮತ್ತು ಮುಂದೆ ಇರುವ ವ್ಯಕ್ತಿಯು ನಮ್ರನಾಗುತ್ತಾನೆ.*

ನೀವು ಆಹ್ವಾನ ಮಾಡುತ್ತಿರುವುದು ಕಾಳಿಯ ಶಕ್ತಿಯಾಗಿರಲೇಬೇಕು.

*

*ನಾನು, ಎಕ್ಸ್ (X) ಅವರು ಶ್ರೀ ಅರಬಿಂದೋ ಅವರ ಬಗ್ಗೆ ಬರೆದ ಪತ್ರದಲ್ಲಿರುವ ವಿಚಾರಶೂನ್ಯತೆ ಮತ್ತು ಅಸಭ್ಯತೆಯ ಬಗ್ಗೆ ನನ್ನ ಪ್ರತಿಕ್ರಿಯೆಗೆ ಸಂಬಂಧಿಸಿದ ಒಂದು ಪ್ರಶ್ನೆಯನ್ನು ಕೇಳಲು ಬಯಸುತ್ತೇನೆ. ಬಹಳ ವರ್ಷಗಳ ಹಿಂದೆ ನನ್ನ ಗೆಳತಿಯೋರ್ವಳು ನಿಮ್ಮಿಬ್ಬರ ಬಗ್ಗೆ ಅಸಭ್ಯವಾಗಿ ಮಾತನಾಡಿದ ಒಂದು ಸಂದರ್ಭ ನನಗೆ ನೆನಪಿದೆ. ನಾನು ತಕ್ಷಣವೇ ಅವಳನ್ನು ಮಾತಿನಿಂದ ತಡೆದೆ, ಆದರೆ ನನ್ನೊಳಗಿನ ಕೋಪವು ಉರಿಯುತ್ತಲೇ ಇತ್ತು. ಇದು ನನ್ನ ಎದೆಯಿಂದ ಪುಟಿಯುವ ಅಗ್ನಿಯ ಕತ್ತಿಯ ಹಾಗೆ ಇತ್ತು, ಇದು ಗಂಟೆಗಳ ಕಾಲ ಸ್ಫುರಿಸುತ್ತಲೇ ಇತ್ತು. ನನ್ನ ಮನಸ್ಸು ಅದನ್ನು ಸರಿಯಾಗಿ ನಿರ್ದೇಶಿಸಲು ಮಾತ್ರ ಸಹಾಯ ಮಾಡಿತು; ನಿಜವಾದ ಹಾನಿಯಲ್ಲಿ ಅದರ ಪಾತ್ರ ಸಣ್ಣದಾಗಿತ್ತು. ಮರುದಿನ ಆ ಮಹಿಳೆಯಲ್ಲಿ ಭಯಾನಕವಾದ ಅತಿಸಾರ ಕಾಯಿಲೆಯು ಕಾಣಿಸಿಕೊಂಡಿತು.*

*ನಿನ್ನೆ ವಾಯ್ (Y) ಅವರ ಪತ್ರವನ್ನು ಓದಿದಾಗ, ನನ್ನ ಎದೆಯಿಂದ ಇದೇ ರೀತಿಯ ಉರಿಯು ಹೊರ ಬರಲು ಶುರುವಾಯಿತು. ಅದನ್ನು ಅವರ ಪತ್ರಿಕೆಯತ್ತ ತಿರುಗಿಸಿ, ಅದರ ಭವಿಷ್ಯವನ್ನು ಬೂದಿ ಮಾಡುವಂತೆ ಮಾಡುವಲ್ಲಿ ನನಗೆ ಯಾವುದೇ ಸಂಕೋಚವಿರಲಿಲ್ಲ. ಆದರೆ Y ನನ್ನು ನಾಶಗೊಳಿಸಲೆಂಬಂತೆ ನಾನು ಅವನ ಮೇಲೆ ದಾಳಿ ಮಾಡಿದರೂ, ನಾನು ಆ ಉಗ್ರವಾದ ಆಕ್ರಮಣವನ್ನು ಪ್ರೋತ್ಸಾಹಿಸಲಿಲ್ಲ. ನಾನು ಹೀಗೆ ಒಬ್ಬ ವ್ಯಕ್ತಿಯ ಮೇಲೆ ದಾಳಿ ಮಾಡೋದು ಸರಿಯೇ ಎಂದು ಯೋಚಿಸಲು ಶುರು ಮಾಡಿದೆ. ಕೆಲವೊಮ್ಮೆ, ನಾನು ಮಾಡಿದ್ದನ್ನು ಸಂಪೂರ್ಣವಾಗಿ ಸಮರ್ಥಿಸಲ್ಪಟ್ಟಿರುವೆನೆಂದು ಭಾವಿಸಿದೆ. ಮತ್ತೊಮ್ಮೆ, ನಾನು ನನ್ನ ಅಗ್ನಿಯ ಕತ್ತಿಯನ್ನು ನಿಮಗೆ ಮತ್ತು ಶ್ರೀ ಅರವಿಂದರಿಗೆ ಅರ್ಪಿಸಬೇಕೆಂದು ಮತ್ತು ನನ್ನನ್ನು ನಾನು Y ನ ಕಡೆಗೆ ಕೇಂದ್ರೀಕೃತವಾಗಿ ನಿರ್ದೇಶಿಸುವ ಬದಲು ಅದನ್ನು ನೀವಿಬ್ಬರೂ ಬಳಸಲು ಬಿಟ್ಟುಬಿಡಬೇಕೆಂದು ನನಗೆ ಅನಿಸಿತು. ನೀವು ನನಗೆ ಕೆಲವು ಮಾರ್ಗದರ್ಶಿ ಮಾತುಗಳನ್ನು ಹೇಳಿದರೆ ನಾನು ಕೃತಜ್ಞನಾಗಿರುತ್ತೇನೆ. ದಯವಿಟ್ಟು ನೆನಪಿಡಿ ನಾನು ಕೇವಲ ಕೋಪದ ಸಿಡಿತದ ಬಗ್ಗೆ ಮಾತನಾಡುತ್ತಿಲ್ಲ: ಅಲ್ಲಿ ಏನೋ ಒಂದು ಬಲವಿದೆ ಎಂದು ತೋರುತ್ತದೆ, ಅದು ನಾಶಪಡಿಸಲು ಬಯಸುತ್ತದೆ ಮತ್ತು ಅದಕ್ಕೆ ನಾಶಪಡಿಸುವ ಶಕ್ತಿ ಇದೆ ಎಂದು ಭಾವಿಸುತ್ತದೆ. ನಾನು ನನ್ನ ಸ್ವಂತ ಗುಟ್ಟಾದ ಉದ್ದೇಶಗಳಿಗಾಗಿ ಅದನ್ನು ಬಳಸುವ ಬಗ್ಗೆ ಖಂಡಿತಾ ಯೋಚಿಸಲ್ಲ.*

ಈ ಬೆಂಕಿಯನ್ನು ನಿಮ್ಮಲ್ಲಿ ಹೊತ್ತಿಸಿ ನಿರ್ದೇಶ ಮಾಡುತ್ತಿರುವುದು ಸ್ಪಷ್ಟವಾಗಿ ಕಾಳಿಯ ಶಕ್ತಿಯ ಕೆಲಸವಾಗಿದೆ. ಅದರ ಕ್ರಿಯೆಯಲ್ಲಿ ಏನೂ ದೋಷವಿಲ್ಲ; ಅದು ನಿಮಗೆ ವೈಯಕ್ತಿಕವಾಗಿ ಬರುವ ಕೋಪವಲ್ಲ ಆದರೆ ಒಂದು ದೈವೀ ಪ್ರಭಾವದ ಕ್ರೋಧವಾಗಿದೆ ಮತ್ತು ಅದು ಕೆಲಸ ಮಾಡಲು ಅವಕಾಶ ಕೊಡಬೇಕು; ವಾಸ್ತವವಾಗಿ, ನೀವು ಅದನ್ನು ನಿಲ್ಲಿಸ ಬಯಸಿದರೂ, ಅದು ನಿಮ್ಮಲ್ಲಿ ಉರಿಯುವುದನ್ನು ನೀವು ನಿಲ್ಲಿಸಲು ಸಾಧ್ಯವಿಲ್ಲ ಅಂತ ನಾನು ಭಾವಿಸುತ್ತೇನೆ. ಈ ಮನುಷ್ಯನು ಇದನ್ನು ತಾನೇ ತನ್ನ ಮೇಲೆ ಎಳೆದುಕೊಂಡಿದ್ದಾನೆ ಮತ್ತು ಏನು ಸಂಭವಿಸುತ್ತಿದೆಯೋ ಅದರಲ್ಲಿ ತಪ್ಪೇನೂ ಇಲ್ಲ, ಅವನು ಮಾತ್ರ ಜವಾಬ್ದಾರನಾಗಿರುತ್ತಾನೆ. ಖಂಡಿತವಾಗಿ, ಇದನ್ನು ಯಾವುದೇ ವೈಯಕ್ತಿಕ ಉದ್ದೇಶಕ್ಕಾಗಿ ಅಥವಾ ಯಾವುದೇ ಸ್ವ–ಸಂಬಂಧದ ರೀತಿಯಲ್ಲಿ ಉಪಯೋಗಿಸಬಾರದು.

*

**ಸ್ಪಂದನಶೀಲ ಮತ್ತು ಕ್ರಿಯಾಶೀಲ ಪ್ರೀತಿ**

ಶ್ರೀಮಾತೆಯ ಎಲ್ಲ ಸ್ವರೂಪಗಳಲ್ಲಿ ಕಾಳಿ ಮಾತೆಯು ಅತ್ಯಂತ ಪ್ರಭಾವಿಯಾಗಿ ಸ್ಪಂದನಶೀಲ ಹಾಗೂ ಕ್ರಿಯಾಶೀಲ ಪ್ರೀತಿಯನ್ನು ವ್ಯಕ್ತಪಡಿಸುತ್ತಾಳೆ, ಮತ್ತು ಯಾವಾಗಲೋ ತೋರುವ ಅವಳ ಭಯಾನಕ ರೂಪದ ಹೊರತಾಗಿಯೂ, ಅವಳು ತನ್ನೊಳಗೆ ಸರ್ವಶಕ್ತಿಯುತ ಪ್ರೀತಿಯ ಸುವರ್ಣ ವೈಭವವನ್ನು ಹೊಂದಿದ್ದಾಳೆ.

*

ಕಾಳಿ ಮಾತೆಯು ಮಾನಸದಲ್ಲಿ ಅಪರೂಪವಾಗಿ ಕಾರ್ಯ ಮಾಡುತ್ತಾಳೆ. ಉನ್ನತ ಕ್ಷೇತ್ರಗಳಲ್ಲಿ ಅವಳು ಪ್ರಗತಿ ಮತ್ತು ಪರಿವರ್ತನೆಯ ಕಡೆಗೆ ತಳ್ಳುವಂಥ ಪ್ರೀತಿಯ ಶಕ್ತಿಯಾಗಿದ್ದಾಳೆ; ಪ್ರಾಣದಲ್ಲಿ ಅವಳು ಮಿಥ್ಯೆ, ಕಪಟತೆ ಮತ್ತು ಕೆಟ್ಟ ಬಯಕೆಯನ್ನು ನಾಶಮಾಡುವ ಶಕ್ತಿಯಾಗಿದ್ದಾಳೆ.

ಒಳ್ಳೆಯದಾದ, ಸತ್ಯವಾದ ಮತ್ತು ಪ್ರಗಶೀಲವಾದ ಎಲ್ಲ ವಿಷಯಗಳನ್ನು ಅವಳು ಎಂದಿಗೂ ನಾಶ ಮಾಡುವುದಿಲ್ಲ. ಅದಕ್ಕೆ ಪ್ರತಿಯಾಗಿ, ಅವಳು ಅದನ್ನು ರಕ್ಷಿಸುತ್ತಾಳೆ ಮತ್ತು ಬೆಂಬಲಿಸುತ್ತಾಳೆ.

*

*ಅಮ್ಮಾ, ಶ್ರೀ ಅರವಿಂದರು ತಮ್ಮ "ದ ಮದರ್" (The Mother) ಎನ್ನುವ ಪುಸ್ತಕದಲ್ಲಿ ವಿವರಿಸಿರುವ ಶ್ರೀಮಾತೆಯ ನಾಲ್ಕು ರೂಪಗಳ ಬಗ್ಗೆ ಸ್ಪಷ್ಟವಾದ ಚಿತ್ರಣವನ್ನು ಹೊಂದಲು ನನಗೆ ದಯವಿಟ್ಟು ಸಹಾಯ ಮಾಡಿ.*

ಅತಿಮಾನಸದ ಮೇಲಿನ ಅವರ ಅಂಶದಲ್ಲಿ, ಉನ್ನತ ಕ್ಷೇತ್ರಗಳಲ್ಲಿ, ಶ್ರೀಮಾತೆಯವರ ಅಂಶಗಳು ತುಂಬಾ ಸರಳವಾದ ರೂಪಗಳನ್ನು ಹೊಂದಿವೆ ಮತ್ತು ಅವುಗಳು ಅನೇಕ ಅಂಗಾಂಗಗಳನ್ನು ಹೊಂದಿರುವುದಿಲ್ಲ.

ಎಲ್ಲ ವಿವರಗಳು ಮತ್ತು ತೊಡಕುಗಳು, ಕಣ್ಣಿಗೆ ಕಾಣದ ಗುಣಲಕ್ಷಣಗಳನ್ನು ಸಾಂಕೇತಿಕ ರೀತಿಯಲ್ಲಿ ವ್ಯಕ್ತಮಾಡುವ ಸಲುವಾಗಿ ಬಹುಶಃ ಮನುಷ್ಯರು ಸೇರಿಸಿದ ತೋರಿಕೆಗಳಾಗಿವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/15–17**

## ದೈವೀ ಪ್ರೇಮ ದಳಗಳು

ಸೃಷ್ಟಿಯಲ್ಲಿ ಮಹಾಕಾಳಿಯು ದೈವೀ ಪ್ರೀತಿಯನ್ನು ವ್ಯಕ್ತಪಡಿಸುತ್ತಾಳೆ; ಆದರೆ ಈ ಪ್ರೀತಿಯು ಎಷ್ಟು ಶಕ್ತಿಶಾಲಿ ಮತ್ತು ಉನ್ನತವಾಗಿದೆ ಎಂದರೆ ಬಹಳಷ್ಟು ಜನರು ಅದಕ್ಕೆ ಭಯಪಡುತ್ತಾರೆ.

## ದೈವೀ ಪ್ರೇಮದ ದಳಗಳು

*ಈ ಕಾಳಿ ಪೂಜೆಯ ದಿನದಂದು ನೀವು ನಮಗೆ ಮಹಾಕಾಳಿಯಾಗಿ ಕಾಣಿಸಿಕೊಳ್ಳುವಾಗ, ನನ್ನ ಹೃದಯದಲ್ಲಿ ಒಂದು ಪ್ರಾರ್ಥನೆ ಉಕ್ಕಿ ಬರುತ್ತದೆ: ಮಹಾಕಾಳಿಯ "ಪ್ರಹಾರಗಳು (ನಮ್ಮ) ಐಹಿಕದಲ್ಲಿ ಬಂಡಾಯವೇಳುವಂಥದ್ದನ್ನು ಶಕ್ತಿ ಮತ್ತು ಪರಿಪೂರ್ಣ ಸತ್ಯವನ್ನಾಗಿ ಮಾರ್ಪಡಿಸುತ್ತವೆ, ವಿಕೃತವಾದದ್ದನ್ನು ನೇರವಾಗಿ ಸದೆಬಡಿಯುತ್ತವೆ ಮತ್ತು ಅಶುದ್ಧ ಹಾಗೂ ದೋಷಪೂರಿತವಾದದ್ದನ್ನು ಹೊರಹಾಕುತ್ತವೆ" ಎಂದು ನಾನು ಅರ್ಥೈಸಿಕೊಳ್ಳಬಹುದೇ.*

ನನ್ನ ಪ್ರೀತಿಯ ಮಗು, ಈ ರಾತ್ರಿ ನಾನು ದೈವೀ ಪ್ರೇಮದ ಹೂವಿನ ದಳಗಳನ್ನು ಕೊಟ್ಟೆ, ಯಾಕೆಂದರೆ ಮಹಾಕಾಳಿಗೆ ತನ್ನ ಮಕ್ಕಳ ಮೇಲೆ ಇರುವ ಪ್ರೀತಿಗಿಂತ ದೊಡ್ಡ ಪ್ರೀತಿ ಬೇರೆ ಯಾವುದೂ ಇಲ್ಲ.

# ಮಹಾಕಾಳಿಯ ವರ್ಣನೆಗಳು

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

**ಮಹಾಕಾಳಿಯ ಸುವರ್ಣ ಪ್ರಕಾಶ**

*ಇಂದು ಪ್ರಣಾಮ ಕಾಲದಲ್ಲಿ ಒಂದು ಚಿನ್ನದ ತಂತುವಿನ ರೀತಿಯಲ್ಲಿರುವ ಬೆಳಕು ಶ್ರೀಮಾತೆಯವರಿಂದ ನನ್ನ ಬಳಿಗೆ ಬರುತ್ತಿರುವುದನ್ನು ನೋಡಿದೆ. ಆದರೆ ಸ್ವಲ್ಪ ಕಾಲದಲ್ಲಿಯೇ ಅದು ಕಾಣದಾಯಿತು. ಆಕೆಯು ಮೆಟ್ಟಿಲು ಇಳಿದು ಬರುವ ಮೊದಲು ತಾರಸಿ ಮಾಡಿನ ಮೇಲೆ ನಿಂತಿರುವಾಗ ಒಮ್ಮೆ ನಾನು ಈ ಪ್ರಕಾಶವನ್ನು ಬಹಳ ಸ್ಪಷ್ಟವಾಗಿ ನೋಡಿದೆ. ಇದು ಆಂತರ್ಯದ ಬೆಳಕೇ? ಅಥವಾ ಬಾಹ್ಯದ ಬೆಳಕೇ? ನಾನು ಬಹಳ ಕಡಿಮೆ ಸಮಯ ಅದನ್ನು ನೋಡಿದುದರಿಂದ, ನನಗೆ ನನ್ನ ಕಣ್ಣುಗಳನ್ನೇ ನಂಬಲಾಗುತ್ತಿಲ್ಲ.*

ಸಾಮಾನ್ಯ ಮನಸ್ಸಿನ ಮೇಲಿನ ಉನ್ನತ ಸ್ತರಗಳ ದಿವ್ಯ ಸತ್ಯದ ಬೆಳಕಾಗಿದೆ ಸುವರ್ಣ ಪ್ರಕಾಶ – ಅದು ಮೂಲದಲ್ಲಿ ಸುಪ್ರಮಾನಸದ ಪ್ರಕಾಶವಾಗಿದೆ. ಅದು ಮನಸ್ಸಿನ ಮೇಲಿರುವ ಮಹಾಕಾಳಿಯ ಬೆಳಕೂ ಸಹ ಆಗಿದೆ. ಶ್ವೇತ ಪ್ರಕಾಶದ ರೀತಿಯಲ್ಲಿ ಶ್ರೀಮಾತೆಯುವರಿಂದ ಸುವರ್ಣ ಪ್ರಕಾಶವೂ ಸಹ ಆಗಾಗ ಹೊರಹೊಮ್ಮುತ್ತಿರುವುದನ್ನು ಕಾಣಬಹುದು.

*

ಉನ್ನತ ದಿವ್ಯ ಸತ್ಯದ ಬೆಳಕಿನ ಒಂದು ಗೆರೆಯಾಗಿದೆ ಈ ಸುವರ್ಣ ಪ್ರಕಾಶದ ಗೆರೆ. ಹೃದಯಾಕಾಶದ ಸುತ್ತಲೂ ಇದು ವ್ಯಾಪಿಸಿದೆ. ಆಕಾಶದೊಳಗಡೆಗೆ ಒತ್ತುತ್ತಿರುವ ಶ್ರೀಮಾತೆಯ ಪ್ರಕಾಶವೇ ವಜ್ರ ಪುಂಜ. ಆದುದರಿಂದ ಚೈತ್ಯ–ಭಾವನಾತ್ಮಕ ಕೇಂದ್ರದ ಮೇಲೆ ಕೆಲಸ ಮಾಡುತ್ತಿರುವ ಈ ಶಕ್ತಿಗಳ ಸಂಕೇತವೇ ಅದಾಗಿದೆ.

*

*ಒಂದು ರಾತ್ರಿಯಲ್ಲಿ ಮೇಲಿನಿಂದ ವಿಸ್ತಾರವಾದೊಂದು ಬೆಳಕು, ಹಳದಿ ಮಿಶ್ರಿತ ಬಿಳುಪಿನ ಬಣ್ಣ, ಶಾಂತ ಹಾಗೂ ಸಮಾಧಾನಕರವಾಗಿ ಕೆಳಗೆ ಬರುತ್ತಿರುವದು ನನಗೆ ಕಾಣಿಸಿತು. ಇದು ಉನ್ಮನಿಯ ಚೇತನದ ಬೆಳಕೇ ಅಥವಾ ಮತ್ತಿನ್ಯಾವುದೋ ಆಧ್ಯಾತ್ಮಿಕ ಚೇತನದ ಬೆಳಕೇ?*

*ಅದು ಹಳದಿ ಛಾಯೆಯನ್ನು ಅವಲಂಬಿಸಿದೆ. ಅದು ಸ್ವರ್ಣ ಶ್ವೇತವಾಗಿದ್ದರೆ, ಅದು ಮನಸ್ಸಿನ ಮೇಲಿನಿಂದ ಬಂದಿರುವುದು. ಮತ್ತು ಈ ಜೋಡಣೆಯು ಮಹೇಶ್ವರಿ–ಮಹಾಕಾಳಿ ಶಕ್ತಿಯನ್ನು ಸೂಚಿಸುತ್ತದೆ. ಉನ್ಮನಿಯ ಬಣ್ಣವು ಮಸುಕು ನೀಲಿ ವರ್ಣ.*

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/267–68**

**ಕೃಷ್ಣನ ಬೆಳಕು**

ನಿರ್ದಿಷ್ಟ ಶಕ್ತಿಗಳ ಕ್ರಿಯೆಯನ್ನು ಪ್ರಕಾಶಗಳು ಸೂಚಿಸುವವು. ಸಾಮಾನ್ಯವಾಗಿ ಬೆಳಕಿನ ಬಣ್ಣದಿಂದ ಅವು ಸೂಚಿಸಲ್ಪಡುವವು. ಶ್ವೇತ ವರ್ಣ ಮಿಶ್ರಿತ ನೀಲಿಯನ್ನು ಶ್ರೀ ಅರವಿಂದರ ಬೆಳಕು ಅಥವಾ ಶ್ರೀ ಕೃಷ್ಣನ ಬೆಳಕೆಂದು ಕರೆಯಲಾಗುವುದು.

*

ನನ್ನ ಅಥವಾ ಶ್ರೀ ಕೃಷ್ಣನ ಬೆಳಕಾಗಿದೆ ಶ್ವೇತ ಮಿಶ್ರಿತ ನೀಲಿ. ಆಳವಾದ ನೀಲಿಗಳು ಸಾಮಾನ್ಯವಾಗಿ ಉನ್ನತ ಚೇತನದ ಬೆಳಕನ್ನು ಸೂಚಿಸುವವು.

*

ನೀಲಿ ಬೆಳಕಿನ ಅರ್ಥವು ಅದರ ವರ್ಣದ ನಿಖರ ಗುಣ ವಿಶೇಷ, ಅದರ ಛಾಯೆ ಮತ್ತು ಸ್ವಭಾವವನ್ನು ಅವಲಂಬಿಸಿದೆ. ಕೃಷ್ಣನ ಬೆಳಕು ಅಥವಾ ಶ್ರೀ ಅರಬಿಂದೋರವರ ಬೆಳಕೆಂದು ಚಂದ್ರನ ಬೆಳಕಿನಂತಿರುವ ಶ್ವೇತ ಮಿಶ್ರಿತ ನೀಲಿಯನ್ನು ಕರೆಯಲಾಗುವುದು. ಸಾಮಾನ್ಯವಾಗಿ ಪ್ರಕಾಶಿತ ಮನಸ್ಸಿನದಾಗಿರುವದು ಮಸುಕಾದ ನೀಲಿ ಬಣ್ಣ. ಇನ್ನೊಂದು ಆಳವಾದ ನೀಲಿ ಬಣ್ಣವಿರುವುದು ಅದು ಉನ್ಮನಿಗೆ ಸಂಬಂಧಿತವಾದುದು; ಮತ್ತೊಂದು, ನೇರಳೆ ಬಣ್ಣಕ್ಕೆ ಸಮೀಪವಾದದ್ದು ಅದು ಪ್ರಾಣದ ಒಂದು ಶಕ್ತಿಯ ಬೆಳಕಾಗಿದೆ.

*

ವಿಭಿನ್ನ ಕೃಷ್ಣ ಪ್ರಕಾಶಗಳು ಇವೆ. – ಮಸುಕಾದ ವಜ್ರ ನೀಲಿ, ನಸು ಕೆನ್ನೆಲಿ, ಆಳವಾದ ನೀಲಿ.... ಮುಂತಾದವು. ಅದು ಪ್ರಕಟವಾಗುವ ಸ್ತರವನ್ನು ಅವಲಂಬಿಸಿದೆ.

*

ಅಧಿಮಾನಸದಲ್ಲಿಯ ಕೃಷ್ಣನ ಬೆಳಕು ವಜ್ರ ನೀಲಿಯಾಗಿದೆ.

*

ಕೃಷ್ಣನ ಬೆಳಕಿನ ಶ್ವೇತಭರಿತ ನೀಲಿ ಚಂದ್ರಮನ ಬೆಳಕು ಇರುವದು – ನಸು ಕೆನ್ನೀಲಿ ಬಣ್ಣದವು ಭಕ್ತಿಗಾಗಿ, ಭೌತಿಕ ಮನಸ್ಸಿನ ಆಳವಾದ ನೀಲಿ, ಉನ್ಮನಿಯ ಆಕಾಶ ನೀಲಿ ಮತ್ತು ಇನ್ನೂ ಅನೇಕ ಇರುವವು.

*

ಎಲ್ಲಾ ನೀಲಿಯೂ ಕೃಷ್ಣನ ಬೆಳಕಾಗಿಲ್ಲ.

*

ದಿವ್ಯ ಕೃಪೆಯ ಬೆಳಕು ಅಥವಾ ವರ್ಣವು ನಿಜಕ್ಕೂ ನೇರಳೆಯಾಗಿದೆ ಅದು ಕೃಷ್ಣನ ಅನುಗ್ರಹವು ಸಹ ಆಗಿದೆ.

*

ದೇಹಕ್ಕಿಂತಲೂ ತನ್ನದೇ ಸ್ತರದಲ್ಲಿ ಆಧ್ಯಾತ್ಮಿಕ ಶಕ್ತಿಯು ಸಹಜವಾಗಿ ಹೆಚ್ಚು ಸ್ವತಂತ್ರವಾಗಿದೆ. ಮಹಾಕಾಳಿಯ ಶಕ್ತಿಯನ್ನು ಇಲ್ಲಿ ಸ್ವರ್ಣ ವರ್ಣವು ಸೂಚಿಸುವದು. ಅದು ದೇಹದಲ್ಲಿ ಕೆಲಸ ಮಾಡಲು ಅತ್ಯಂತ ಬಲಿಷ್ಠವಾದುದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/126–130**

ಶ್ರೀಮಾತೆಯವರ ಪ್ರಕಾಶ ಶ್ವೇತ ವರ್ಣ – ಅದರಲ್ಲೂ ವಜ್ರ ಶ್ವೇತ. ಮಹಾಕಾಳಿಯ ರೂಪವು ಸಾಮಾನ್ಯವಾಗಿ ಸುವರ್ಣ. ಅತ್ಯಧಿಕ ಪ್ರಕಾಶಮಾನವಾಗಿದ್ದು ಬಲವಾದ ಸುವರ್ಣ ವರ್ಣವನ್ನು ಹೊಂದಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/267**

ಅದು ಸುವರ್ಣ ಶ್ವೇತವಾಗಿದ್ದರೆ ಮನಸ್ಸಿನ ಮೇಲಿನಿಂದ ಬರುವುದು ಮತ್ತು ಜೋಡಿಯು ಮಹೇಶ್ವರಿ–ಮಹಾಕಾಳಿಯ ಶಕ್ತಿಯನ್ನು ಸೂಚಿಸುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/268**

ಶ್ರೀ ಕೃಷ್ಣನು ಕೊಳಲಿನಿಂದೊಡಗೂಡಿರುವ ಬಾಲಕನಾಗಿದ್ದಾನೆ; ದಿವ್ಯ ಆನಂದದಿಂದ ಲೋಕ–ಕ್ರೀಡೆಯೊಳಗಡೆಗೆ ಭಗವಂತನು ಅವರೋಹಿಸಿರುವನು. ಕರೆಯ ಸಂಗೀತವಾಗಿದೆ ಆತನ ಕೊಳಲಿನ ಗಾನ. ಮರ್ತ್ಯ ಜೀವನದ ನಿಮ್ನ ಅಜ್ಞಾನಭರಿತ ಕ್ರೀಡೆಯನ್ನು ಪರಿವರ್ತನೆ ಮಾಡಲು ಮತ್ತು ಅದರ ಜಾಗದಲ್ಲಿ ಆತನ ದಿವ್ಯ ಆನಂದದ ಲೀಲೆಯನ್ನು ತಂದಿರಿಸಿ ದೃಢಪಡಿಸಲು ಬಯಸುತ್ತದೆ. ಕರೆಯನ್ನು ಆಲಿಸಿ ಅದರ ಹಿಂದೆ ಅನುಸರಿಸಿ ಚಲಿಸಿದ್ದು ನಿನ್ನೊಳಗಿನ ಚೈತ್ಯ ಸತ್ತೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/126**

ಕೃಷ್ಣನ ರಕ್ಷಣೆಯ ತೇಜಸ್ಸು ನೇರಳೆ. – ಅದರಿಂದಲೇ ಬಹಳ ಸಹಜವಾಗಿ, ಅದು ನಿನಗೆ ಶಾಂತಿಯ ಒಂದು ಭಾವವನ್ನು ತಂದಿದೆ. ಶ್ರೀಮಾತೆಯವರು ಹೇಳುತ್ತಾರೆ ಕೃಷ್ಣನೊಂದಿಗೆ ಇರುವಾಗ ಅದನ್ನು ಯಾವಾಗಲೂ ನೋಡುತ್ತಿದ್ದೆನೆಂದು. ಮತ್ತು ಈಗಲೂ ನಿರಂತರವಾಗಿ ಅದು ಆಶ್ರಮದ ಸುತ್ತಲೂ ವ್ಯಾಪಿಸಿದೆಯೆಂದು ಸಹ ಹೇಳುತ್ತಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/157**

ಮಹಾಕಾಳಿ ಮತ್ತು ಕಾಳಿ ಇಬ್ಬರು ಒಂದೇ ಅಲ್ಲ, ಕಾಳಿಯು ನಿಮ್ನ ರೂಪ. ಸ್ವರ್ಣ ವರ್ಣದೊಂದಿಗೆ ಸಾಮಾನ್ಯವಾಗಿ ಉನ್ನತ ಸ್ತರಗಳಲ್ಲಿ ಮಹಾಕಾಳಿಯು ಕಾಣಿಸಿಕೊಳ್ಳುವಳು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/460**

ನೀಲಿ ಮತ್ತು ಸುವರ್ಣ ಒಟ್ಟಿಗೆ ಕೃಷ್ಣ ಮತ್ತು ದುರ್ಗ–ಮಹಾಕಾಳಿಯರ ಒಗ್ಗೂಡಿದ ಸನ್ನಿಧಿಯ ಸೂಚಕವೆಂದು ನಾನು ಹೇಳಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/122**

ಕೃಷ್ಣ ಪ್ರಜ್ಞೆಯು ಒಂದು ನೈಜತೆ, ಕೃಷ್ಣನೇ ಇಲ್ಲದೆ ಇದ್ದಿದ್ದರೆ, ಕೃಷ್ಣ ಪ್ರಜ್ಞೆಯು ಇರಲು ಸಾಧ್ಯವೇ ಇಲ್ಲ.... ಕೃಷ್ಣನು ಒಂದು ಸತ್ತೆ, ಓರ್ವ ವ್ಯಕ್ತಿ ಮತ್ತು ದಿವ್ಯ ವ್ಯಕ್ತಿಯಾಗಿ

ನಾವು ಆತನನ್ನು ಭೇಟಿ ಮಾಡುತ್ತಿರುವೆವು. ಆತನ ಧ್ವನಿಯನ್ನು ಆಲಿಸುವೆವು, ಆತನೊಂದಿಗೆ ಮಾತನಾಡುವೆವು ಮತ್ತು ಆತನ ಸನ್ನಿಧಿಯನ್ನು ಅನುಭವಿಸುವೆವು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/482**

**ಶ್ರೀ ಅರವಿಂದೋರವರ ಪ್ರಕಾಶ**

ಕೃಷ್ಣನು ಸುಪ್ರಮಾನಸದ ಬೆಳಕಲ್ಲ. ಅಧಿಮಾನಸದ ಪರಮೋತ್ತಮ ದೈವದ ಅವರೋಹಣವೇ ಕೃಷ್ಣನ ಅವರೋಹಣವಾಗಿದೆ. ಅದೇ ಅತಿಮಾನಸ ಮತ್ತು ಆನಂದವನ್ನು ಕೆಳಗೆ ತರೆದಿದ್ದರೂ, ಅವುಗಳ ಅವರೋಹಣಕ್ಕೆ ಸಿದ್ಧತೆಯನ್ನು ಮಾಡುತ್ತಿದೆ. ಕೃಷ್ಣನು ಆನಂದಮಯನಾಗಿರುವನು. ಅಧಿಮಾನಸದ ಮೂಲಕ ಸಂಭವಿಸುವ ವಿಕಸನವನ್ನು ಆತನು ಆಧರಿಸುವನು. ಮತ್ತು ಅದನ್ನು ತನ್ನ ಆನಂದದ ಕಡೆ ಮುನ್ನಡೆಸುವನು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/499**

ಇಲ್ಲಿಯೂ ಸಹ ನಾವು ಕೃಷ್ಣನ ಬೆಳಕಿನ ಬಗ್ಗೆ ಮಾತನಾಡುವೆವು. – ಮನಸ್ಸಿನಲ್ಲಿಯ ಕೃಷ್ಣನ ಬೆಳಕು, ಪ್ರಾಣದಲ್ಲಿಯ ಕೃಷ್ಣನ ಬೆಳಕು; ಆದರೆ ಅದೊಂದು ವಿಶೇಷವಾದ ಬೆಳಕು – ಮನಸ್ಸಿನಲ್ಲಿ ಅದು ಸ್ಪಷ್ಟತೆಯನ್ನು ತರುವದು. ಮಾನಸಿಕ ದೋಷ, ಅಸ್ಪಷ್ಟತೆ ಮತ್ತು ಅಪಪ್ರಯೋಗಗಳಿಂದ ಬಿಡುಗಡೆಯನ್ನು ಉಂಟುಮಾಡುವುದು; ಪ್ರಾಣದಲ್ಲಿ ಅಪಾಯಕರವಾದ ವಿಷಯಗಳನ್ನು ಕಿತ್ತು ಹಾಕುವುದು ಮತ್ತು ಅದು ಇರುವ ಕಡೆಯಲ್ಲಿ ದಿವ್ಯ ಆನಂದ ಮತ್ತು ಸಂತಸಗಳು ಇರುವವು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/499 – ಶ್ರೀ ಅರವಿಂದರು**

**ಕಾಳಿಯ ಬಿಂಬಗಳನ್ನು ಉದ್ದೇಶಿಸಿದ ಕಥೆಗಳು**

*ಮಹಾಕಾಳಿಯನ್ನು ಉದ್ದೇಶಿಸಿ ಹೇಳಲಾಗುವ ಕಥೆಗಳು ನಿಜವಾದವೇ?*

ಯಾವ ಕಥೆಗಳು? ನನ್ನ ಮಗುವೇ, ನೂರಾರು ಕಥೆಗಳನ್ನು ಹೇಳಲಾಗುವುದು. ನೀನು ಯಾವ ಕಥೆಗಳ ಬಗ್ಗೆ ಮಾತನಾಡುತ್ತಿರುವೆ? ಯಾವ ಮಹಾಕಾಳಿ? ಪ್ರತಿಮೆಗಳು,

ಅಂದರೆ ಆಕೆಯ ಬಿಂಬಗಳೇ? ಇದು ಮಾನವರು ನೋಡುವ ವಿಧಾನ. ಆಕೆಯು ಹಾಗೆ ಇಲ್ಲ.

ತಮ್ಮ ಉನ್ನತ ಸತ್ಯದಲ್ಲಿ ಮೂಲಭೂತ ಸತ್ತೆಗಳು ಇವೆಯೆಂದು ನಾನು ನಿನಗೆ ಈಗಾಗಲೇ ಹೇಳಿರುವೆನಲ್ಲವೇ? ಮತ್ತು ಅವರು ಒಂದು ನಿರ್ದಿಷ್ಟ ರೀತಿಯವರು; ನಂತರ, ಅವರು ಹೆಚ್ಚು ಹೆಚ್ಚು ಭೌತಿಕ ಪ್ರದೇಶಗಳಲ್ಲಿ ಪ್ರಕಟವಾಗುತ್ತಿದ್ದಂತೆ, ಭೂಮಿಗೆ ಹೆಚ್ಚು ಹೆಚ್ಚು ಹತ್ತಿರದಲ್ಲಿ, ಅವರು ವಿಭಿನ್ನ ರೂಪಗಳನ್ನು ಹೊಂದುವರು ಮತ್ತು ಆಶ್ಚರ್ಯಕರವಾದ ರೀತಿಯಲ್ಲಿ ಅವರ ಸಂಖ್ಯೆಯು ಅಧಿಕವಾಗುವುದು. ನಿನಗೆ ಪ್ರಿಯವೆನಿಸಿದರೆ, ಇಲ್ಲಿ ಶ್ರೀ ಅರಬಿಂದೋರವರು ಹೇಳುವ ಸತ್ತೆಗಳು ಅತಿಮಾನಸಕ್ಕೆ ಸಮೀಪದಲ್ಲಿರುವ ಪ್ರದೇಶಗಳಿಗೆ ಸೇರಿದವರು, ಅವರು ಈಗಲೂ ಸುಪ್ರಮಾನಸ ಮೂಲದೊಂದಿಗೆ ಸ್ಪಷ್ಟ ಮತ್ತು ಪ್ರಜ್ಞಾಭರಿತ ಸಂಪರ್ಕವನ್ನು ಹೊಂದಿರುವರು. ಈ ಸತ್ತೆಗಳು ಶ್ರೀ ಅರಬಿಂದೋರವರು ಅಧಿಮಾನಸವೆಂದು ಕರೆಯುವ ಪ್ರದೇಶದಲ್ಲೂ ಪ್ರಕಟವಾಗುವರು. ಅಲ್ಲಿ ಆ ರೂಪವು ಹೆಚ್ಚು ಗುರುತಿಸಲ್ಪಡುವದು, ಸ್ವಲ್ಪ ಹೆಚ್ಚು ನಿರ್ದಿಷ್ಟವಾಗುವದು ಮತ್ತು ಕಡಿಮೆ ಸಾಮರ್ಥ್ಯ ಮತ್ತು ಧಾರಣ ಶಕ್ತಿಯನ್ನು ಹೊಂದಿರುವದು. ನಂತರ, ಅಧಿಮಾನಸದಿಂದ ಅವು ಮಾನವ ಮನಸ್ಸು ಪ್ರಾಪಂಚಿಕ ಮನಸ್ಸಿನೊಳಗಡೆ ಇಳಿಯುವವು ಮತ್ತು ಅಲ್ಲಿ.... ಉದಾಹರಣೆಗೆ ಈ ಬಡ ಮಹಾಕಾಳಿಯನ್ನೇ ತೆಗೆದುಕೊಳ್ಳಿ. ಅಸಂಖ್ಯಾತ ಕಾಳಿಗಳಿರುವರು. ಒಬ್ಬರಿಗಿಂತ ಒಬ್ಬರು ಭಯಂಕರವಾಗಿರುವರು. ಕೆಲವರು ಬಾಹ್ಯ ನಿಯಂತ್ರಣವಿಲ್ಲದೆ ಸಂಪೂರ್ಣವಾಗಿ ಗಾಭರಿ ಪಡಿಸುವರು ಮತ್ತು ಕೆಲವರು ಭಯ ಹುಟ್ಟಿಸುವರು. ಮತ್ತು ಕೆಲವರು ಕೆಲವು ವೇಳೆ ಜಿಗುಪ್ಸೆಯನ್ನು ಉಂಟು ಮಾಡುವ ಸತ್ತೆಗಳಾಗಿರುವರು. ಅವರು ಬಹುಪಾಲು ಮಾನವ ರಚನೆಗಳಾಗಿರುವರು. ಅಂದರೆ ಬಾಹ್ಯ ರೂಪವು ಮಾನವ ಕಲ್ಪನೆಯಾಗಿರುವದು. ಅಥವಾ ಮಾನವ ಮನಸ್ಸಿನ ಶಕ್ತಿಗೆ ಅನುಗುಣವಾಗಿ ರೂಪವನ್ನು ಹೊಂದಿರುವದು. ಅದರ ಆಂತರ್ಯದಲ್ಲಿ ಮಹಾಕಾಳಿ ಶಕ್ತಿಯ ಅಸ್ಪಷ್ಟ ಪ್ರತಿಬಿಂಬವಿರಬಹುದು, ಆದರೆ ಅದು ಎಷ್ಟು ಕುಂದಿದೆ, ವಿಕೃತವಾಗಿದೆ, ಕುಬ್ಜವಾಗಿದೆ, ಮಾನವ ಪ್ರಜ್ಞೆಯ ಸಮೀಪಕ್ಕೆ ತರಲಾಗಿದೆ ಎಂದರೆ, ನಿಜವಾಗಲೂ ಆಕೆ ಅದು ತಾನು ಅಲ್ಲ ಎಂದು ಹೇಳಬಹುದಾಗಿದೆ! ಮಹಾಕಾಳಿಯನ್ನು ಪ್ರತಿನಿಧಿಸುವ ಸಾಧ್ಯತೆಯ ಎಲ್ಲಾ ಭಯಂಕರ ಬಿಂಬಗಳನ್ನು ನಾನು ನೋಡಿರುವೆ. ಆ ಬಿಂಬಗಳ ಬಗ್ಗೆ ನಾವು ಮಾತನಾಡುವುದಿಲ್ಲ. ಶ್ರೇಷ್ಠ ಕಲಾವಿದರು ಅವುಗಳನ್ನು ರಚಿಸಿದ್ದರೆ, ಬಹುಶಃ ಸ್ವಲ್ಪ

ಸೌಂದರ್ಯವು ಇನ್ನೂ ಉಳಿದಿರುವದು. ಆದರೆ ಸಾಮಾನ್ಯವಾಗಿ ಅವರು ಆಕುಶಲ ಕಲಾವಿದರಾಗಿರುವದರಿಂದ ಏನೂ ಉಳಿಯುವುದಿಲ್ಲ. ಬಿಂಬಗಳ ಬಗ್ಗೆ ಗಮನಿಸಿದಾಗ, (ಪ್ರತಿಮೆಗಳು ಅಥವಾ ಚಿತ್ರಗಳು) ಅವುಗಳನ್ನು ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಬೇಕಿದ್ದರೆ, ಒಂದು ಮತೀಯ ಕ್ರಿಯೆಯನ್ನು ಮಾಡಲಾಗುವುದು. ಪುರೋಹಿತನು ಅತೀಂದ್ರಿಯ ಜ್ಞಾನವನ್ನು ಹೊಂದಿದ್ದರೆ, ಕೊನೆಯ ಪಕ್ಷ ಅಲ್ಪ ಸ್ವಲ್ಪ, ಆತನು ತನ್ನ ಅಭೀಪ್ಸೆ ಮತ್ತು ಸಾಂಪ್ರದಾಯಿಕ ಕ್ರಿಯೆಯ ಮೂಲಕ ಸುಪ್ರಭೌತಿಕ ಪ್ರಜ್ಞೆಯನ್ನು ಈ ರೂಪಗಳಲ್ಲಿ ತರಬಹುದು. ಇದೇ ಅದರ ತತ್ತ್ವ. ನಿನಗೆ ಹೀಗೆ ಹೇಳಲಾಗುತ್ತದೆ, “ಇದು ಒಂದು ಮರದ ತುಂಡು ಅಲ್ಲ, ಇದು ಒಂದು ಶಿಲೆಯಲ್ಲ, ಇದು ಒಂದು ಚಿತ್ರವಲ್ಲ. ಸಾಂಪ್ರದಾಯಿಕ ಕ್ರಿಯೆಯು ಅದರ ಒಳಗಡೆಗೆ ಒಂದು ಶಕ್ತಿಯನ್ನು ಆಹ್ವಾನಿಸಿದೆ. ಮತ್ತು ನೀನು ಅದರೊಂದಿಗೆ ಮಾತನಾಡಬಹುದು.” ಇದು ಸರಿ, ಆದರೆ ಪುರೋಹಿತನ ಸ್ವಭಾವವನ್ನು ಚೆನ್ನಾಗಿ ತಿಳಿದಿರಬೇಕು. ಆತನ ಅತೀಂದ್ರಿಯ ಜ್ಞಾನ ಮತ್ತು ಆತನನ್ನು ಆಕರ್ಷಿಸುವ ಶಕ್ತಿಗಳನ್ನು ಸಹ ಅರಿತಿರಬೇಕು. ಆದುದರಿಂದ, ಅಲ್ಲಿ ಅನೇಕ ವಿಷಯಗಳಿರಬಹುದು.... ಅಲ್ಲಿ ಏನೋ ಇದೆ (ಸಾಂಪ್ರದಾಯಿಕ ಕ್ರಿಯೆಯನ್ನು ನೆರವೇರಿಸಿದವನು ಮೂಢನಾಗಿದ್ದು, ಏನೂ ಶಕ್ತಿಯೇ ಇಲ್ಲದವನಾಗಿದ್ದು, ಯಾವ ಶಕ್ತಿಯನ್ನು ಕೆಳಗೆ ತರದೇನೆ ಇದ್ದು, ಬರೀ ಬಾಹ್ಯ ಆಡಂಬರವನ್ನು ತೋರ್ಪಡಿಸಿದ್ದರೆ – ಹೀಗೆ ಸಾಮಾನ್ಯವಾಗಿ ಆಗುವುದಿಲ್ಲ, ಇದು ಆಗಾಗ ಸಂಭವಿಸುವದೆಂದು ನಾನು ಹೇಳುತ್ತಿಲ್ಲ, ಇದು ಬಹಳ ಅಪರೂಪ). ಆಗ ಮಾತ್ರ ತೊಂದರೆಯು ಉಂಟಾಗುವದು. ಸಾಮಾನ್ಯವಾಗಿ ಇದರಲ್ಲಿ ಏನೋ ಇದೆ. ಈ ವಿಚಾರದ ಸ್ವಭಾವ ಮತ್ತು ಗುಣ ವಿಶೇಷಗಳು ಬಹಳ ಬದಲಾಗುತ್ತಿರುವದು, ಅದು ನಿಮಗೆ ತಿಳಿದಿದೆ.... ಕೆಲವು ವೇಳೆ ನೆಮ್ಮದಿಗೆಡಿಸುವುದು. ನಾನು ಮಹಾಕಾಳಿಯ ಉದಾಹರಣೆಯನ್ನು ನೀಡಿರುವೆ. ಏಕೆಂದರೆ ಮಾನವ ಪ್ರಜ್ಞೆಯಲ್ಲಿ ಮಹಾಕಾಳಿಯ ಕಲ್ಪನೆಯು ಅತ್ಯಧಿಕ ಭಯಂಕರ. ನಾವು ಬೇರೆ ದೇವತೆಗಳ ಬಗ್ಗೆ ಚಿಂತಿಸಿದಾಗ, ಉದಾಹರಣೆಗೆ ಮಹಾ ಸರಸ್ವತೀ (ಆಕೆಯು ಎಲ್ಲಾ ಕುಶಲಕಲೆ, ಸಾಹಿತ್ಯ ಮತ್ತಿತರ ಸಾಮರ್ಥ್ಯಗಳ ಅಧಿದೇವತೆಯೆಂದು ಹೇಳಲಾಗುವುದು), ಕಲ್ಪನೆಗಳು ಅಷ್ಟೊಂದು ಗಾಭರಿಗೊಳಿಸುವಂತಿರುವದಿಲ್ಲ. ಆದರೆ ಅದರಲ್ಲೂ ಮಹಾಕಾಳಿ.... ಅವುಗಳ ಶಕ್ತಿ, ಸಾಮರ್ಥ್ಯ, ಯುದ್ಧದ ರೀತಿಯ ಚೈತನ್ಯಗಳು ಎಷ್ಟು ಘೋರವೆಂದರೆ, ಆರಾಧಕರಿಗೆ ಅವುಗಳು ಕೆಳಗೆ ತರುವ ವಿಷಯಗಳು ನಿಜಕ್ಕೂ ಒಂದು ಸ್ವಲ್ಪ ಅಪಾಯಕಾರಿ. ನಾನು ಭಾರತಕ್ಕೆ ಬಂದಾಗಿನಿಂದಲೂ

ಅಸಂಖ್ಯಾತ ಕಥೆಗಳನ್ನು ಕೇಳಿರುವೆ. ಬಹಳ ಬಿಂಬಗಳ ಜೊತೆ ನನ್ನನ್ನು ಒಗ್ಗೂಡಿಸಲಾಗಿದೆ. ಅನೇಕ ಜನರು ಮನೆಗಳಲ್ಲಿ ತಾವು ಆರಾಧಿಸುವ ಕಾಳಿಯನ್ನು ಇಟ್ಟುಕೊಂಡಿರುವರು. ಆ ಜನರಿಗೆ ಕೆಲವೊಮ್ಮೆ ಭೀಕರ ಘಟನೆಗಳು ಸಂಭವಿಸಿವೆ. ನಾನು ಅವರನ್ನು ಯಾವಾಗಲೂ ಹುಷಾರಾಗಿರುವಂತೆ ಪ್ರೇರೇಪಿಸುವೆನು, ನಾನು ಅವರಿಗೆ ಈ ರೀತಿ ಹೇಳಿರುವೆ "ನಿಮ್ಮ ದುರಾದೃಷ್ಟಗಳಿಗೆ ಮಹಾಕಾಳಿಯೇ ಕಾರಣ ಎಂದು ಖಂಡಿತವಾಗಿ ತಿಳಿಯಬೇಡಿ, ಏಕೆಂದರೆ ಅವುಗಳಿಗೆ ಕಾರಣ ಆಕೆಯಲ್ಲ. ಆದರೆ ನಿಮ್ಮ ಮನೆಯಲ್ಲಿರುವ ಕಾಳಿಯು ಯಾವುದೋ ಪ್ರತಿಕಾರ ಸ್ವರೂಪದ ಸತ್ತೆವನ್ನು ಪೋಷಿಸುತ್ತಿದೆ. ಆ ಸತ್ತೆಯು ಅಸೂಯಾಭರಿತವಾಗಿರಬಹುದು, ಅಧಿಕ ಹಟಮಾರಿತನವನ್ನು ಹೊಂದಿರಬಹುದು ಮತ್ತು ಬಲಿಷ್ಠ ಪ್ರತಿಕಾರದ ಚೇತನದಿಂದ ಕೂಡಿರಬಹುದು. ನೀನು ಶ್ರದ್ಧೆಯನ್ನು ಹೊಂದಿರುವೆ ಮತ್ತು ಸಾಮಾನ್ಯವಾಗಿ ಅದು ಒಂದು ಪ್ರಾಣ ಶಕ್ತಿಯಾಗಿರುವುದು. ಆದುದರಿಂದ ನಿಜಕ್ಕೂ ಅಪಾಯಕಾರಿ ಪರಿಣಾಮಗಳು ಸಂಭವಿಸಬಹುದು." ಎಲ್ಲಾ ತರಹದ ದುರದೃಷ್ಟಕಾರಕ ಅನುಭವಗಳನ್ನು ಹೊಂದಿದ ಮೇಲೆ ಮಹಾಕಾಳಿಯ ಪ್ರತಿಮೆಯನ್ನು ತೆಗೆದುಕೊಂಡು ಹೋಗಿ ಗಂಗಾ ನದಿಯಲ್ಲಿ ಹಾಕಿದ್ದಾರೆ. ಅದೇ ಸಮಯದಲ್ಲಿ, ಅವರಿಗೆ ನಿರ್ದಿಷ್ಟ ಚೇತನದಿಂದ ಸ್ವಾತಂತ್ರ್ಯವು ದೊರಕಿದರೆ, ಎಲ್ಲಾ ತನ್ನಂತೆ ತಾನೇ ಇಲ್ಲವಾಗಬಹುದು. ಆದರೆ ಅವರಲ್ಲಿ ಕೆಲವರು ತಾವು ಮಾಡಿರುವ ಕಾರ್ಯಗಳ ಬಗ್ಗೆ ಎಷ್ಟು ಭಯಕ್ಕೆ ಒಳಗಾಗಿರುವರೆಂದರೆ ಕೆಟ್ಟ ಪರಿಣಾಮಗಳು ಮುಂದುವರೆಯುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/396–97**

**ದೇವತೆಗಳು ಸ್ತ್ರೀ ದೇವತೆಗಳು ಮತ್ತು ದೇವಸ್ಥಾನಗಳು**

ಎಲ್ಲಾ ಮತೀಯ ಸ್ಮಾರಕಗಳಲ್ಲಿ, ಅತ್ಯುನ್ನತ ಮತಕ್ಕೆ ಸೇರಿದವೆಂದು ಪರಿಗಣಿಸಲ್ಪಟ್ಟ ಸ್ಮಾರಕಗಳಲ್ಲೂ, ಉದಾಹರಣೆಗೆ ಫ್ರಾನ್ಸ್ ಅಥವಾ ಜಪಾನ್ ಅಥವಾ ಇನ್ಯಾವುದೇ ದೇಶಗಳದಲ್ಲಾಗಲೀ – ಒಂದೇ ತರಹದ ದೇಗುಲಗಳಾಗಲೀ ಅಥವಾ ಚರ್ಚುಗಳಾಗಲೀ ಇಲ್ಲ ಅಥವಾ ಒಂದೇ ವಿಧದ ದೇವರುಗಳು ಸಹ ಇಲ್ಲ, ಆದರೆ ಎಲ್ಲೆಡೆ ನನ್ನ ಅನುಭವವು ಮಾತ್ರ ಬಹುತೇಕ ಒಂದೇ ತರಹ ಇದ್ದಿತು. ಅಲ್ಪ ಸ್ವಲ್ಪ ಬದಲಾವಣೆ ಇರಬಹುದು ಅಷ್ಟೇ. – ನಂಬಿಕೆಯುಳ್ಳವರನ್ನು, ಅಂದರೆ ಭಕ್ತರ

ಶ್ರದ್ಧೆಯನ್ನೇ ಚರ್ಚಿನೊಳಗಿದ್ದ ಕೇಂದ್ರೀಕೃತ ಶಕ್ತಿ ಅತಿ ಹೆಚ್ಚಾಗಿ ಅವಲಂಬಿಸಿತ್ತು ಎಂಬುದನ್ನು ನಾನು ನೋಡಿದೆ. ನಿಜವಾಗಲೂ ಅಲ್ಲಿ ಇದ್ದ ಶಕ್ತಿ ಮತ್ತು ಅವರು ಅನುಭವಿಸಿದ ಶಕ್ತಿಯ ನಡುವೆ ವ್ಯತ್ಯಾಸವಿದ್ದಿತು. ಉದಾಹರಣೆಗೆ ಫ್ರಾನ್ಸ್‌ನ ಒಂದು ಅತ್ಯಂತ ಸುಂದರ ಪ್ರಧಾನ ಇಗರ್ಜಿಯು ಕಲೆಯ ದೃಷ್ಟಿಕೋನದಿಂದ ಭವ್ಯವಾಗಿ, ಕಲ್ಪನಾತೀತವಾಗಿತ್ತು. – ಅತ್ಯಂತ ಪವಿತ್ರವಾದ ಜಾಗದಲ್ಲಿ ನಾನು ಒಂದು ದೊಡ್ಡ ಕರಿ ಬಣ್ಣದ ಜೇಡರ ಹುಳವು ಬಲೆ ನೇಯಿದುಕೊಂಡಿರುವುದನ್ನು ನೋಡಿದೆ. ಆ ಬಲೆಯು ಇಡಿ ಪ್ರದೇಶದಲ್ಲಿ ಹರಡಿದ್ದು ಜನರ ಭಕ್ತಿಯಿಂದ ಹೊರಹೊಮ್ಮುತ್ತಿದ್ದ ಎಲ್ಲಾ ಶಕ್ತಿಗಳನ್ನು ಹಿಡಿದು ಕಬಳಿಸುತ್ತಿತ್ತು. ಅಂದರೆ ಜನರ ಪ್ರಾರ್ಥನೆಗಳು ಮುಂತಾದವು. ಅದು ಬಹಳ ಸಂತೋಷ ನೀಡುವ ದೃಶ್ಯವಾಗಿರಲಿಲ್ಲ. ಅಲ್ಲಿದ್ದ ಜನರು ಪ್ರಾರ್ಥನೆ ಮಾಡಿ ತಮ್ಮ ಇಷ್ಟಾರ್ಥಗಳನ್ನು ಮತ್ತು ದೈವೀ ಸ್ಪರ್ಶವನ್ನೂ ಹೊಂದುತ್ತಿದ್ದರು. ಆದರೆ ಅಲ್ಲಿ ಇದ್ದುದ್ದು ಜೇಡ. ಆದರೆ ಅವರಿಗೆ ಶ್ರದ್ಧೆ ಇದ್ದಿತು. ಹೀಗಾಗಿ ದುಷ್ಟ ಶಕ್ತಿಯನ್ನು ತಮ್ಮಲ್ಲಿ ಉತ್ತಮತೆಯಾಗಿ ಬದಲಾಯಿಸುತ್ತಿದ್ದರು. ಅವರಿಗೆ ಅವರದೇ ಆದ ನಂಬಿಕೆ ಇದ್ದಿತು. ಆದುದರಿಂದ ನಿಜಕ್ಕೂ ನಾನು ಅವರ ಬಳಿ ಹೋಗಿ, "ನೀವು ದೇವರಿಗೆ ಪ್ರಾರ್ಥನೆ ಸಲ್ಲಿಸುತ್ತಿರುವಿರೆಂದು ತಿಳಿದಿದ್ದೀರ? ಅದೊಂದು ಅಗಾಧವಾದ ಪ್ರಾಣಿಕ ಜೇಡ. ಅದು ನಿಮ್ಮ ಶಕ್ತಿಗಳನ್ನು ತನ್ನೊಳಗೆ ಎಳೆದುಕೊಳ್ಳುತ್ತದೆ" ಎಂದು ಹೇಳಿದ್ದರೆ ಸರಿಯಾಗುತ್ತಿತ್ತೇ? ಬಹುಪಾಲು ಜಾಗಗಳಲ್ಲಿ ಆಗುವುದೇ ಹೀಗೆ; ಅಲ್ಲಿರುವುದು ಒಂದು ಪ್ರಾಣಿಕ ಶಕ್ತಿ, ಏಕೆಂದರೆ ಈ ಪ್ರಾಣಿಕ ಅಂಶಗಳು ಮಾನವರ ಭಾವೋತ್ಕರ್ಷಗಳ ಕಂಪನವನ್ನು ಸೇವಿಸುತ್ತವೆ. ನೈಜ ಧಾರ್ಮಿಕ ಭಾವನೆಯೊಂದಿಗೆ ಚರ್ಚು ಅಥವಾ ದೇಗುಲಕ್ಕೆ ಹೋಗುವವರು ಬಹಳ ಕಡಿಮೆ ಜನ, ಅಥವಾ ಅತ್ಯಂತ ಕಡಿಮೆ ಜನ ಎಂದು ಹೇಳಬಹುದು. ಅಂದರೆ, ದೇವರನ್ನು ಅದು ಕೊಡು ಇದು ಕೊಡು ಎಂದು ಬೇಡದೆ ದೇವರಿಗೆ ಧನ್ಯವಾದಗಳನ್ನು ಅರ್ಪಿಸಿ, ಅಭೀಪ್ಸೆಯನ್ನು ಹೊಂದಿದ್ದು ತಮ್ಮನ್ನೇ ತಾವು ಅರ್ಪಿಸುವವರು ಬಹಳ ಕಡಿಮೆ ಜನ. ಹತ್ತು ಲಕ್ಷಕ್ಕೆ ಒಬ್ಬರು ಆ ರೀತಿ ಮಾಡುವರು. ಹೀಗಾಗಿ ಪರಿಸರವನ್ನು ಬದಲಾಯಿಸುವ ಶಕ್ತಿಯನ್ನು ಅವರು ಹೊಂದಿರುವುದಿಲ್ಲ. ಬಹುಶಃ ಅವರು ದೇಗುಲಕ್ಕೆ ಬಂದಾಗ, ತಮ್ಮನ್ನು ಸಂಭಾಳಿಸಿಕೊಂಡು ದಿವ್ಯವಾದುದನ್ನೇನೋ ಸ್ಪರ್ಶಿಸುವರು. ಆದರೆ ಬಹುಪಾಲು ಜನರು ಮೂಢ ನಂಬಿಕೆ, ಅಹಂಕಾರ, ಸ್ವ–ಆಸಕ್ತಿಗಳಿಗಾಗಿ ಮಾತ್ರ ಹೋಗುವರು. ಅವರು ಈ ರೀತಿಯ ವಾತಾವರಣವನ್ನು ಸೃಷ್ಟಿಸುವುದರಿಂದ ಚರ್ಚು ಅಥವಾ

ದೇವಸ್ಥಾನಕ್ಕೆ ಹೋದಾಗ ಇಂತಹ ಗಾಳಿಯೇ ನಮಗೆ ಉಸಿರಾಟಕ್ಕೆ ಸಿಗುವುದು. ಒಂದು ಉತ್ತಮವಾದ ಭಾವನೆಯಿಂದ ನೀವು ಅಲ್ಲಿ ಹೋದರೆ ಮಾತ್ರ, ನೀವು ನಿಮಗೆ ಹೀಗೆ ಹೇಳಿಕೊಳ್ಳುವಿರಿ, "ಓ ಧ್ಯಾನ ಮಾಡಲು ಎಂತಹ ಸೊಗಸಾದ ಶಾಂತ ಜಾಗವಿದು."

ನನ್ನನ್ನು ಕ್ಷಮಿಸಿ. ಆದರೆ ಅದು ಇರುವುದೇ ಹೀಗೆ. ನಾನು ಎಲ್ಲಾ ಕಡೆ ಉದ್ದೇಶಪೂರ್ವಕವಾಗಿ ಈ ಪ್ರಯೋಗವನ್ನು ಅಲ್ಪ ಸ್ವಲ್ಪ ಮಾಡಿರುವೆ. ಬಹಳ ಸಣ್ಣ ಊರಿನ ಚರ್ಚಿನಲ್ಲಿ, ಕೆಲವೊಮ್ಮೆ, ಬಹಳ ಶಾಂತವಾದ ಧ್ಯಾನಕ್ಕೆ ಯೋಗ್ಯವೆನಿಸುವ ಜಾಗವನ್ನು ಕಂಡಿರುವೆ. ಆದರೆ ಅದು ಬಹಳ ಅಪರೂಪವೆಂದೇ ಹೇಳಬಹುದು! ಇಟಲಿಯ ಸುಂದರವಾದ ಚರ್ಚುಗಳನ್ನು ನಾನು ನೋಡಿರುವೆ. ಅವು ವೈಭವೋಪೇತ ಜಾಗಗಳು. ಅವು ಈ ಪ್ರಾಣಿಕ ಸತ್ತೆಗಳಿಂದ ತುಂಬಿವೆ ಮತ್ತು ಭಯಾನಕವಾಗಿವೆ. ವೆನಿಸ್‌ನ ರೋಮನ್ ಕ್ಯಾಥಲಿಕ್ ಚರ್ಚ್‌ನಲ್ಲಿ ನಾನು ಚಿತ್ರ ಬರೆಯುತ್ತಿದ್ದಾಗ ನಡೆದ ಘಟನೆಯು ನನಗೆ ನೆನಪಿದೆ. ನಾನು ಕೆಲಸ ಮಾಡುತ್ತಿದ್ದಾಗ ಪಾಪ ನಿವೇದನೆಯ ಜಾಗದಲ್ಲಿ ಓರ್ವ ಪಾದ್ರಿಯು ಬಡ ಮಹಿಳೆಯೊಬ್ಬಳ ನಿವೇದನೆಯನ್ನು ಕೇಳಿಸಿಕೊಳ್ಳುತ್ತಿದ್ದರು. ಅದು ನಿಜಕ್ಕೂ ಭಯಂಕರ ದೃಶ್ಯವಾಗಿತ್ತು! ಪಾದ್ರಿಯು ಯಾವ ತರಹದವನು, ಆತನ ಗುಣ ವಿಶೇಷಗಳೇನು ಎಂಬುದು ನನಗೆ ಗೊತ್ತಿಲ್ಲ. ಆತನು ಕಣ್ಣಿಗೆ ಗೋಚರಿಸುತ್ತಿರಲಿಲ್ಲ. ನಿನಗೆ ಗೊತ್ತಲ್ಲ, ಅವರು ಕಾಣಿಸುವುದಿಲ್ಲ. ಅವರನ್ನು ಒಂದು ಪೆಟ್ಟಿಗೆಯಲ್ಲಿ ಮುಚ್ಚಿಡಲಾಗಿರುವದು. ಅವರು ಒಂದು ಸರಳ ಜಾಲರಿಯ ಮೂಲಕ ನಿವೇದನೆಯನ್ನು ಕೇಳಿಸಿಕೊಳ್ಳುವರು. ಆ ಪಾದ್ರಿಯ ಮೇಲೆ ಅತ್ಯಂತ ಗಾಢವಾದ ಸೆಳೆಯುವ ಶಕ್ತಿಯಿದ್ದಿತು. ಆ ಬಡ ಸ್ತ್ರೀ ಎಂತಹ ಭೀತಿಗೆ ಒಳಗಾಗಿದ್ದಳೆಂದರೆ ಅದನ್ನು ನೋಡುವದು ನಿಜಕ್ಕೂ ದುಃಖಕಾರಕವಾಗಿತ್ತು. ಈ ಜನರು ಅದು ಪವಿತ್ರವಾದ ಕೆಲಸವೆಂದು ನಂಬಿರುವರು. ಆದರೆ ಅದು ದುಷ್ಟ ಪ್ರಾಣಿಕ ಶಕ್ತಿಗಳ ಜಾಲವಾಗಿದ್ದು, ಅವು ಇವೆಲ್ಲವನ್ನೂ ಕಬಳಿಸುತ್ತಿದ್ದವು. ಜೊತೆಗೆ, ಅಗೋಚರ ಪ್ರಪಂಚದಲ್ಲಿ ಆರಾಧನೆಯನ್ನು ಪ್ರಾಣಿಕ ಸತ್ತೆಗಳನ್ನು ಹೊರತುಪಡಿಸಿ ಯಾವ ಸತ್ತೆಗಳೂ ಸಹ ಬಯಸುವುದಿಲ್ಲ. ಇವು ನಾನು ಹಿಂದೆ ಹೇಳಿದಂತೆ ಅವುಗಳಿಂದ ತೃಪ್ತರಾಗುವವು. ಮತ್ತು ನಂತರದಲ್ಲಿ ಅದು ಅವುಗಳಿಗೆ ಪ್ರಾಮುಖ್ಯತೆಯನ್ನು ನೀಡುವುದು. ಅವು ಗರ್ವದಿಂದ ಉಬ್ಬಿ ಸಂತಸ ಪಡುವವು. ಆರಾಧನೆ ಮಾಡುವ ಒಂದು ಗುಂಪನ್ನು ಅವು ಪಡೆದಾಗ ತೃಪ್ತರಾಗುವವು.

ಆದರೆ, ನೈಜ ದಿವ್ಯ ಸತ್ತೆಗಳನ್ನು ಗಮನಿಸಿದರೆ, ಅವರು ಇದಕ್ಕೆ ಯಾವುದೇ ಮೌಲ್ಯವನ್ನು ನೀಡುವುದಿಲ್ಲ. ಅವರು ಆರಾಧಿಸುವುದನ್ನು ಇಷ್ಟಪಡುವುದಿಲ್ಲ. ಇಲ್ಲ. ಅವರಿಗೆ ಅದು ಯಾವುದೇ ವಿಶೇಷವಾದ ಸಂತಸವನ್ನು ನೀಡುವುದಿಲ್ಲ. ಯಾವ ಮಾನವನಿಗಾದರೂ ಗರ್ವವು ಇರದಿದ್ದರೆ, ಆತನು ಆರಾಧನೆಯನ್ನು ಅಂಗೀಕರಿಸುವುದಿಲ್ಲ. ಮತ್ತು ಉದಾಹರಣೆಗೆ, ಅವರು ಒಂದು ಒಳ್ಳೆಯ ಆಶಯವನ್ನು ನೋಡಿದರೆ, ನಿಸ್ವಾರ್ಥತೆಯ ಚಲನೆ ಅಥವಾ ಒಂದು ಉತ್ತಮ ಭಾವನೆಯನ್ನು ಕಂಡರೆ ಅಥವಾ ಉತ್ಸಾಹ, ಒಂದು ಸಂತಸ, ಒಂದು ಆಧ್ಯಾತ್ಮಿಕ ಸಂತೋಷಗಳಿಗೆ ಅವರು ಪ್ರಾರ್ಥನೆ, ಆರಾಧನೆಯ ಕ್ರಿಯೆ ಮತ್ತು ಪೂಜೆಗಿಂತ ಅತಿ ಹೆಚ್ಚಿನ ಮೌಲ್ಯವನ್ನು ನೀಡುವರು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/196–97**

## ಮಹಾಕಾಳಿಯ ಗುಣಲಕ್ಷಣಗಳು

**– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ**

### ಉನ್ನತ ಮತ್ತು ತ್ವರಿತಗತಿ

*“ವ್ಯಾಪ್ತವಲ್ಲ ಬದಲಿಗೆ ಉನ್ನತವಾಗಿದೆ.” ಎಂಬ ವಾಕ್ಯದಲ್ಲಿ ಉನ್ನತ ಪದದ ಅರ್ಥವೇನು?*

ನಾವು ಉನ್ನತವಾದ ವಿಚಾರ, ಭಾವನೆ ಮತ್ತು ಅಭೀಪ್ಸೆಗಳ ಕುರಿತು ಮಾತನಾಡುವಾಗ ಈ ಮೇಲಿನ ವಾಕ್ಯವು ಬಹು ಅರ್ಥಪೂರ್ಣವಾಗಿ ಕಂಡುಬರುತ್ತದೆ. ಏಕೆಂದರೆ, ಈ ಅರ್ಥದಲ್ಲಿ ನೋಡ ಹೊರಟರೆ ಮಹಾಕಾಳಿಯ ಪ್ರತಿಯೊಂದು ಚಲನೆಯೂ ಸಹ ಉನ್ನತವೂ–ತ್ವರಿತವೂ ಆದ ಕ್ರಿಯೆಗಳನ್ನು ಪ್ರತಿನಿಧಿಸುತ್ತದೆ. ಆ ಕ್ರಿಯೆಗಳು ನಮ್ಮ ಸಂಪರ್ಕಕ್ಕೆ ಬಂದ ತಕ್ಷಣ ಬಹು ಪರಿಣಾಮಕಾರಿಯಾದ ಚೈತನ್ಯವನ್ನು ಸ್ಫುರಣಗೈಯುತ್ತದೆ. ಆದರೆ, ಮಹಾಕಾಳಿಗೆ ಸಂಬಂಧಿಸಿದ ಈ ಎಲ್ಲಾ ಕ್ರಿಯೆಗಳು ಮಾಹೇಶ್ವರಿಯ ಗುಣಲಕ್ಷಣಗಳಂತೆ ವ್ಯಾಪ್ತವೂ–ಸಹನಶೀಲವೂ–ಸಮಗ್ರವೂ ಆದ ಲಕ್ಷಣಗಳನ್ನು ಹೊಂದಿರುವದಿಲ್ಲ.

## ಶಕ್ತಿಯ ಸಾನಿಧ್ಯ

*ಇಂದು ಬೆಳಿಗ್ಗೆ, ಶ್ರೀಮಾತೆಯು ನನ್ನ ಮೇಲೆ ಹರಿಸುತ್ತಿದ್ದ ಶಕ್ತಿಯ ಪ್ರಬಲತೆಯನ್ನು ಸಹಿಸದಾದ ನಾನು, 'ಶ್ರೀಮಾತೆಯವರು ನನ್ನ ಮೇಲೆ ಒತ್ತಡವನ್ನು ಹೇರುತ್ತಿದ್ದಾರೆ' ಎಂದು ಭಾವಿಸಿದ್ದೆ. ಆ ಸಂದರ್ಭದಲ್ಲಿ ನಾನು ಉಚ್ಚರಿಸಿದ 'ಒತ್ತಡ' ಎಂಬ ಪದವನ್ನು ಕುರಿತು ತಾವು 'ಆ ಪದವು ಸಂಪೂರ್ಣವಾಗಿ ತಪ್ಪಾದ ಅರ್ಥವನ್ನು ಹೊಂದಿದೆ' ಎಂದು ಬರೆದಿದ್ದೀರಿ. ಹಾಗಾದರೆ,* The Mother *ಕೃತಿಯ 41 ನೇ ಪುಟದಲ್ಲಿ ಉಲ್ಲೇಖವಾದ "(ಮಾಹೇಶ್ವರಿ) ಅವರ ಮೇಲೆ ಅಗತ್ಯವಿರುವಷ್ಟು ಒತ್ತಡವನ್ನು ಹಾಕುತ್ತಾರೆ." ಎಂಬ ವಾಕ್ಯ ಮತ್ತು ಅದೇ ಕೃತಿಯ 44 ನೇ ಪುಟದಲ್ಲಿ ಮಹಾಕಾಳಿಯ ಕುರಿತು ನೀವು ಹೇಳಲಾದ, "ಅವಳು ಹರಿಸುತ್ತಿರುವ ಒತ್ತಡದ ತೀವ್ರತೆ" ಎಂಬ ವಾಕ್ಯದಲ್ಲಿನ "ಒತ್ತಡ" ಪದದ ಅರ್ಥವೇನು ?*

ಆ ಸಂದರ್ಭದಲ್ಲಿ ನಾನು ನಿಮಗೆ ಸಂಬಂಧಿಸಿದ ವಿಷಯವನ್ನಷ್ಟೇ ಪ್ರಸ್ತಾಪಿಸುತ್ತಿದ್ದೆ – ಅದನ್ನು ವಿವರಿಸುವಾಗ, ಶ್ರೀಮಾತೆಯು ಎಂದಿಗೂ ಒತ್ತಡವನ್ನು ಹೇರುವದಿಲ್ಲ ಎಂದು ಸಮರ್ಥಿಸುವುದು ನನ್ನ ಉದ್ದೇಶವಾಗಿರಲಿಲ್ಲ. ಏಕೆಂದರೆ, ಒತ್ತಡದಲ್ಲಿಯೂ ಹಲವಾರು ವಿಧಗಳಿವೆ. ದಿವ್ಯಶಕ್ತಿಯೊಂದನ್ನು ನಮ್ಮ ಮನ–ಪ್ರಾಣ–ದೇಹಗಳ ಒಳನುಗ್ಗಿಸಲು ಸಹಕರಿಸುವ ಒತ್ತಡವು, ಅತ್ಯಂತ ವೇಗವಾಗಿ ನಮ್ಮ ತ್ರಿವಿಧ ಕೋಶಗಳಲ್ಲಿ ಪ್ರವಹಿಸಿ ನಮ್ಮೊಳಗೆ ಮನೆಮಾಡಿಕೊಂಡಿರುವ ಅನೃತಗಳ ಮೇಲೆ ದಾಳಿ ಮಾಡಿ ಅವುಗಳನ್ನು ಶಾಶ್ವತವಾಗಿ ನಮ್ಮಿಂದ ದೂರಗೊಳಿಸುವ ಕಾರ್ಯವನ್ನು ಮಾಡುತ್ತಿರುತ್ತದೆ. ಹಾಗಾಗಿ ಆ ಒತ್ತಡವು ನಿನ್ನೊಳಗಿರುವ ಅನೃತಗಳನ್ನು ನಿರ್ಮೂಲಿಸಿ ಸುಕೃತಗಳನ್ನು ಸ್ಥಾಪಿಸುವ ಪ್ರಚ್ಛನ್ನತೆಯಾಗಿ ನಿನ್ನ ಒಳಗೆ ಪ್ರವಹಿಸಿ ಚೈತನ್ಯವನ್ನು ಭರಿಸುತ್ತದೆ. ಆದರೆ, ಆ ಪ್ರಚ್ಛನ್ನ ಶಕ್ತಿಯನ್ನು ಒತ್ತಡವೆಂದು ಕರೆಯಬಹುದೇ ಎಂಬುದೂ ಸಹ ಪ್ರಶ್ನಾರ್ಥಕವಾಗಿದೆ.

## ಪ್ರಹಾರ ಮತ್ತು ಪುರಸ್ಕಾರ

*"ಅದೇ ಪುಸ್ತಕದ 44 ನೇ ಪುಟದಲ್ಲಿ ನೀವು ಮಹಾಕಾಳಿಯ ಕುರಿತು ಹೇಳುತ್ತ, "ಅವಳ ಎರಡೂ ಕೈಗಳಲ್ಲಿ ಒಂದು ಪ್ರಹಾರವನ್ನು ಗೈದರೆ*

*ಇನ್ನೊಂದು ಪುರಸ್ಕಾರವನ್ನು ನೀಡುತ್ತದೆ." ಎಂದು ಬರೆದಿದ್ದೀರಿ. ಈ ಹೇಳಿಕೆಯಲ್ಲಿ ಯಾವುದನ್ನು ನೀವು "ಪ್ರಹಾರ" ಎಂದು ಹೇಳುತ್ತೀರಿ?*

ನಾನು ಹೇಳಿದ ಆ ವ್ಯಾಖ್ಯಾನವು ಈ ವಿಶ್ವದಲ್ಲಿ ಅವಳು ನಿರ್ವಹಿಸುವ ಸಾಮಾನ್ಯವಾದ ಕ್ರಿಯೆಯನ್ನು ವ್ಯಕ್ತಪಡಿಸುತ್ತದೆ. ಉದಾಹರಣೆಗೆ: ಅವಳು ಅಸುರರ ಮೇಲೆ ಪ್ರಹಾರಗೈದು ಅವರನ್ನು ಸಂಹರಿಸುತ್ತಾಳೆ. ಅಲ್ಲದೆ ಸಾಧನೆಯಲ್ಲಿ ತೊಡಗಿದ ಸಾಧಕರ ಮಾರ್ಗದಲ್ಲಿ ಅಡ್ಡಿ–ಆತಂಕಗಳನ್ನು ಒಡ್ಡಿ ಅವರ ಉನ್ನತಿಯನ್ನು ನಿರ್ಬಂಧಗೊಳಿಸುವ ಅನೃತ ಶಕ್ತಿಗಳು ಮತ್ತು ವಿನಾಶವನ್ನು ಹೊತ್ತುತರುವ ಕಂಟಕ ಶಕ್ತಿಗಳ ಮೇಲೆ ಅವಳು ಪ್ರಹಾರ ಗೈಯುತ್ತಾಳೆ. ಆದರೆ, ಆ ಶ್ರೀಮಾತೆಯು ಎಂದಿಗೂ ನಿಮ್ಮ ಮೇಲೆ ಮಹಾಕಾಳಿಯ ಶಕ್ತಿ ಅಥವಾ ಒತ್ತಡಗಳನ್ನು ಬಳಸುವದಿಲ್ಲ.

*

*The Mother ಕೃತಿಯ 44 ನೇ ಪುಟದಲ್ಲಿ ಶ್ರೀಮಾತೆಯಲ್ಲಿರುವ ಮಹಾಕಾಳಿಯ ಅಂಶಗಳ ಕುರಿತು ಪ್ರಸ್ತಾಪಿಸುತ್ತ, "ಶ್ರೀಮಾತೆಯನ್ನು ಅವಳಲ್ಲಿಯ ಮಹಾಕಾಳಿ ಶಕ್ತಿಯೊಳಗೆ ಪ್ರವೇಶಿಸಲು ಅವಕಾಶ ನೀಡಿದ ಕೂಡಲೇ ಸಾಧನೆಯಲ್ಲಿ ತೊಡಗಿದ ಸಾಧಕರ ಅನ್ವೇಷಣಾ ಮಾರ್ಗದಲ್ಲಿ ಕಾದು ಕುಳಿತಿರುವ ಅನೃತ ಶಕ್ತಿಗಳು ಮತ್ತು ಸಾಧನೆಯ ಆರೋಹಣ ಮಾರ್ಗವನ್ನು ನಿರ್ಬಂಧಿಸಿದ ಅಡೆತಡೆಗಳೆಲ್ಲ ಕ್ಷಣಾರ್ಧದಲ್ಲಿ ಧೂಳಿಪಟಗಳಾಗಿ ನಾಶವಾಗುತ್ತವೆ." ಎಂದು ಹೇಳಲಾಗಿದೆ. ಇಲ್ಲಿ ಮಹಾಕಾಳಿಯ ಶಕ್ತಿಯು ಈ ರೂಪದಲ್ಲಿ ಹಸ್ತಕ್ಷೇಪಗೈಯುವ ವಿಚಾರವು ನಿಮಗೆ ಹೇಗೆ ಭಾಸವಾಗುತ್ತದೆ?*

ಮಹಾಕಾಳಿಯ ಆ ಶಕ್ತಿ ಸಂಚಲನೆಯು ಒಂದು ರೀತಿಯ ತ್ವರಿತ, ಹಠಾತ್, ನಿರ್ಣಾಯಕ ಮತ್ತು ಕಡ್ಡಾಯವಾದ ಚಲನೆಯಂತೆ ಕಂಡುಬರುತ್ತದೆ. ಆ ಶಕ್ತಿಯು ಮಧ್ಯ ಪ್ರವೇಶಿಸಿದಾಗ ಅದು ದಿವ್ಯತೆಯ ಅಥವಾ ಸುಪ್ರಮಾನಸದ ಸಂವಹನೆಯನ್ನು ಹೊತ್ತು ತಂದಿರುತ್ತದೆ. ಎಲ್ಲಾ ಅಡೆತಡೆಗಳನ್ನು ಹೊಡೆದು ಹಾಕುತ್ತಾ ಮುನ್ನುಗ್ಗುವ ಆ ಶಕ್ತಿಗೆ ಇದಿರು ನಿಲ್ಲುವ ಛಾತಿಯು ಈ ಇಡೀ ವಿಶ್ವದಲ್ಲಿ ಯಾವ ಶಕ್ತಿಗೂ ಸಾಧ್ಯವಿಲ್ಲ. ಇಂತಹ ಅಧಿಕಾರಬದ್ಧವಾದ ಶಕ್ತಿಯ ಸಂಚಲನೆಯಿಂದ ಪರಿವರ್ತಿತವಾದ ವಸ್ತು–ವಿಷಯಗಳನ್ನು ಮೊದಲಿದ್ದಂತೆ ಪುನರ್ ನಿರೂಪಿಸುವದಾಗಲೀ, ಅಥವಾ ಆ ಪರಿವರ್ತನೆಯನ್ನೇ ರದ್ದುಗೊಳಿಸುವಂತಹ ಕಾರ್ಯಗಳನ್ನಾಗಲಿ ಮಾಡಲು ಸಾಧ್ಯವಿಲ್ಲ. ಆ ಮಹಾಕಾಳಿಯ ಶಕ್ತಿಯನ್ನು ಎದುರಿಸಲು ಅನೃತ ಶಕ್ತಿಗಳು

ಎದುರಾಗಿ ನಿಲ್ಲಬಹುದು. ಅದನ್ನು ತಡೆಯಲು ಪ್ರಯತ್ನಿಸಬಹುದು, ಅಥವಾ ಅದರ ವಿರುದ್ಧ ಸಮರಕ್ಕೆ ಸಿದ್ಧವಾಗಲೂಬಹುದು. ಆದರೆ, ಒಮ್ಮೆ ಆ ಶಕ್ತಿಯ ಪ್ರಬಲತೆಯನ್ನು ಕಂಡು ದಂಗಾದ ಆ ಎಲ್ಲಾ ಕೆಡುಕುಗಳು ದಿಗ್ಭ್ರಮೆಗೊಂಡು ಕೂಡಲೇ ತಮ್ಮ ದಾರಿಯಿಂದ ಹಿಂದೆ ಸರಿಯುತ್ತವೆ. ಹಾಗೆ ಹಿಂದೆ ಸರಿದ ಅನೃತ ಶಕ್ತಿಗಳು ತಮಗಿದ್ದ ಹಿಂದಿನ ನೆಲೆಯನ್ನಾದರೂ ಉಳಿಸಿಕೊಳ್ಳಬಹುದು ಎಂದು ಭಾವಿಸುತ್ತವೆ. ಆದರೆ, ಆ ಮಹಾಕಾಳಿಯ ಶಕ್ತಿಯ ಸಂಚಲನವು ಎಷ್ಟು ಪ್ರಚ್ಛನ್ನ–ವಾಗಿರುತ್ತದೆ ಎಂದರೆ, ಅವಳ ದಾರಿಯಿಂದ ಬಹು ದೂರದಲ್ಲಿರುವ ಕೆಡುಕುಗಳೂ ಸಹ ಅವಳ ದಾಳಿಯಲ್ಲಿ ಸಿಕ್ಕಿ ನಲುಗಿ ಹೋಗುತ್ತವೆ. ಅವಳ ಅಧಿಕಾರಯುತವಾದ ಶಕ್ತಿಯ ಪ್ರವಾಹದಲ್ಲಿ ತಮ್ಮ ಸಕಲ ಸಾಮ್ರಾಜ್ಯಗಳನ್ನು ಕಳೆದುಕೊಂಡು ಬಿಡುತ್ತವೆ. ಅವುಗಳು ಪೂರ್ವಾಪರಗಳೆಲ್ಲ ತಮ್ಮ ಅಸ್ಮಿತೆಯನ್ನು ಕಳೆದುಕೊಂಡು ಬಿಡುತ್ತವೆ. ಒಂದೊಮ್ಮೆ ಹೊಳೆದು ಹಾಯಾಗಿದ್ದ ಅವುಗಳೆಲ್ಲ ಕರ್ಗಿಡಿದು ಕಾರುವ ನೆರಳಿನ ದುರ್ಬಲ ರೂಪಗಳಾಗಿ ಮಿನುಗುವ ಹರಸಾಹಸವನ್ನು ಮಾಡುತ್ತ ತೆವಳುತ್ತವೆ. ಇಡೀ ಬದುಕನ್ನೇ ಮಸುಕಾಗಿ ಮಬ್ಬಿಡಿಸುತ್ತವೆ. ಈ ಸಂದರ್ಭದಲ್ಲಿ ನಾನು ಮಹಾಕಾಳಿಯ ಶಕ್ತಿಯ ಹಸ್ತಕ್ಷೇಪವನ್ನು ಕುರಿತು 'ಅನುಮತಿಸುವ' ಮಾತನ್ನು ಹೇಳಿದ್ದೇನೆ. ಏಕೆಂದರೆ, ಸರ್ವೋಚ್ಚವಾದ ಮಹಾಕಾಳಿಯ ಶಕ್ತಿ ಸಂಚಲನೆಯು ಬಹು ವಿರಳವಾದ ವಿದ್ಯಮಾನವಾಗಿದೆ. ಇತರ ಶಕ್ತಿಗಳ ಸಾರಸರ್ವಸ್ವದ ಎದುರು ಮಹಾಕಾಳಿಯ ಭಾಗಶಃ ಶಕ್ತಿಯೇ ಹಿರಿದಾಗಿ ತೋರಿಬರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/114–16**

ಬಲ ಮತ್ತು ಶಕ್ತಿಗಳ ಆಗರವಾದ ಉನ್ನತ ಪ್ರಾಣಮಯದ ಪ್ರಭೃತಿಯಾದ ಮಹಾಕಾಳಿಯು ಆ ಶಕ್ತಿ–ಬಲಗಳನ್ನು ಬಹು ಸಾಮಾನ್ಯವಾಗಿ ಪ್ರಯೋಗಿಸುತ್ತಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/66**

## ಬದುಕಿನಲ್ಲಿ ಬಂದು ಹೋಗುವ ವಿಪತ್ತುಗಳು ಮತ್ತು ಮಹಾಕಾಳಿ

*ಪ್ರಜ್ಞಾ ಪರಿವರ್ತನೆಯನ್ನು ಅತ್ಯಂತ ವೇಗವಾಗಿ ಸಾಧುಗೊಳಿಸುವ ಅಂಶವು ಯಾವುದು: ದಿವ್ಯ ಪ್ರೇಮವೋ? ಅಥವಾ ಮಹಾಕಾಳಿಯ ಶಕ್ತಿಯೋ?*

ಮಹಾಕಾಳಿಯ ಶಕ್ತಿಯು ಮರ್ತ್ಯವನ್ನು ದಿವ್ಯ ಪ್ರೇಮದೆಡೆಗಿನ ಮಾರ್ಗದಲ್ಲಿ ಮುನ್ನಡೆಸುತ್ತದೆ. ಒಮ್ಮೆ ಮರ್ತ್ಯವು ದಿವ್ಯ ಪ್ರೇಮವನ್ನು ಪಡೆದುಕೊಂಡಿದ್ದೇ ಆದಲ್ಲಿ ಅದಕ್ಕೆ ಬೇರೆ ಇನ್ನಾವ ಶಕ್ತಿಯ ಅವಶ್ಯಕತೆಯೂ ಇರುವದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/370**

ಬದುಕಿನಲ್ಲಿ ವಿಪತ್ತುಗಳು ಬರಲು ಒಂದು ಕಾರಣವಿದೆ. ದಿವ್ಯತೆಯ ಅಸ್ತಿತ್ವವನ್ನು ಅಲ್ಲಗಳೆವ ಮರ್ತ್ಯರಿಗೆ ಆ ದಿವ್ಯತೆಯ ಅಂಶವನ್ನು ಪ್ರಕಟಪಡಿಸಲೋಸುಗ ವಿಪತ್ತುಗಳ ಆಗಮನವಾಗುತ್ತದೆ. ಆ ದಿವ್ಯತೆಯ ಮುಂದೆ ತಾನು ಯಾವ ಹಿರಿಮೆಯನ್ನೂ ಹೊಂದಿಲ್ಲ. ಅದರ ಅಸ್ತಿತ್ವವಿಲ್ಲದಿದ್ದರೆ ಯಾವ ಸಾಧನೆಯೂ ಸಹ ಸಾಧ್ಯವಿಲ್ಲ. ದಿವ್ಯ ಪ್ರಜ್ಞೆಯ ಅನುಗ್ರಹವಿಲ್ಲದೆ ಈ ವಿಶ್ವಕ್ಕೆ ಯಾವ ಅಸ್ಮಿತೆಯೂ ಇಲ್ಲ ಎಂಬ ಸತ್ಯದ ಪ್ರಕಟವಾಗುವವರೆಗೆ ವಿಪತ್ತುಗಳು ಹಿಂಬಾಲಿಸುತ್ತವೆ. ಒಂದೊಮ್ಮೆ ಆ ಎಲ್ಲಾ ಸತ್ಯದ ಅನಾವರಣವಾದ ಕ್ಷಣದಿಂದಲೇ ಕಷ್ಟಕಾರ್ಪಣ್ಯಗಳೆಲ್ಲ ಹೇಳ ಹೆಸರಿಲ್ಲದಂತೆ ಮಾಯವಾಗಿ ಬಿಡುತ್ತವೆ. ಕೆಲವೊಮ್ಮೆ ಆ ದಿವ್ಯತೆಯನ್ನು ಭಾಗಶಃ ಮಾತ್ರ ಅರಿತುಕೊಂಡವರಿಗೂ ಸಹ ವಿಪತ್ತುಗಳು ಬಂದು ಕಾಡುವದಿಲ್ಲ. ಆದರೆ, ಅದರ ಔನ್ನತ್ಯವನ್ನು ಅರಿತುಕೊಳ್ಳುವರೆಗೆ ಅದು ನಮ್ಮನ್ನು ಹಿಂಬಾಲಿಸುತ್ತಲೇ ಇರುತ್ತದೆ.

*ಎಲ್ಲಾ ವಿಪತ್ತುಗಳು ಒಮ್ಮಿಗೇ ಬಂದು ಹೋಗಲು ಸಾಧ್ಯವಿಲ್ಲವೇ?*

ಹಾಗೇನಾದರೂ ಎಲ್ಲಾ ವಿಪತ್ತುಗಳು ಒಮ್ಮಿಗೇ ದಾಳಿಯಿಟ್ಟರೆ ಅದು ನಿಮ್ಮ ನಾಶಕ್ಕೆ ಕಾರಣವಾಗುತ್ತದೆ. ಅದರ ಪ್ರವಾಹದಲ್ಲಿ ಸಿಲುಕಿದ ನೀವು ಮರಣಹೊಂದಲೂ–ಬಹುದು. ಅದರ ಶಕ್ತಿಯು ನಿಮ್ಮನ್ನು ಪುಡಿಪುಡಿಯಾಗಿಸಿ ಬಿಡುತ್ತದೆ. ಹಾಗಾಗಿಯೇ ಎಲ್ಲಾ ವಿಪತ್ತುಗಳು ಯಾವಾಗಲೂ ಒಮ್ಮೆಲೇ ಆಕ್ರಮಣಗೈಯುವದಿಲ್ಲ. ಬದಲಿಗೆ ಕ್ರಮೇಣ ಸ್ವಲ್ಪ–ಸ್ವಲ್ಪವಾಗಿಯೇ ನಿಮ್ಮ ಬದುಕಿನಲ್ಲಿ ಪ್ರವೇಶಿಸುತ್ತ ನಿಮ್ಮನ್ನು ಪವಿತ್ರರನ್ನಾಗಿಸಲು ಪ್ರಯತ್ನಿಸುತ್ತದೆ. ಹೀಗೆ ಅದರ ನಿಧಾನಗತಿಯಿಂದಲೇ ನೀವು ನಿಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ. ಇದು ನಮ್ಮ ಆಂತರ್ಯದಲ್ಲಿರುವ ಶಕ್ತಿ–ಪ್ರಾಮಾಣಿಕತೆ ಮತ್ತು ಔನ್ನತ್ಯದೆಡೆಗೆ ಆರೋಹಿಸಲಿಕ್ಕಿರುವ ನಮ್ಮ ಸಾಮರ್ಥ್ಯ ಹಾಗೂ ಸಾಧನೆಯೆಡೆಗಿನ ನಮ್ಮ ಅನುಭೂತಿಯನ್ನು ಅವಲಂಬಿಸಿರುತ್ತದೆ. ಅಲ್ಲದೆ ನಮ್ಮ ಅನುಭೂತಿಯ ಹಂತದಲ್ಲಿ ನಾವು ಪಡೆದ

ಕಾಣ್ಕೆಗಳನ್ನು ನಮ್ಮ ಸ್ಮೃತಿಯಲ್ಲಿಟ್ಟುಕೊಳ್ಳುವುದು ಬಹು ಮುಖ್ಯವಾಗಿರುತ್ತದೆ. ಯಾರು ಕಾಣ್ಕೆಗಳನ್ನು ಮರೆಯುತ್ತಾರೋ ಅವರು ಸಾಧನೆಯಲ್ಲಿ ಹಿಂದುಳಿಯುತ್ತಾರೆ. ಯಾರು ತಮ್ಮೆಲ್ಲಾ ಅನುಭೂತಿಗಳನ್ನು ಸ್ಮೃತಿಯೊಳಗೆ ಅಚ್ಚೊತ್ತಿಕೊಂಡಿರುತ್ತಾರೋ ಅವರು ಸಾಧನೆಯಲ್ಲಿ ಬಹು ವೇಗವಾಗಿ ಮುನ್ನಡೆಯುತ್ತಾರೆ. ಅದೇ ರೀತಿ ತನ್ನ ಆಂತರ್ಯದಲ್ಲಿ ನೈತಿಕ ಶಕ್ತಿಯನ್ನು ಹೊಂದಿರುವ ವ್ಯಕ್ತಿಗಳೂ ಸಹ ಪ್ರಜ್ಞಾ ಪಯಣದಲ್ಲಿ ತ್ವರಿತ ಗತಿಯನ್ನು ಸಾಧಿಸುತ್ತಾರೆ. ಉದಾಹರಣೆಗೆ: ಕಾದು ಕೆಂಪಾಗಿರುವ ಕಬ್ಬಿಣದ ತುಂಡನ್ನು ಕೈಯಲ್ಲಿ ಹಿಡಿದುಕೊಂಡ ವ್ಯಕ್ತಿಯು ಅದರ ಮೇಲೆ ನೀರನ್ನು ಸುರಿದು ತಂಪುಗೊಳಿಸಲು ಪ್ರಯತ್ನಿಸಿದರೆ ಅದು ಸಾಧ್ಯವಾಗುವದಿಲ್ಲ. ಬದಲಿಗೆ ಅದನ್ನು ಹಿಡಿದುಕೊಂಡ ವ್ಯಕ್ತಿಯ ಕೈಯಲ್ಲಿ ಸುಟ್ಟ ಗಾಯವಾಗುತ್ತದೆ. ಆದರೆ, ಇಂತಹ ಸಂದರ್ಭದಲ್ಲಿ ಆ ವ್ಯಕ್ತಿಗೆ ಬೇಗನೆ ತನ್ನ ತಪ್ಪಿನ ಅರಿವಾಗಿ ಅವನು ಜಾಗೃತನಾಗುತ್ತಾನೆ. ಹಾಗೂ ಇನ್ನೊಮ್ಮೆ ಈ ರೀತಿಯ ತಪ್ಪನ್ನು ಮಾಡುವದರಿಂದ ಹಿಂದುಳಿಯುತ್ತಾನೆ. ಈ ರೀತಿಯಾಗಿಯೇ ವಿಪತ್ತುಗಳು ಮರ್ತ್ಯವನ್ನು ಅವರ ತಪ್ಪುಗಳಿಂದಲೇ ಅವರಿಗೆ ಪಾಠವನ್ನು ಕಲಿಸುತ್ತದೆ. ಆದರೆ, ಇದಕ್ಕೆ ವ್ಯತಿರಿಕ್ತವೆಂಬಂತೆ ಕೆಲವು ಜನರು ತಾವು ಮಾಡಿದ ತಪ್ಪನ್ನು ಒಪ್ಪಿಕೊಳ್ಳದೆ ಅದನ್ನು ಮುಚ್ಚಿಟ್ಟುಕೊಳ್ಳಲು ಹಲವು ರೀತಿಯ ಪ್ರಯತ್ನಗಳನ್ನು ಮಾಡುತ್ತಾರೆ. ವಿಧವಿಧದ ನೆಪಗಳನ್ನು ನೀಡಿ ತಮ್ಮ ತಪ್ಪನ್ನು ಸಮರ್ಥಿಸಲು ಹೆಣಗುತ್ತಾರೆ. ಅಂತಹವರು ಸಾಧನೆಯಲ್ಲಿ ಹಿಂದೆಯೇ ಉಳಿಯುತ್ತಾರೆ.

*ಪ್ರಿಯ ಮಾತೆಯೇ, ವಿಪತ್ತುಗಳ ಸಂಖ್ಯೆಯು ಆಯಾ ವ್ಯಕ್ತಿಗಳ ಮೇಲೆ ಅವಲಂಬಿತವಾಗಿರುತ್ತದೆಯೇ?*

ಹೌದು! ಅದು ಆಯಾ ವ್ಯಕ್ತಿಗಳ ಮೇಲೆ ಅವಲಂಬಿತವಾಗಿರುತ್ತದೆ. ಪ್ರಗತಿಯ ಮಾರ್ಗದಲ್ಲಿ ಅವರಿಗಿರುವ ಸಾಮರ್ಥ್ಯ, ಶಕ್ತಿ ಮತ್ತು ವಿಪತ್ತುಗಳ ವಿರುದ್ಧ ಪ್ರತಿರೋಧವನ್ನೊಡ್ಡುವ ಅವರ ಸ್ಥೈರ್ಯದ ಮೇಲೆ ಅದು ಅವಲಂಬಿತ–ವಾಗಿರುತ್ತದೆ. ಆದರೆ, ವಿಪತ್ತುಗಳು ಅವಶ್ಯಕತೆಯಿಲ್ಲದೇ ಇರುವ ಕೆಲವು ಜನರನ್ನು ನಾನು ಬಲ್ಲೆ.

*ಶ್ರೀಮಾತೆಯೇ, ವಿಪತ್ತುಗಳು ಮಹಾಕಾಳಿಯಿಂದ ಬರುತ್ತವೆಯೇ?*

ವಿಪತ್ತುಗಳೇ? ಇಲ್ಲ ಅದು ಮಹಾಕಾಳಿಯಿಂದಲೇ ಬರಬೇಕೆಂದೇನಿಲ್ಲ.

ಉದಾಹರಣೆಗೆ, ಒಂದು ವೇಳೆ ನೀವು ವಿಷವನ್ನು ಸೇವಿಸಿ ಮೃತ್ಯುವಶರಾದರೆ, ಅದಕ್ಕೆ ಮಹಾಕಾಳಿಯು ಕಾರಣಳಲ್ಲ. ಬದಲಿಗೆ ನಿಮ್ಮ ಸಾವಿಗೆ ನೀವೇ ಕಾರಣರಾಗಿರುತ್ತೀರಿ. ವ್ಯಕ್ತಿಗಳು ಕೆಲವೊಮ್ಮೆ ತಮ್ಮನ್ನು ತಾವು ಕೆಲವು ಸಂದಿಗ್ಧ ಪರಿಸ್ಥಿತಿಗೆ ಒಳಪಡಿಸಿಕೊಳ್ಳುತ್ತಾರೆ. ಅದಕ್ಕೆ ಅವರ ತಪ್ಪುಗಳೇ ಕಾರಣವಾಗಿರುತ್ತವೆ. ಅಂತಹ ಸಂದರ್ಭದಲ್ಲಿ ಅವನು ಸಂಪೂರ್ಣವಾಗಿ ನಾಶಕ್ಕೆ ಒಳಗಾಗುತ್ತಾನೆ; ಹಾಗೂ ಅವನ ನಾಶಕ್ಕೆ ಅವನಲ್ಲಿರುವ ಅಸಮತೋಲಿತ ಸಾಮರ್ಥ್ಯವೇ ಕಾರಣವಾಗಿರುತ್ತದೆ. ಅದಕ್ಕೆಂದು ದಿವ್ಯ ಶಕ್ತಿಯನ್ನು ದೂಷಿಸುವುದು ಸರಿಯಲ್ಲ. ಅದಕ್ಕೆ ಅವರ ಆಂತರ್ಯದಲ್ಲಿರುವ ಮೂರ್ಖತನದ ಪರಮಾವಧಿಯೇ ಕಾರಣವಾಗಿರುತ್ತದೆ.

*ಮಹಾಕಾಳಿಯಿಂದ ಬರುವ ವಿಪತ್ತುಗಳ ಸ್ವರೂಪವೇನು?*

ಅದರ ಆಗಮನದಿಂದ ನಿಮ್ಮೊಳಗೆ ಸಂತೋಷವು ತುಂಬುತ್ತದೆ. ಅದರ ಪ್ರವಾಹದಿಂದ ತುಂಬಿಕೊಂಡ ನಿಮ್ಮ ಹೃದಯದಲ್ಲಿ ಸಿಹಿಯಾದ ಬೆಚ್ಚಗಿನ ಅನುಭವವಾಗುತ್ತದೆ. ಇದರಿಂದ ನಿಮ್ಮಲ್ಲಿ ತೃಪ್ತ ಭಾವನೆಯ ಅನುಭವವಾಗುತ್ತದೆ.

*ಅದರ ಆಗಮನದ ಅಭೀಪ್ಸೆಯಲ್ಲಿ ನಾವು ಕಾದು ಕುಳಿತುಕೊಳ್ಳುವ ಅವಶ್ಯಕತೆಯಿದೆಯೇ ಅಥವಾ ಅದು ಸ್ವಾಭಾವಿಕವಾಗಿಯೇ ಬರುತ್ತದೆಯೇ?*

ಹೌದು ಪ್ರತಿಯೋರ್ವರೂ ಅದರ ಅಭೀಪ್ಸೆಯನ್ನು ಹೊಂದಿರಲೇಬೇಕು. ಆ ಅಭೀಪ್ಸೆಯು ಸಂಪೂರ್ಣವಾಗಿ ಪ್ರಾಮಾಣಿಕತೆಯಿಂದ ಕೂಡಿರಬೇಕು. ಮತ್ತು ಪ್ರಾಮಾಣಿಕತೆಯಿಂದ ಪ್ರಗತಿಯನ್ನು ಸಾಧಿಸಲು ಪ್ರಯತ್ನಿಸಬೇಕು. ಮತ್ತು "ಹೌದು, ನಾನು ಪ್ರಗತಿಯನ್ನು ಹೊಂದಲು ಇಚ್ಛಿಸುತ್ತೇನೆ" ಎಂದು ಯಾವಾಗಲೂ ಪ್ರಾಮಾಣಿಕವಾಗಿ ಹೇಳಿಕೊಳ್ಳುತ್ತಲೇ ಇರಬೇಕು. "ಯಾವ ಅಡೆತಡೆಗಳು ಬಂದರೂ ಸಹ ನಾನು ಅದನ್ನು ಎದುರಿಸಿ ಆ ಪ್ರಗತಿಯನ್ನು ಸಾಧಿಸುತ್ತೇನೆ" ಎಂಬ ಧೃಡ ನಿರ್ಧಾರವನ್ನು ಕೈಗೊಳ್ಳಬೇಕು. ಆಗ ಮಾತ್ರ ಅದರ ಆಗಮನವಾಗುತ್ತದೆ.

ಆದರೆ, ನಾನು ಈ ಮೊದಲೇ ಹೇಳಿದಂತೆ ಅದು ತೀವ್ರತರವಾದ ಸಂತೋಷವನ್ನು ಹೊತ್ತ ಪರಿಪೂರ್ಣ ಶಕ್ತಿಯ ರೂಪದಲ್ಲಿ ನಿಮ್ಮ ಒಳನುಗ್ಗಲು ಧಾವಿಸುತ್ತದೆ. ಆ ಸಂದರ್ಭದಲ್ಲಿ ಅದಕ್ಕೆ ಸಿದ್ಧನಾಗಿ ತನ್ನಲ್ಲಿ ನವಚೈತನ್ಯವನ್ನು ತುಂಬಿಕೊಳ್ಳಲು ಅಭಿಪ್ಸೆಯನ್ನು ಹೊಂದಿರುವ ವ್ಯಕ್ತಿಯು ತನ್ನ ಅದೇ ಹಳೆಯ ಮೂರ್ಖತನವನ್ನೇ ಪುನರಾವರ್ತಿಸುತ್ತ ಕೂರಬಾರದು. ತನಗೆ ಇಲ್ಲಿಯವರೆಗೆ

ಸಾಧ್ಯವಿರದ, ತನಗೆ ಕಷ್ಟಕರವೆಂದು ಕಂಡುಬಂದ ಯಾವುದೋ ಅನೂಹ್ಯ ಸಾಧನೆಯನ್ನು ಕೈಗೂಡಿಸಿಕೊಳ್ಳುತ್ತೇನೆ ಎಂಬ ಪ್ರಾಮಾಣಿಕವಾದ ಅಭೀಪ್ಸೆಯನ್ನು ತೊಟ್ಟ ವ್ಯಕ್ತಿಯು ಹಠಾತ್ತನೆ ನಿಮ್ಮ ಒಳನುಗ್ಗುತ್ತಿರುವ ಶಕ್ತಿಯ ಸಾಮರ್ಥ್ಯಕ್ಕೆ ನಲುಗಿ ಕೈಚೆಲ್ಲಿ ಕೂರಬಾರದು. ಹೀಗೆ ನಿಮ್ಮ ಒಳ ಪ್ರವಹಿಸುತ್ತಿರುವ ಶಕ್ತಿಯು ನಿಮ್ಮ ಅಭೀಪ್ಸೆಯನ್ನು ಕೈಗೂಡಿಸಿಕೊಳ್ಳಲು ನಿಮ್ಮನ್ನು ಸಿದ್ಧಪಡಿಸುತ್ತಿರುತ್ತದೆ. ಅದಕ್ಕಾಗಿ ಅದು ಒಂದು ಭಯಾನಕ ಪ್ರಹಾರದ ರೂಪದಲ್ಲಿ ನಿಮ್ಮನ್ನು ಚೇತನಾಯುಕ್ತವಾಗಿಸಲು ಯತ್ನಿಸುತ್ತದೆ. ಅದಕ್ಕೆ ನೀವು ಎದೆಗುಂದಬಾರದು. ಅದರ ಕಾರ್ಯವು ಕೊನೆಗೊಂಡಾಗ ನೀವು ವೈಭವೋಪೇತವಾದ ಸಂತೋಷದ ಸಾಮ್ರಾಜ್ಯದಲ್ಲಿರುತ್ತೀರಿ. ಹಾಗೂ ನಿಮ್ಮ ಹೃದಯದಲ್ಲಿ ಅದ್ಭುತವಾದ ಅನುಭೂತಿಯನ್ನು ಸಾಕ್ಷಾತ್ಕರಿಸಿಕೊಳ್ಳುತ್ತೀರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/324–25**

**ಧಾರ್ಮಿಕ ಸಮಾರಂಭಗಳು**

ನಾನೀಗ ನಿಮಗೆ ತಿಳಿಸುತ್ತಿರುವ ವಿಷಯವು ಬಹು ಗಂಭೀರವಾದ ತತ್ತ್ವವನ್ನು ಒಳಗೊಂಡಿದೆ: ನೀವು ನಿಜವಾದ ದೇವರನ್ನು ಕುರ್ಚಿಯ ಮೇಲೆ ಕೂರಿಸಿ ಪೂಜಿಸುತ್ತಾ, ಅವನನ್ನು ಅಲ್ಲಿಯೇ ಸ್ಥಾಪಿಸಬೇಕೆಂದು ಒತ್ತಾಯಿಸುತ್ತಿದ್ದರೆ, ಆ ದೇವರು ನಿಮ್ಮ ಪ್ರಯತ್ನವನ್ನು ಕಂಡು ಆನಂದಿಸಬಹುದು, ಆದರೆ, ಅದು ಅವನಿಗೆ ತೃಪ್ತಿಯನ್ನು ನೀಡಲು ಸಾಧ್ಯವಾಗುವದಿಲ್ಲ. ನಿಮ್ಮ ಪೂಜೆಯು ಅವನ ಮನಸ್ಸನ್ನು ಗೆಲ್ಲುವದಿಲ್ಲ, ಅವನಿಗೆ ಸಂತೋಷವನ್ನು ನೀಡುವದಿಲ್ಲ ಅಥವಾ ನಿಮ್ಮ ಆರಾಧನೆಯು ಅವನನ್ನು ವೈಭವೋಪೇತವಾಗಿ ಮಾರ್ಪಡಿಸುವದಿಲ್ಲ. ಅದು ನಿಮ್ಮ ಕಲ್ಪನೆ ಮಾತ್ರ. ಈ ಭೌತಿಕ ಮತ್ತು ಆಧ್ಯಾತ್ಮಿಕ ಪ್ರಪಂಚಗಳ ನಡುವೆ ಪ್ರಾಣಮಯದ ಪ್ರಭೃತಿಗಳಿಗೆ ಸೇರಿದ ಕ್ಷೇತ್ರವೊಂದಿದೆ. ಈ ಕ್ಷೇತ್ರವು ಇಂತಹುದೇ ಆದ ವಸ್ತು ವಿಷಯಗಳಿಂದ ತುಂಬಿ ತುಳುಕುತ್ತಿರುತ್ತದೆ. ಏಕೆಂದರೆ, ಅಲ್ಲಿರುವ ಪ್ರಾಣಮಯದ ಜೀವಿಗಳು ಅಂತಹ ದ್ರವ್ಯಗಳಿಂದಲೇ ಬದುಕನ್ನು ಸಾಗಿಸುತ್ತಿರುತ್ತವೆ. ಅದರಿಂದಲೇ ಅವುಗಳು ಸಂತೋಷವನ್ನು ಹೊಂದುತ್ತವೆ. ಅವುಗಳು ಅಂತಹ ಭೌತಿಕ ದ್ರವ್ಯಗಳಿಗೆ ಮಾತ್ರ ಪ್ರಾಮುಖ್ಯತೆಯನ್ನು ನೀಡುತ್ತವೆ; ನಮ್ಮ ಪ್ರಕಾರ ಯಾವ ದೇವತೆ ಅತಿ ಹೆಚ್ಚಿನ ಸಂಖ್ಯೆಯ ಭಕ್ತರನ್ನು, ಆರಾಧಕರನ್ನು ಹೊಂದಿರುತ್ತಾನೋ ಅಂತಹ ದೇವತೆಯೇ ಅತಿ ಶ್ರೇಷ್ಠನೆಂಬ ಭಾವನೆಯನ್ನು ತಳೆಯುತ್ತೇವೆ. ಆದರೆ, ಈ ಎಲ್ಲ ಕರ್ಮಾಚರಣೆಗಳು

ಆ ಭಗವಂತನನ್ನು ಸಂತೋಷಪಡಿಸಲು ಶಕ್ಯವಾಗಿವೆ ಎಂಬುದನ್ನು ಅರಿತವರು ಉಂಟೇ? ಇಲ್ಲಿ ನಾನು ನಿಜವಾದ ಭಗವಂತನ ಕುರಿತು ಮಾತನಾಡುತ್ತಿದ್ದೇನೆ. ಆ ಭಗವಂತನು ಉನ್ನತ ಮಾನಸಕ್ಕೂ ಮೀರಿದ ದಿವ್ಯ ನೆಲೆಯಲ್ಲಿ ವಾಸಿಸುತ್ತಿರುತ್ತಾನೆ. ಆ ಪ್ರಜ್ಞಾ ವಲಯದಲ್ಲಿರುವ ಭಗವಂತನನ್ನು ನಮ್ಮ ಪೂಜೆ–ಆರಾಧನೆಯಂತಹ ಭೌತಿಕ ಆಚರಣೆಗಳಿಂದ ಸಂತೃಪ್ತಗೊಳಿಸಬಹುದೆಂಬ ನಮ್ಮ ಭಾವನೆಯೇ ತಪ್ಪಾಗಿದೆ. ಈ ಕರ್ಮಾಚರಣೆಗಳಿಂದ ಅವನನ್ನು ಮೆಚ್ಚಿಸಲು ಸಾಧ್ಯವಿಲ್ಲ. ಇದಕ್ಕೆ ವ್ಯತಿರಿಕ್ತವೆಂಬಂತೆ ವೈಭವೋಪೇತವಾದ ಡಂಬಾಚರಣೆಗಳಿಂದ ಮುಕ್ತವಾದ ಒಳ್ಳೆಯತನ, ಬೌದ್ಧಿಕ ನಿಲುವು, ಸ್ವಾರ್ಥವಿಲ್ಲದ ಜೀವನ, ಸೂಕ್ಷ್ಮಾಂತಃಕರಣ ಅಥವಾ ಪ್ರಾಮಾಣಿಕವಾದ ಅಭೀಪ್ಸೆಗಳು ನೇರವಾಗಿ ಆ ಭಗವಂತನನ್ನು ತಲುಪಲು ಶಕ್ಯವಾಗಿವೆ. ಭಾವನೆಗಳೇ ಇಲ್ಲದ ಕೆಲವು ಧಾರ್ಮಿಕ ಆಚರಣೆಗಳನ್ನು ನಾನು ಕಂಡಿದ್ದೇನೆ. ಕೆಲವರು ಕಾಳಿಯನ್ನು ತಮ್ಮ ಮನೆ ದೈವವಾಗಿ ಆರಾಧಿಸುತ್ತ ತಮ್ಮ ಮನೆಯ ಪೂಜಾ ಗೃಹದಲ್ಲಿ ಅವಳನ್ನು ಸ್ಥಾಪಿಸಿರುತ್ತಾರೆ. ಹಾಗೂ ಅವಳನ್ನು ಆರಾಧಿಸುವ ಸಂದರ್ಭದಲ್ಲಿ ಯಾವುದೇ ಒಂದು ಸಣ್ಣ ನ್ಯೂನ್ಯತೆಯನ್ನೂ ಸಹ ಮಾಡದಷ್ಟು ಭಯ ಭಕ್ತಿಯಿಂದ ತಮ್ಮ ಪೂಜೆಯನ್ನು ನೆರವೇರಿಸುತ್ತಿರುತ್ತಾರೆ. ಒಂದು ವೇಳೆ ತಮ್ಮಿಂದ ಏನಾದರೂ ತಪ್ಪು ಸಂಭವಿಸಿದರೆ, ಆ ಮಹಾಕಾಳಿಯು ತಮ್ಮ ಮೇಲೆ ವಿಪತ್ತುಗಳನ್ನು ಹರಿಬಿಡಬಹುದೆಂಬ ಹುಚ್ಚು ಕಲ್ಪನೆಯಲ್ಲಿಯೇ ಅವರ ಆರಾಧನೆಯು ನಡೆಯುತ್ತಿರುತ್ತದೆ. ಮತ್ತು ಇನ್ನೂ ಕೆಲವೆಡೆ ಭಯಾನಕವಾದ ದೈತ್ಯಾಕಾರದ ದೈವತಗಳನ್ನು ತಂದು ಪೂಜಿಸುತ್ತಿರುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/194–97 – ಶ್ರೀಮಾತೆ**

ದುರ್ಗೆಯು ಮಾಹೇಶ್ವರಿ ಮತ್ತು ಮಹಾಕಾಳಿಯ ಗುಣಲಕ್ಷಣಗಳ ಸಂಯೋಜಿತ ರೂಪವಾಗಿ ಕಂಡುಬರುತ್ತಾಳೆ. ಆದರೆ, ಅವಳಿಗೆ ಮಹಾಲಕ್ಷ್ಮಿಯೊಂದಿಗೆ ಯಾವುದೇ ಸಂಬಂಧವಿಲ್ಲ. ಆದರೆ, ಯೋಗ ಸಿದ್ಧಾಂತದಲ್ಲಿ ಕೃಷ್ಣ ಮತ್ತು ಮಹಾಕಾಳಿಯ ಸಂಯೋಜನೆಯು ಒಂದು ಪ್ರಮುಖ ಶಕ್ತಿಯಾಗಿ ಕಂಡುಬರುತ್ತದೆ. ಸಾಧನೆಯ ಹಂತದಲ್ಲಿ ನಿಮ್ಮ ಪ್ರಜ್ಞೆಯೊಳಗೆ ಕೃಷ್ಣ ಮತ್ತು ಮಹಾಕಾಳಿಯ ಹೆಸರುಗಳು ಒಟ್ಟೊಟ್ಟಿಗೆ ಸ್ಥಾಯಿಯಾಗಿದ್ದೇ ಆದಲ್ಲಿ ಅದು ಒಳ್ಳೆಯ ಸಂಕೇತವಾಗಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/70 – ಶ್ರೀ ಅರವಿಂದರು**

ವಿಶ್ವಮಾತೆಯು ತನ್ನ ವ್ಯಾಪ್ತ ವಿಶ್ವದಲ್ಲಿರುವ ಸಕಲ ದ್ರವ್ಯಗಳು ಮತ್ತು ಸರ್ವ ದಿವ್ಯ ವ್ಯಕ್ತಿತ್ವಗಳ ಸಮಗ್ರ ಅಸ್ತಿತ್ವವಾದ ವೈಶ್ವಿಕ ಶಕ್ತಿಯ ರೂಪದಲ್ಲಿರುತ್ತಾಳೆ. ಏಕೆಂದರೆ, ಅವಳ ಅಸ್ತಿತ್ವಕ್ಕೆ ಹೊರತಾದ ಯಾವ ಭಾಗವೂ ಸಹ ಪ್ರಕಟಗೊಳ್ಳಲು ಸಾಧ್ಯವಿಲ್ಲ. ಆದರೆ, ದಿವ್ಯವಾಣಿ–ದಿವ್ಯ ದರ್ಶನಗಳ ಹಂತದಲ್ಲಿ ಅದು ಶಿವ ಅಥವಾ ಶಕ್ತಿ ಇಬ್ಬರಲ್ಲಿ ಕೇವಲ ಒಬ್ಬರ ದಿವ್ಯ ಅಂಶವಾಗಿ ಪ್ರಕಟವಾಗುತ್ತದೆ ಎಂದು ನಂಬಲಾಗಿತ್ತು. ಹಾಗೂ ಅವರ ಈ ಎರಡೂ ಅಂಶಗಳ ಒಕ್ಕೂಟವನ್ನು ಕೃಷ್ಣ–ಮಹಾಕಾಳಿಯ ಅಭಿವ್ಯಕ್ತಿಯಾಗಿ ನೋಡಲಾಗುತ್ತಿತ್ತು.

*(1995 ರಲ್ಲಿ ಪಾಂಡಿಚೇರಿಯ ಶ್ರೀ ಮಿಶ್ರಾ ಟ್ರಸ್ಟ್ ವತಿಯಿಂದ ಪ್ರಕಟವಾದ ಅಮೃತದ 49–67 ನೇ ಪುಟಗಳಲ್ಲಿ ಕೆ. ಅಮೃತಾ ಅವರಿಂದ ರಚಿಸಲ್ಪಟ್ಟಿದೆ.)*

## ಕೃಷ್ಣ ಮತ್ತು ಕಾಳಿ – ದುಷ್ಟ ಸಂಹಾರಕರು

### ನಾಲ್ಕು ಅಂಶಗಳು

*ಶಿಷ್ಯ: ಉನ್ನತ ಶಕ್ತಿಯು ಇಳಿದು ಬರುವಾಗ ಅದರ ಅವರೋಹಣಕ್ಕಾಗಿರುವ ಆಧಾರಕ್ಕೆ ಮರ್ತ್ಯದ ಅವಶ್ಯಕತೆ ಇಲ್ಲ ಎಂಬುದು ನಿಜವೇ? ಏಕೆಂದರೆ, ಆ ಉನ್ನತ ಶಕ್ತಿಯು ಇಳಿದು ಬರುವಾಗ ಆಧಾರವು ಮುರಿದು ಹೋದರೂ ಸಹ ಅದರ ಅವತರಣಕ್ಕೆ ಯಾವುದೇ ವ್ಯತ್ಯಯಗಳು ಉಂಟಾಗುವದಿಲ್ಲವೇ?*

ಶ್ರೀ ಅರವಿಂದರು: ಇಲ್ಲಿ ಮಹಾಸರಸ್ವತಿ ಮತ್ತು ಮಾಹೇಶ್ವರಿಯ ಅಂಶಗಳು ಉತ್ತಮವಾಗಿ ಕಾರ್ಯವನ್ನು ನಿರ್ವಹಿಸುತ್ತಿರುತ್ತವೆ. ಈ ಹಿಂದೆ ನಾನೂ ಸಹ ಅದೇ ರೀತಿಯಲ್ಲಿ ನನ್ನ ಕಾರ್ಯವನ್ನು ನಿರ್ವಹಿಸುತ್ತಿದ್ದೆ. ಇಂತಹ ಸಂದರ್ಭದಲ್ಲಿ ಹಲವರಿಗೆ ಮಹಾಕಾಳಿಯ ಶಕ್ತಿಯನ್ನು ಸಹಿಸಲು ಸಾಧ್ಯವಾಗುವದಿಲ್ಲ. ಇನ್ನು ಕೆಲವರು ಮಾತ್ರ ಮಹಾಕಾಳಿ ಶಕ್ತಿಯನ್ನು ಸಮರ್ಥವಾಗಿ ಸಹಿಸಿಕೊಳ್ಳುತ್ತಾರೆ. ಎಲ್ಲರೂ ಈ ಸಾಮರ್ಥ್ಯವನ್ನು ಗಳಿಸಿಕೊಳ್ಳಬೇಕಾದರೆ ನಾಲ್ಕು ವಿಧವಾದ ಅಂಶಗಳು ನಮ್ಮೊಳಗೆ ಸಮನ್ವಯವನ್ನು ಸಾಧಿಸಿರಬೇಕು. ಆ ಆದರ್ಶ ಸ್ಥಿತಿಯನ್ನು ಗಳಿಸಿಕೊಳ್ಳಬೇಕಾದರೆ, ಆ ನಾಲ್ಕು ಅಂಶಗಳಲ್ಲಿ ನಮಗೆ ಸರಿದೋರುವ ಯಾವುದಾದರೂ ಒಂದು ಅಂಶವನ್ನು ಅನುಸರಿಸುತ್ತ ಸಾಗಬೇಕು. ಆಗ ಇನ್ನುಳಿದ ಮೂರು ಅಂಶಗಳು ಅದನ್ನು ಬೆಂಬತ್ತಿ ಬರುತ್ತಾ ನಮ್ಮನ್ನು ಸಂಧಿಸುತ್ತವೆ.

*(ಎ.ಬಿ. ಪುರಾಣಿ ಅವರಿಂದ ಸಂಜೆ ಮಾತುಗಳು, ಪುಟ 482)*

ಕೃಷ್ಣ, ಕಾಳಿ, ಕರ್ಮ, ಕಾಮ

ಕೃಷ್ಣನು ಈ ವಿಶ್ವದ ಆನಂದಮಯವನ್ನು ಅನುಭವಿಸುವ ಈಶ್ವರನಾಗಿದ್ದಾನೆ.

ಕಾಳಿಯು ಈಶ್ವರನ ಆನಂದಕ್ಕೆ ಅನುಗುಣವಾಗಿ ಅವನ ಲೀಲೆಯನ್ನು ಕಾರ್ಯರೂಪಕ್ಕೆ ತರುವ ಶಕ್ತಿಯಾಗಿದ್ದಾಳೆ.

ಕರ್ಮವು ಒಂದು ದಿವ್ಯ ಕ್ರಿಯೆಯಾಗಿದೆ.

ಕಾಮವು ದಿವ್ಯಾನಂದವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 11/478 – ಶ್ರೀ ಅರವಿಂದರು**

ಸರ್ವವೂ ದಿವ್ಯತೆಯ ಸ್ವರೂಪವೇ ಆಗಿದೆ. ಹಾಗೂ ಆ ದಿವ್ಯತೆಯೊಂದೇ ಚಿರಂತನವಾದ ಅಸ್ತಿತ್ವವನ್ನು ಹೊಂದಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/362 – ಶ್ರೀಮಾತೆ**

> *ಟಿ. ಅವರು ಕೇಳಿದ ಪ್ರಶ್ನೆ: ದೇವತೆಗಳೇಕೆ ನಮಗೆ ಸಹಾಯವನ್ನು ಮಾಡುವದಿಲ್ಲ? ಅವರೇಕೆ ನಮ್ಮನ್ನು ಸದಾ ಬಂಧನದಲ್ಲಿಯೇ ಇರಿಸಿರುತ್ತಾರೆ?*

ಶ್ರೀಮಾತೆ: ಇದನ್ನು ಶ್ರೀ ಅರವಿಂದರ ವಿಚಾರದಿಂದಲೇ ಅರಿಯಬೇಕು. ಅವರ ಪ್ರಕಾರ ದೈವತ್ವವೇ ಅಂತಿಮವಲ್ಲ. ಅವರು ದೇವತೆಗಳ ವಲಯಕ್ಕೆ, ಆ ದೇವತೆಗಳ ಶಕ್ತಿಯ ಪರಿಧಿಗೆ ಮಾತ್ರ ನಮ್ಮನ್ನು ನಾವು ಸೀಮಿತವಾಗಿಸಿಕೊಳ್ಳುವದನ್ನು ಖಂಡಿಸುತ್ತಾರೆ. ನಾವು ಆ ದೇವತೆಗಳಿಗಿಂತಲೂ ವ್ಯಾಪ್ತವೂ–ಪರಿಪೂರ್ಣರೂ ಆಗಬೇಕೆಂಬುದನ್ನು ತಿಳಿಸುತ್ತಾರೆ.

ಶ್ರೀ ಅರವಿಂದರು ಸದಾ ಕಾಲ ದಿವ್ಯ ಮಾತೆಯ ಕುರಿತು ಧೇನಿಸುತ್ತಿದ್ದರು. ಅದುವೇ ಅವರಿಗೆ ಅತಿ ಮುಖ್ಯವಾದ ವಿಷಯವಾಗಿತ್ತು. ದಿವ್ಯ ಮಾತೆಯ ಕುರಿತು ಪ್ರಸ್ತಾಪಿಸುತ್ತ ಅವರು, ದಿವ್ಯ ಮಾತೆಗೆ ಹಲವಾರು ಅಂಶಗಳಿದ್ದು, ಅವುಗಳಲ್ಲಿ ಕೆಲವಾರು ಅಂಶಗಳು ಮಾತ್ರ ದರ್ಶನಕ್ಕೆ ಕಂಡಿದ್ದು, ಇನ್ನೂ ಅದೇಷ್ಟೋ ಅಂಶಗಳು

ಅನೂಹ್ಯವಾಗಿವೆ ಎಂದು ತಿಳಿಸಿದ್ದರು. ಒಂದು ವೇಳೆ ಅವರು ಕಾಳಿಯ ಅಸ್ತಿತ್ವದ ಮೂಲಕವೇ ದಿವ್ಯ ಮಾತೆಯ ಅಸ್ಮಿತೆಯನ್ನು ಪ್ರಕಟಿಸಿದ್ದರೆ, ನಾವು ಹೇಳುತ್ತಿರುವ ಸಕಲ ದೇವತೆಗಳಿಗೆ ಅದು ಸಂಬಂಧಿಸಿದೆ ಎಂದು ಹೇಳಬಹುದಾಗಿತ್ತು. ಏಕೆಂದರೆ, ಅವರು *The Mother* ನಲ್ಲಿ ಹೇಳಿದಂತೆ ಅಗೋಚರವಾಗಿರುವ ದಿವ್ಯ ಮಾತೆಯ ಆ ಇನ್ನುಳಿದ ಅಂಶಗಳು ಪ್ರಕಟಗೊಳ್ಳಲು ಸೂಕ್ತವಾಗಿರುವ ಕಾಲ, ಅವತರಣಿಕೆಯ ಅಗತ್ಯತೆ ಮತ್ತು ಅದನ್ನು ಬರಮಾಡಿಕೊಳ್ಳುವ ಪೂರ್ವದಲ್ಲಿ ನಾವು ಮಾಡಬೇಕಿರುವ ಕಾರ್ಯಗಳನ್ನು ಅವಲಂಬಿಸಿರುತ್ತದೆ. ಮತ್ತು ಅವರು ಮಹಾಕಾಳಿಯ ಕುರಿತು ಪ್ರಸ್ತಾಪಿಸುತ್ತ, ಕಾಳಿಯ ಅಂಶವನ್ನು ಅರ್ಥಮಾಡಿಕೊಳ್ಳದ ಹೊರತು ಈ ವಿಶ್ವವು ತನ್ನ ಕ್ರಿಯೆಯನ್ನು ಸಮರ್ಥವಾಗಿ ನಿರ್ವಹಿಸುವದಿಲ್ಲ. ಹಾಗು ಒಂದು ರೀತಿಯ ಹೆದರಿಕೆಯ ಭಾವನೆಯು ಮರ್ತ್ಯವನ್ನು ಆ ಮಹಾಕಾಳಿಯ ಅಂಶವನ್ನು ಸ್ವಾಗತಿಸುವದರಿಂದ ಹಿಮ್ಮೆಟ್ಟಿಸುತ್ತದೆ.

*(ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 11 ಫೆಬ್ರವರಿ, 1961)*

**ಕಾಳಿ ಮತ್ತು ವಿಶ್ವ ಯುದ್ಧ**

ದ್ವಿತೀಯ ವಿಶ್ವ ಯುದ್ಧದ ನಂತರ ನಾನು ಕಾಳಿಯನ್ನು ಶಾಂತವಾಗಿಸಿದ್ದೇನೆ. ಆದರೆ, ಇತ್ತೀಚೆಗೆ ಅವಳು ಮತ್ತೆ ಪ್ರಕ್ಷುಬ್ಧಳಾಗಿದ್ದಾಳೆ! ಬರಲಿರುವ ಕಾಲವು ನಿರ್ಣಾಯಕವಾದ ಸಂದರ್ಭಗಳಾಗಿ ಬದಲಾಗಲಿವೆ. ಅಂದು ಏನು ಬೇಕಾದರೂ ಘಟಿಸಬಹುದು! ಜನರು ತಮ್ಮ ಅಹಮಿಕೆಯನ್ನು ತ್ಯಜಿಸಿದರೆ ಮಾತ್ರ ಆ ಆಸ್ಫೋಟನೆಯಿಂದ ತಪ್ಪಿಸಿಕೊಳ್ಳಬಲ್ಲರು!

*(ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 28 ಜನವರಿ, 1964)*

**ಲಯಕಾರಕ**

'...ಸನಾತನಂ ಪುರುಷಂ ಪುರಾಣಂ' ಮಹಾಪ್ರಳಯದ ಅಂತ್ಯದಲ್ಲಿ ಮಹಾಪ್ರಸೃಷ್ಟಿಯನ್ನು ಆರಂಭಿಸುವ ಬ್ರಹ್ಮನು ವೈಶ್ವಿಕ ಪುರುಷನ ಒಂದಂಶವೇ ಆಗಿದ್ದಾನೆ. ಆ ಪುರುಷನು ಚಿರಂತನವಾದ ನಿಯತಿ ನೇಮಗಳ ರಕ್ಷಕನಾಗಿದ್ದು, ಅವನು ಸೃಷ್ಟಿಯಾದ ಜಗತ್ತಿನ ಅಸ್ತಿತ್ವವನ್ನು ಕಾಪಾಡುತ್ತಿರುತ್ತಾನೆ. ಆದರೆ,

ಹೊಸದೊಂದನ್ನು ಸೃಷ್ಟಿಸಬೇಕಾದರೆ, ಹಳೆಯದು ನಾಶಹೊಂದಲೇಬೇಕು. ಹಾಗೆ ಹಳೆಯದನ್ನು ನಾಶಮಾಡುವ ಆ ಲಯಕಾರಕನಾರು? ಆ ಮಹಾಕಾಲನು ಯಾರು? ಪ್ರಳಯಕಾಲದ ಆ ಮೃತ್ಯುದೇವನು ಯಾರು? ಎಂಬ ಪ್ರಶ್ನೆಗೆ ಉತ್ತರವೇ, ತಾಂಡವ ನೃತ್ಯ ಪ್ರವೀಣನಾದ ರುದ್ರ! ಇನ್ನು ಪ್ರಳಯ ಕಾಲದ ಯುದ್ಧದಲ್ಲಿ ದಿಗಂಬರಳಾಗಿ ದೈತ್ಯರನ್ನು ಸಂಹರಿಸುತ್ತ ಅವರ ರಕ್ತದಿಂದ ಅಭೀಷೇಕಗೈಯುತ್ತಾ, ಅವರ ಕಪಾಲಗಳನ್ನು ಮಾಲೆಯಾಗಿ ಧರಿಸಿಕೊಂಡ ಆ ರಣಭೀಕರ ದೇವಿಯು ಯಾರು? ಎಂಬ ಪ್ರಶ್ನೆಗೆ ಉತ್ತರವೇ, ಮಹಾಕಾಳಿ. ಅವಳು ಪ್ರಳಯಾಗ್ನಿ–ಪ್ರಳಯ ಮಾರುತರನ್ನು ಸೃಜಿಸುವ ಸಂಹಾರಕಳಾಗಿದ್ದಾಳೆ. ಕ್ಷಾಮರ–ಡಾಮರಗಳನ್ನು ತಂದೊಡ್ಡಿ, ವಿನಾಶ–ವಿಪತ್ತುಗಳ ಸುರಿಮಳೆಯನ್ನೇ ಸುರಿಸಿ, ಭೂಕಂಪನ–ಸುನಾಮಿಗಳನ್ನು ಸೃಜಿಸಿ ಈ ಜಗತ್ತನ್ನು ಮಹಾಪ್ರಳಯದಲ್ಲಿ ಮುಳುಗಿಸುತ್ತಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/380–381 – ಶ್ರೀ ಅರವಿಂದರು**

ಮಾನವನ ಹೃದಯದೊಳಗೆ ಮನೆಮಾಡಿಕೊಂಡಿರುವ ದೌರ್ಬಲ್ಯವು ಕೇವಲ ಸಾಂತ್ವನದ ನುಡಿಗಳನ್ನು ಅಥವಾ ಅಲ್ಪಮಟ್ಟಿನ ಶಾಂತಿಯನ್ನು ನೀಡುವ ನೀತಿ ಕಥೆಗಳನ್ನು ಮಾತ್ರ ಬಯಸುತ್ತದೆ; ಆದರೆ, ಆ ಕಥಾನಕಗಳು ಪೂರ್ಣರೂಪದ ಸತ್ಯವನ್ನು ಹೊಂದಿರುವದಿಲ್ಲ. ಏಕೆಂದರೆ, ಅವುಗಳಲ್ಲಿ ಕೆಲವು ವಿಷಯಗಳು ಪ್ರಜ್ಞೆಗೆ ನಿಲುಕುವಂತಹ ಸರಳ ವಿಚಾರಗಳನ್ನು ಪ್ರಸ್ತುತಪಡಿಸಿದರೆ, ಇನ್ನೊಂದೆಡೆ ನಮ್ಮ ಜ್ಞಾನದ ಪರಿಧಿಯನ್ನೂ ಮೀರಿದ ಅದಾವುದೋ ಅಗೋಚರ ವಿಚಾರಗಳನ್ನು ಮಂಡಿಸುತ್ತಿರುತ್ತದೆ. ಹಾಗಾಗಿ ಅದರ ಇಡೀ ಸಾರಸರ್ವಸ್ವವನ್ನು ಒಟ್ಟಿನಲ್ಲಿ ಅರ್ಥೈಸಿಕೊಳ್ಳುವುದು ಮರ್ತ್ಯಮಾತ್ರಕ್ಕೆ ಸಾಧ್ಯವಾಗುವದಿಲ್ಲ. ಹಾಗಾಗಿಯೇ ಭಾಗಶಃ ಧಾರ್ಮಿಕವಾದಿಯಾದ, ಪ್ರಗತಿಪರ ಚಿಂತಕನಾದ, ಭಾವನಾತ್ಮಕವಾದ ಆದರ್ಶಗಳನ್ನು ಮೈಗೂಡಿಸಿಕೊಂಡ, ತೀವ್ರತರವಾದ ಸಂವೇದನೆಗಳನ್ನು ಹೊಂದಿದ ಅಥವಾ ಕರುಣಾಳುವಾದ ವ್ಯಕ್ತಿಗಳು ಉಗ್ರತರವಾದ ಅಂಶಗಳಿಂದಲೂ, ಕಠಿಣತಮವಾದ ನೀತಿಗಳಿಂದಲೂ ಅಂತರವನ್ನು ಕಾಯ್ದುಕೊಂಡು ಬದುಕುತ್ತಿರುತ್ತಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/381 – ಶ್ರೀ ಅರವಿಂದರು**

ಪ್ರಳಯದ ನಡುವೆಯೂ ಈ ವಿಶ್ವಾತ್ಮವು ದಿವ್ಯತೆಯ ಸಾಮೀಪ್ಯವನ್ನು ಅನುಭವಿಸುವಂತಹ, ಅದರ ಸಾನಿಧ್ಯದಲ್ಲಿ ಸಂತೋಷ–ಆನಂದಗಳನ್ನು ನೀಡುವಂತಹ ಶಕ್ತಿಯೊಂದು ಸದಾ ಜೊತೆಯಾಗಿ ನಡೆಯುತ್ತಿರುತ್ತದೆ. ಅದು ಕಾಳಕರಾಳವಾದ ಕಾಳಿಯ ರಣಭೀಕರ ಮೊಗದಲ್ಲಿ ಶಾಂತತೆಯೇ ಮೈವೆತ್ತು ಬಂದಂತಿರುವ ದಿವ್ಯ ಮಾತೆಯ ಚಿರಂತನ ವದನವನ್ನು ಪ್ರತಿಬಿಂಬಿಸುತ್ತದೆ; ವಿನಾಶದ ನಡುವೆಯೂ ನಮ್ಮನ್ನು ರಕ್ಷಿಸಲೆಂದು ಬರುವ ಆತ್ಮಿಯ ಮಿತ್ರನ ಸಹಯೋಗವನ್ನು ಒದಗಿಸುತ್ತದೆ; ದುಷ್ಟತನವೇ ತುಂಬಿದ ಅನೃತ ರಾಜ್ಯದಲ್ಲಿ ಶುದ್ಧ ಅಸ್ಮಿತೆಯನ್ನು ಹೊಂದಿರುವ ಓರ್ವ ದಯಾಳುವಿನ ಸಾನಿಧ್ಯವನ್ನು ಪ್ರಕಟಪಡಿಸುತ್ತದೆ; ಮೃತ್ಯುವಶವಾಗಿ ಮರೆಯಾಗುವ ಕಾಲದಲ್ಲಿ ಅಮರತ್ವವನ್ನು ಕರುಣಿಸುವ ದಿವ್ಯ ಗುರುವೋರ್ವನ ದರ್ಶನವನ್ನು ನೀಡುತ್ತದೆ. ಕತ್ತಲೆಯನ್ನೇ ಕಾರಸ್ಥಾನವಾಗಿಸಿ–ಕೊಂಡ ರಾಕ್ಷಸರುಗಳೂ, ಉಗ್ರತರವಾದ ಶಕ್ತಿಗಳಿಂದ ಸೊಕ್ಕಿದ ದೈತ್ಯರುಗಳೂ ಆ ದಿವ್ಯತೆಯ ಧಾರಕನಾದ ಭಗವಂತನ ದಂಡಶಾಸನಕ್ಕೆ ಹೆದರಿ ಓಡಿಹೋಗುತ್ತಾರೆ. ಆದರೆ, ಪರಮ ಚಿರಂತನನಾದ ಆ ಭಗವಂತನ ಅಮರನಾಮವನ್ನು ಹಾಡುತ್ತಾ, ಅವನ ಋತಚೇತನವನ್ನು ಧ್ಯಾನಿಸುತ್ತ ಪೂರ್ಣತೆಯೆಡೆಗೆ ಮುನ್ನುಗ್ಗುತ್ತಿರುವ ಸಿದ್ಧರು ಅವನ ಅನಂತರೂಪಗಳ ಮುಂದೆ ಮಂಡಿಯೂರಿ ನಮಸ್ಕರಿಸುತ್ತಾರೆ. ಹಾಗೂ ಆ ಪ್ರತಿಯೊಂದು ರೂಪಗಳು ಬೋಧಿಸುತ್ತಿರುವ ರಹಸ್ಯಯುತವಾದ ಜ್ಞಾನವನ್ನು ಪಡೆದು ಪಾವನರಾಗುತ್ತಾರೆ. ಹಾಗಾಗಿ ಈ ಲೋಕವನ್ನು ನಾಶಪಡಿಸಲೆಂದು ಕಾದುಕುಳಿತಿರುವ ಕತ್ತಲೆಯ ಕುವರರು, ಅಜ್ಞಾನದ ಆರಾಧಕರು, ದುಷ್ಟತನವನ್ನೇ ಕಾಯಕವನ್ನಾಗಿಸಿ–ಕೊಂಡವರು, ಕತ್ತಲೆಯಲ್ಲಿ ಬೆತ್ತಲೆ ತಿರುಗುವ ರಾಕ್ಷಸ ಶಕ್ತಿಗಳು ಆ ಭಗವಂತನ ದಾಳಿಗೆ ಕೊಚ್ಚಿಹೋಗುವವರು ಹಾಗಾಗಿ ಭಗವಂತನ ಮೇಲೆ ಭರವಸೆಯನ್ನಿಟ್ಟುಕೊಂಡ ಮರ್ತ್ಯರು ಆ ಅನೃತ ಶಕ್ತಿಗಳಿಗೆ ಹೆದರುವ ಅವಶ್ಯಕತೆಯಿಲ್ಲ. ಆ ರುದ್ರ ಭಯಂಕರನ ಪ್ರತಿಯೊಂದು ನಡೆಯೂ ನಮ್ಮನ್ನು ಆ ದಿವ್ಯಪ್ರಕಾಶದೆಡೆ, ಋತಪೂರ್ಣದ ತಾಣದೆಡೆ ಕರೆದೊಯ್ಯುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/389–90 – ಶ್ರೀ ಅರವಿಂದರು**

**ರುದ್ರನ ಶಕ್ತಿ**

ಈ ರುದ್ರನ ಶಕ್ತಿಯು ಅತ್ಯಂತ ಪ್ರಬಲವಾದ ರೌದ್ರರೂಪಿಯಾದ ಶಕ್ತಿಯಾಗಿದ್ದು, ಇದು ಸದಾ ಅಸುರರ ಸಂಹಾರದಲ್ಲಿ ತೊಡಗಿದ ಮಹಾಕಾಳಿಯ ಜೊತೆಯಾಗಿ ನಿಂತಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/271 – ಶ್ರೀ ಅರವಿಂದರು**

ವಿಶ್ವಮಾತೆಯು ತನ್ನ ವ್ಯಾಪ್ತವಿಶ್ವದಲ್ಲಿರುವ ಸಕಲ ದ್ರವ್ಯಗಳು ಮತ್ತು ಸರ್ವ ದಿವ್ಯ ವ್ಯಕ್ತಿತ್ವಗಳ ಸಮಗ್ರ ಅಸ್ತಿತ್ವವಾದ ವೈಶ್ವಿಕ ಶಕ್ತಿಯ ರೂಪದಲ್ಲಿರುತ್ತಾಳೆ. ಏಕೆಂದರೆ, ಅವಳ ಅಸ್ತಿತ್ವಕ್ಕೆ ಹೊರತಾದ ಯಾವ ಭಾಗವೂ ಪ್ರಕಟಗೊಳ್ಳಲು ಸಾಧ್ಯವಿಲ್ಲ. ಆದರೆ, ದಿವ್ಯವಾಣಿ–ದಿವ್ಯ ದರ್ಶನಗಳ ಹಂತದಲ್ಲಿ ಅದು ಶಿವ ಅಥವಾ ಶಕ್ತಿ ಇಬ್ಬರಲ್ಲಿ ಕೇವಲ ಒಬ್ಬರ ದಿವ್ಯ ಅಂಶವಾಗಿ ಪ್ರಕಟವಾಗುತ್ತದೆ ಎಂದು ನಂಬಲಾಗಿತ್ತು. ಹಾಗೂ ಅವರ ಈ ಎರಡೂ ಅಂಶಗಳ ಒಕ್ಕೂಟವನ್ನು ಕೃಷ್ಣ–ಮಹಾಕಾಳಿಯ ಅಭಿವ್ಯಕ್ತಿಯಾಗಿ ನೋಡಲಾಗುತ್ತಿತ್ತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/67–68**

> *"ಅದೇ ಪುಸ್ತಕದ 44 ನೇ ಪುಟದಲ್ಲಿ ನೀವು ಮಹಾಕಾಳಿಯ ಕುರಿತು ಹೇಳುತ್ತ, "ಅವಳ ಎರಡೂ ಕೈಗಳಲ್ಲಿ ಒಂದು ಪ್ರಹಾರವನ್ನು ಗೈದರೆ ಇನ್ನೊಂದು ಪುರಸ್ಕಾರವನ್ನು ನೀಡುತ್ತದೆ" ಎಂದು ಬರೆದಿದ್ದೀರಿ. ಈ ಹೇಳಿಕೆಯಲ್ಲಿ ಯಾವುದನ್ನು ನೀವು "ಪ್ರಹಾರ" ಎಂದು ಹೇಳುತ್ತೀರಿ?*

ನಾನು ಹೇಳಿದ ಆ ವ್ಯಾಖ್ಯಾನವು ಈ ವಿಶ್ವದಲ್ಲಿ ಅವಳು ನಿರ್ವಹಿಸುವ ಸಾಮಾನ್ಯವಾದ ಕ್ರಿಯೆಯನ್ನು ವ್ಯಕ್ತಪಡಿಸುತ್ತದೆ. ಉದಾಹರಣೆಗೆ: ಅವಳು ಅಸುರರ ಮೇಲೆ ಪ್ರಹಾರಗೈದು ಅವರನ್ನು ಸಂಹರಿಸುತ್ತಾಳೆ. ಅಲ್ಲದೆ ಸಾಧನೆಯಲ್ಲಿ ತೊಡಗಿದ ಸಾಧಕರ ಮಾರ್ಗದಲ್ಲಿ ಅಡ್ಡಿ–ಆತಂಕಗಳನ್ನು ಒಡ್ಡಿ ಅವರ ಉನ್ನತಿಯನ್ನು ನಿರ್ಬಂಧಗೊಳಿಸುವ ಅನೃತ ಶಕ್ತಿಗಳು ಮತ್ತು ವಿನಾಶವನ್ನು ಹೊತ್ತುತರುವ ಕಂಟಕ ಶಕ್ತಿಗಳ ಮೇಲೆ ಅವಳು ಪ್ರಹಾರ ಗೈಯುತ್ತಾಳೆ. ಆದರೆ, ಆ

ಮಾತೆಯು ಎಂದಿಗೂ ನಿಮ್ಮ ಮೇಲೆ ಮಹಾಕಾಳಿಯ ಶಕ್ತಿ ಅಥವಾ ಒತ್ತಡಗಳನ್ನು ಬಳಸುವದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/210–211**

## ಪ್ರಾಣಮಯದಲ್ಲಿ ಕಾಳಿಯ ಸಾನಿಧ್ಯ

> *ಇಂದು ನಾನು ಪ್ರಾರ್ಥನೆಯನ್ನು ಮಾಡುತ್ತಿದ್ದಾಗ ನನಗೆ ಕಾಳಿಮಾತೆಯ ದರ್ಶನವಾಯಿತು. ಅವಳು ಕಾಳಕರಾಳವಾದ ತನ್ನ ನಗ್ನ ದೇಹವನ್ನು ಹೊತ್ತು ಬಂದಿದ್ದಳು ಮತ್ತು ಅವಳು ಶಿವನ ಬೆನ್ನಿನ ಮೇಲೆ ತನ್ನ ಪಾದಗಳನ್ನೂರಿ ನಿಂತಿದ್ದಳು. ಕಾಳಿಮಾತೆಯು ಈ ರೀತಿಯ ರೌದ್ರರೂಪಿಯಾಗಿ ಕಾಣಿಸಿಕೊಳ್ಳಲು ಕಾರಣವೇನು?*

ಅದು ಪ್ರಾಣಮಯದ ಸಂಕೇತವಾಗಿದೆ. ವಿನಾಶಕಾರಿಯಾದ ಕಾಳಿಯು ತನ್ನ ಸುತ್ತ ನೆರೆದು ದಾಳಿಗೆ ಸಿದ್ಧವಾಗಿರುವ ಕ್ರೌರ್ಯ–ಕ್ರಾಂತಿಗಳನೆಲ್ಲ ಸಂಹರಿಸುವ ಭೀಕರ ಕಾಳಗದ ದರ್ಶನವಾಗಿದೆ. ಅವಳ ಆ ರೂಪವು ಅಜ್ಞಾನಯುತವಾದ ಈ ವಿಶ್ವದಲ್ಲಿ ಪ್ರಕೃತಿಯನ್ನು ಪ್ರತಿನಿಧಿಸುತ್ತದೆ. ದುಷ್ಟತನವನ್ನು ಸಂಹರಿಸುವ ಕದನ–ಕೋಲಾಹಲದಲ್ಲಿ ಅವಳು ತನ್ನ ಸುತ್ತಲಿರುವ ಎಲ್ಲವನ್ನು ನಾಶಮಾಡಿಬಿಡುತ್ತಿದ್ದಳು. ಕೊನೆಕೊನೆಗೆ ಅವಳು ದಿವ್ಯತೆಯನ್ನು ತನ್ನ ಕಾಲಡಿಯಲ್ಲಿ ಹಾಕಿಕೊಂಡು ತುಳಿಯುತ್ತಿರುತ್ತಾಳೆ. ಅಲ್ಲಿಯವರೆಗೆ ಅವಳಿಗೆ ತಾನು ದಿವ್ಯತೆಯನ್ನು ತುಳಿಯುತ್ತಿದ್ದೆನೆ ಎಂಬುದರ ಅರಿವೂ ಸಿಗುವುದಿಲ್ಲ. ಯಾವಾಗ ಅವಳು ಅದನ್ನು ಅರಿತುಕೊಳ್ಳುತ್ತಾಳೋ ಆಗಲೇ ಅವಳು ತನ್ನ ವಿನಾಶದ ಕಾರ್ಯವನ್ನು ನಿಲ್ಲಿಸಿಬಿಡುತ್ತಾಳೆ. ಇದು ಆ ಪ್ರಾಣಮಯದ ಸಂಕೇತವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/68–69 – ಶ್ರೀ ಅರವಿಂದರು**

## ರೌದ್ರರೂಪಿಯಾದ ಶಕ್ತಿ ಮತ್ತು ಕ್ರೋಧಯುತವಾದ ಪ್ರೇಮ

> *ಪ್ರಶ್ನೆ: ಕಾಳಿಯು ರೌದ್ರರೂಪಿಯಾದ ಶಕ್ತಿ ಮತ್ತು ಕ್ರೋಧಯುತವಾದ ಪ್ರೇಮದಿಂದ ಕೂಡಿದ ಕೃಷ್ಣನ ಪ್ರತಿರೂಪವಾಗಿದ್ದಾಳೆ. ಅವಳು ದೇಹ–ಪ್ರಾಣ–*

> *ಮನದ ತ್ರಿವಿಧ ಬಂಧನದೊಳಗೆ ಸಿಲುಕಿದ ಆತ್ಮವನ್ನು ತನ್ನ ಉಗ್ರಪ್ರಹಾರದಿಂದ ದಂಡಿಸಿ ಆ ಆತ್ಮವನ್ನು ಮುಕ್ತಾತ್ಮವಾಗಿಸುತ್ತಾಳೆ.*

*ನಮ್ಮಲ್ಲಿರುವ ಅಸಹಾಯಕವಾದ ಸಣ್ಣ ಅಹಿಮೆಯು ನಿಧಾನವಾಗಿ ಮರೆಯಾಗುತ್ತ, ಈ ವಿಶ್ವದ ಸ್ವರೂಪವನ್ನು ದರ್ಶಿಸುವ ಸಾಮರ್ಥ್ಯವಿರುವ ಪ್ರಕಾಶದ ಕಿಡಿಯೊಂದು ನಮ್ಮೊಳಗೆ ದಾರಿಮಾಡಿಕೊಂಡು ಬರುವದನ್ನು ಗಮನಿಸಿದಾಗ ನಾವು ಯಾವ ರೀತಿ ಪ್ರತಿಕ್ರಿಯಿಸಬೇಕು?*

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 10/356**

ಯಾರೋ ಒಬ್ಬರು ನಿಮಗೆ ಚಿತ್ರಹಿಂಸೆಯನ್ನು ನೀಡುತ್ತ ನಿಮ್ಮನ್ನು ಕೊಲ್ಲಲು ಪ್ರಯತ್ನಿಸುತ್ತಿದ್ದಾಗ ಮೃತ್ಯುವಿನ ಸನಿಹದಲ್ಲಿರುವ ಆ ಸಂದರ್ಭದಲ್ಲೂ ಸಹ ನಿಮ್ಮನ್ನು ಹಿಂಸಿಸುತ್ತಿರುವ ಅಥವಾ ಕೊಲ್ಲುತ್ತಿರುವ ವ್ಯಕ್ತಿಯಲ್ಲಿ ದೈವತ್ವವನ್ನು ಕಾಣಬಲ್ಲಿರಾ? ಅಥವಾ ಅವರಲ್ಲಿ ಪ್ರೇಮ ಭಾವನೆಯನ್ನು ತಳೆಯಲು ಸಾಧ್ಯವೇ? ಅದನ್ನು ನೀವು ಸಾಧಿಸಿದ್ದೇ ಆದಲ್ಲಿ ನೀವು ಪರಮ ಜ್ಞಾನವನ್ನು ಗಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಏಕೆಂದರೆ, ಕಾಳಿಯನ್ನು ಪೂಜಿಸದ ವ್ಯಕ್ತಿಯು ಕೃಷ್ಣನನ್ನು ತಲುಪಲು ಸಾಧ್ಯವೇ?

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/499 – ಶ್ರೀ ಅರವಿಂದರು**

> *ಪ್ರಶ್ನೆ: ವ್ಯವಸ್ಥೆಯೊಳಗೆ ಪರಿವರ್ತನೆಯನ್ನು ನೀಡಲೋಸುಗ ನುಗ್ಗುತ್ತ ಬರುತ್ತಿರುವ ಕಾಳಿಯ ಉಗ್ರಶಕ್ತಿ ಮತ್ತು ದೈವೀಕ ಜ್ವಾಲೆಯನ್ನು ಸಹಿಸಿಕೊಳ್ಳಲು ಯಾರಿಗೆ ಸಾಧ್ಯವಿದೆ? ಈಗಾಗಲೆ ಕೃಷ್ಣನನ್ನು ತಲುಪಿದ ವ್ಯಕ್ತಿಗೆ ಮಾತ್ರ ಅದು ಸಾಧ್ಯ.*

ನಮ್ಮೊಳಗೆ ಸದಾ ಜಾಗೃತವಾಗಿರುವ ದಿವ್ಯ ಸಾನಿಧ್ಯವು ಸಮರ್ಥವೂ–ಭಾವನಾಶೀಲವೂ ಆದ ಮಾರ್ಗವಾಗಿದ್ದು, ಅದು ನಮ್ಮ ಮೇಲೆ ನಡೆಯುತ್ತಿರುವ ಹಿಂಸೆಯನ್ನು ಸಹಿಸಿಕೊಳ್ಳುವ ಶಕ್ತಿಯನ್ನು ನೀಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/279**

# ಕೃಷ್ಣ ಮತ್ತು ಕಾಳಿ

**– ಅನು: ಪುಟ್ಟು ಕುಲಕರ್ಣಿ**

## ಕೃಷ್ಣ ಮತ್ತು ಕಾಳಿ ಸಮ್ಮಿಲನ

ಕೃಷ್ಣ ಮತ್ತು ಕಾಳಿ ಸಂಯೋಜನೆಯು ಈ (ಪೂರ್ಣ) ಯೋಗದಲ್ಲಿ ಒಂದು ಮಹತ್ತರವಾಗಿರುವ ಸಾಮರ್ಥ್ಯವಾಗಿದ್ದು, ಇವೆರಡೂ ಏಕ ಕಾಲಕ್ಕೇ ನಿಮ್ಮ ಚೇತನದಲ್ಲಿ ಉದಿತಗೊಂಡಲ್ಲಿ, ಅದೊಂದು ಶುಭಕರವಾದ ಸಂಕೇತವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/70 – ಶ್ರೀ ಅರವಿಂದರು**

ವಾಸ್ತವದಲ್ಲಿ, ಈ ಯಾವುದೇ ವ್ಯಕ್ತಿಯೂ ಅವನು ಏನನ್ನು ಅಪೇಕ್ಷಿಸುತ್ತಾನೆಯೋ ಅದನ್ನೇ ಅತ್ಯಂತ ನಿಖರವಾಗಿ ಅವನಿಗೆ ಈ ದಿವ್ಯತ್ವವು ಒದಗಿಸುತ್ತದೆ. ಒಂದು ವೇಳೆ ಈ ದಿವ್ಯತ್ವವು ಕ್ರೂರತೆಯಿಂದ, ಸಂಪೂರ್ಣವಾಗಿ ದೂರವೇ ಇರುತ್ತದೆ ಎಂದು ನಮ್ಮ ವಿಶ್ವಾಸವಾಗಿದ್ದಲ್ಲಿ, ಆಗ ನೀವು ನಿಜವಾಗಿಯೂ ದೂರವಾಗಿರುವದಷ್ಟೇ ಅಲ್ಲ ಕ್ರೂರವೂ ಆಗಿರುತ್ತೀರಿ. ಏಕೆಂದರೆ ನೀವು ದೇವರ ಕ್ರೋಧಕ್ಕೆ ಸಿಲುಕದೇ ಚಿರಂತನವಾಗಿರುವ ಶುಭವನ್ನು ಹೊಂದಲು ಅತಾವಶ್ಯಕವಾಗಿದೆ. ಆಗ ಆರಾಧಕರಿಗೆ ಕಾಳಿಯ ಸ್ವರೂಪದಲ್ಲಿ ಮತ್ತು ಭಕ್ತರಿಗೆ ಸೌಭಾಗ್ಯ ಸ್ವರೂಪದಲ್ಲಿ ದರ್ಶಗೊಳ್ಳುತ್ತಾಳೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/75**

ದೇವರು ಕೇವಲ ಪ್ರಳಯ ಸ್ವರೂಪಿ ಮಾತ್ರ ಇಲ್ಲ, ಸೃಷ್ಟಿಯ ಸಲುವಾಗಿ ಮಿತ್ರನೂ ಆಗಿದ್ದಾನೆ. ಅವನು ವೈಶ್ವಿಕ ತ್ರಿಗುಣಾತ್ಮಕನಾಗಿರುವದರ ಜೊತೆಗೆ ಅತಿಕ್ರಾಂತನೂ ಸರ್ವೋತ್ಕೃಷ್ಟನೂ ಆಗಿದ್ದಾನೆ. ಉಗ್ರ ಸ್ವರೂಪಳಾಗಿರುವ ಕಾಳಿಯೂ ಸಹಿತ ಪ್ರೇಮಮಯಿಯೂ ಉಪಕಾರೀ ಗುಣದ ಮಾತೆಯೂ ಆಗಿದ್ದಾಳೆ. ಇನ್ನು ಕುರುಕ್ಷೇತ್ರದ ನಿಯಂತೃವಾಗಿರುವ ಈ ದೈವೀ ನಿಯಾಮಕನು ಮತ್ತು ಸಾರಥಿಯಾಗಿ, ಸರ್ವ ಜೀವಗಳೆಲ್ಲವನ್ನೂ ಆಕರ್ಷಿಸುತ್ತಿರುವ ಕೃಷ್ಣನ ಸ್ವರೂಪದಲ್ಲಿ ಅವತರಿಸಿದ್ದಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/45**

**ಎಂದಿಗೂ ಅಂಜಬೇಡ**

ಪ್ರಶಾಂತತೆಯಿಂದ ಘನಗೊಂಡಿರುವ ಆಂತರಂಗದಲ್ಲಿ ಮತ್ತು ಯಾವುದೇ ಸಂದರ್ಭದಲ್ಲೂ ವಿಚಲನೆಗೊಳ್ಳದ ದೃಢಚಿತ್ತದ ಇಚ್ಛೆಯಲ್ಲಿ ಮಾತ್ರ ಮಹಾಕಾಳಿಯು ಲೀಲೆಗಳನ್ನು ರೂಪಿಸುತ್ತಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/67 – ಶ್ರೀ ಅರವಿಂದರು**

**ವೇದದ ದೇವತೆಗಳು ಮತ್ತು ಕಾಳಿ**

ಓ ವರುಣನೇ ನನ್ನಲ್ಲಿ ನೀನು ವ್ಯಾಪ್ತನಾಗು, ಓ ಇಂದ್ರನೇ ನನ್ನಲ್ಲಿ ನೀನು ಸಾಮರ್ಥ್ಯವಾಗು; ಓ ಸೂರ್ಯನೇ ನೀನು ನನ್ನಲ್ಲಿ ಪರಿಶುಭ್ರ ತೇಜವಾಗು ಮತ್ತು ಕಾಂತಿಯಾಗು; ಓ ಚಂದ್ರನೇ, ಸೌಂದರ್ಯ ಮತ್ತು ಮಾಧುರ್ಯದಿಂದ ಪೂರ್ಣವಾಗು; ಓ ರುದ್ರನೇ ನನ್ನಲ್ಲಿ ನೀನು ಉಗ್ರತ್ವದಲ್ಲಿ ಮತ್ತು ಭಯಾವಹನಾಗು; ಓ ಮರುತರೇ ನನ್ನಲ್ಲಿ ಧೃತರಾಗಿ ಮತ್ತು ತೇಜಸ್ವರಾಗಿ; ಓ ಆರ್ಯಮಾ ನನ್ನಲ್ಲಿ ಬಲಶಾಲಿಯಾಗು ಮತ್ತು ದಿಟ್ಟನಾಗು; ಓ ಭಗನೇ ನೀನು ಭೋಗಮಯನಾಗು ಜೊತೆಗೆ ಆನಂದದಾಯಕನಾಗು; ಓ ಮಿತ್ರನೇ ಆನಂದದಾಯಕನಾಗು ಮತ್ತು ದಯಾಪೂರ್ಣತೆಯಿಂದ ಕೋಮಲತೆಯಿಂದ, ಪ್ರೇಮಪೂರ್ಣತೆಯಿಂದ ಭಾವುಕತೆಯಿಂದ ನೆಲೆಗೊಳ್ಳು; ಓ ಉಷೆಯೇ ಪ್ರಕಾಶಪೂರ್ಣತೆಯಿಂದ ಪ್ರಕಟಗೊಳ್ಳು; ಓ ನಿಶೆಯೇ ಗಂಭೀರವಾಗಿ ಸರ್ವವನೂ ಗರ್ಭೀಕರಿಸಿಕೊಂಡಿರು; ಓ ಜೀವನವೇ, ಪೂರ್ಣತ್ವದಲ್ಲಿ ತತ್ಪರಗೊಳುತ್ತ ಪ್ರಫುಲ್ಲಿತವಾಗಿರು; ಓ ಮೃತ್ಯವೇ ನನ್ನ ಹೆಜ್ಜೆಗಳನ್ನು ಲೋಕ ಲೋಕಗಳ ನೆಲೆಗೆ ಕರೆದೊಯ್ಯು; ಓ ಬ್ರಹಣಸ್ಪತಿಯೇ ಇವುಗಳೇಲ್ಲವನ್ನೂ ಸಾಮಂಜಸ್ಯಗೊಳಿಸು; ಓ ಕಾಳಿಯೇ ಈ ಸರ್ವ ದೇವತೆಗಳಿಗೂ ನನ್ನನ್ನು ಸಿಲುಕುದಂತೆ ಹರಸು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/429**

*ಪ್ರಶ್ನೆ: ಶ್ರೀ ಅರವಿಂದರು ಏಕೆ ಕಾಳಿಗೆ ಇಷ್ಟೊಂದು ಮಹತ್ವವನ್ನು ನೀಡುತ್ತಿದ್ದಾರೆ?*

ಶ್ರೀಮಾತೆ: ಎಲ್ಲ ದೈವೀ ಗುಣಗಳನ್ನು ಪಡೆದಿರುವದು ಒಂದು ಅತ್ಯಾವಶ್ಯಕವಾಗಿರುವ ಮತ್ತು ಒಳ್ಳೆಯ ಸಂಗತಿಯಾಗಿದೆ. ಇವೆಲ್ಲ ಉತ್ತಮ ಗುಣಗಳು ಸಾಕ್ಷೀಭಾವ–ಗೊಳ್ಳುತ್ತಾ ಮತ್ತು ಸಂಕೇತಗಳಾಗುತ್ತ ಸಾಗಬೇಕು. ಇದನ್ನೇ ಶ್ರೀ ಅರವಿಂದರು ಇಚ್ಛಿಸಿ ಅವುಗಳನ್ನು ಆಹ್ವಾನಗೊಳಿಸಿ ಜೊತೆಗೆ ಇವುಗಳೇ ಆ ಸ್ವಭಾವವನ್ನು ತಮ್ಮ ವಶವರ್ತಿಯಾಗಿಸುವಂತೆ ಕೋರುತ್ತಾರೆ. ಆದರೆ ಯಾರು ಆ ಪರಮೋಚ್ಚನಾಗಿರುವ ಪರಮಾತ್ಮನೊಡನೆ ಸಮ್ಮಿಲನಗೊಳ್ಳಲು ಆಶಿಸುತ್ತಾರೆಯೋ, ಯಾರು ಆ ಪರಮ–ಸಾಕ್ಷಾತ್ಕಾರವನ್ನು ದರ್ಶಿಸಲು ಅಭೀಪ್ಸೆ ಹೊಂದಿರುತ್ತಾರೆಯೋ, ಆಗ ಇವೆಲ್ಲ ಅವರಿಗೆ ಸಾಕಾಗುವದಿಲ್ಲ. ಆ ಕಾರಣಕ್ಕಾಗಿ ಅಂತಿಮದಲ್ಲಿ ಕಾಳಿಯನ್ನು ಆಹ್ವಾನಿಸಿ, ಇವೆಲ್ಲವುಗಳ ಆಚೆ ಆಚೆ ಇರುವ ತಾಣಕ್ಕೆ ಸಾಗಲು ಸಾಮರ್ಥ್ಯವನ್ನು ದಯಪಾಲಿಸುವಂತೆ ಪ್ರಾರ್ಥಿಸುತ್ತಾರೆ.

ವಿಶ್ವಮಾತೆಯ ಅತ್ಯಂತ ಶಕ್ತಿಪೂರ್ಣವಾಗಿರುವ ಸ್ವರೂಪವೇ ಈ ಕಾಳಿಯಾಗಿದ್ದಾಳೆ. ಸೃಷ್ಟಿಯಲ್ಲಿರುವ ಇನ್ನುಳಿದ ಎಲ್ಲ ದೇವತೆಗಳ ಶಕ್ತಿಗಿಂತ ಇವಳ ಶಕ್ತಿ ಪರಮಾತಿಪರಮ ಅಧಿಕವಾಗಿರುತ್ತದೆ. ಇವಳೊಡನೆ ತಲ್ಲೀನಗೊಳ್ಳುವದರಿಂದ ಆ ಮೂಲಕವಾಗಿ ಸುವ್ಯಾಪ್ತಗೊಳ್ಳಲು ಸಾಧ್ಯವಾಗುತ್ತದೆ, ಪರಿಪೂರ್ಣಗೊಳ್ಳಲು ಸಾಧ್ಯವಾಗುತ್ತದೆ. ಮತ್ತೂ ಆ ಎಲ್ಲ ದೇವತೆಗಳ ಒಟ್ಟು ಸಾಮರ್ಥ್ಯಕ್ಕಿಂತ ಹೆಚ್ಚಿನ ಸಾಮರ್ಥ್ಯವನ್ನು ಪಡೆದುಕೊಳ್ಳಲು ಸಹಾಯವಾಗುತ್ತದೆ. ಹೀಗಾಗಿಯೇ ಶ್ರೀಅರವಿಂದರು ಕಾಳಿಗೆ ಈ ರೀತಿಯಲ್ಲಿ ಪರಮೋಚ್ಚವಾದ ಸ್ಥಾನವನ್ನು ರೂಪಿಸಿದ್ದಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/84–85 – ಶ್ರೀಮಾತೆ**

## ಶ್ರೀ ಅರವಿಂದರ
## 'ಗೀತಾ ಪ್ರಬಂಧಗಳು'

**– ಅನು: ಜಾನ್ವಿ**

**38**

### ಎರಡನೆಯ ಸರಣಿ:
### ಅಧ್ಯಾಯ – 4
### ರಾಜಗುಹ್ಯ (4/1)

ಇಲ್ಲಿನವರೆಗೆ ಹಂತಹಂತವಾಗಿ ಅನೇಕ ಪ್ರಕಾರದ ಸತ್ಯವನ್ನು ಗೀತೆ ನಮಗೆ ಕಟ್ಟಿ ಕೊಟ್ಟಿದೆ. ಸಮಗ್ರ ಜ್ಞಾನದ ಒಂದಿಲ್ಲೊಂದು ಹೊಸ ಮಗ್ಗಲನ್ನು ನಮಗೆ ಹೆಜ್ಜೆ ಹೆಜ್ಜೆಗೂ ಪರಿಚಯಿಸುತ್ತ ಬಂದಿದೆ. ಈ ಹೊಸ ಸತ್ಯ ದರ್ಶನದ ಆಧಾರದ ಮೇಲೆ ನಮಗೊಂದು ನಿರ್ದಿಷ್ಟ ಆಧ್ಯಾತ್ಮಿಕ ಸ್ಥಿತಿ ಮತ್ತು ಆಧ್ಯಾತ್ಮಿಕ ಕೃತಿಯ ಸ್ಪಷ್ಟ ಪರಿಕಲ್ಪನೆ ಮೂಡಿದೆ. ಈಗ ಈ ಮುಂದಿನ 9ನೇಯ ಅಧ್ಯಾಯದಲ್ಲಿ ಸತ್ಯ ನಿರೂಪಣೆಗೆ ಅತಿ ವಿಶಿಷ್ಟವಾದ ಮಹತ್ವದ ತಿರುವನ್ನು ಗೀತೆ ನೀಡುತ್ತದೆ. ಅಂತೆಯೇ ಗುರು ಶ್ರೀಕೃಷ್ಣನು ತಾನು ಹೇಳಲಿರುವುದನ್ನು ಅತಿ ಜಾಗರೂಕತೆಯಿಂದ ಮತ್ತು ಪೂರ್ಣ ಲಕ್ಷ್ಯಕೊಟ್ಟು ಅರ್ಜುನನು ಕೇಳಲಿ ಎಂದು ಇಚ್ಛಿಸುತ್ತಾನೆ. ಮುಂದೆ ಅತಿ ಮಹತ್ವದ ಶ್ರೇಷ್ಠ ಹಾಗೂ ಪೂರ್ಣ ಆಧ್ಯಾತ್ಮಿಕ ಜ್ಞಾನ ಹಾಗೂ ದರ್ಶನವನ್ನು ಅರ್ಜುನನಿಗೆ ಅವನು ಮಾಡಿಕೊಡಲಿದ್ದಾನೆ. ಮುಂದೆ 11ನೇಯ ಅಧ್ಯಾಯದಲ್ಲಿ ತನ್ನ ವಿಶ್ವರೂಪ ದರ್ಶನವನ್ನು ಅರ್ಜುನನಿಗೆ ಕೃಷ್ಣನು ಮಾಡಿಸಲಿದ್ದಾನೆ; ಇದರಿಂದ ಪರಮೇಶ್ವರನ ಪೂರ್ಣ ಜ್ಞಾನವಾಗುವುದರ ಜೊತೆಗೆ ಪ್ರತ್ಯಕ್ಷ ದರ್ಶನವೂ ಆಗಲಿದೆ. ಈ ಸಿದ್ಧತೆಯನ್ನು ಅರ್ಜುನನಲ್ಲಿ ಸ್ಥಾಪಿಸುವುದು ಕೃಷ್ಣನ ಉದ್ದೇಶವಾಗಿದೆ. ಕುರುಕ್ಷೇತ್ರದ ಮಹಾಯೋಧನಾದ ಅರ್ಜುನನಿಗೆ ಅವನ ಸ್ವಯಂ ಅಸ್ತಿತ್ವದ, ಸದ್ಯ ನಡೆದಿರುವ ಪ್ರಸಂಗದ ಹಾಗೂ ಅವನು ಮಾಡಲಿರುವ ಮಹಾ ಕಾರ್ಯದ ನಿಯೋಜಕ ಹಾಗೂ ನಿಯಾಮಕ ಮತ್ತು ಸಂಚಾಲಕ ಯಾರು ಎಂಬುದನ್ನು ತೋರಿಸಿಕೊಡಲಿದ್ದಾನೆ. ಇದೆಲ್ಲದರ ಜನಕನೂ ವಿಶ್ವದ ಸಂಚಾಲಕನೂ ಆಗಿರುವವನು ವಿಶ್ವದಲ್ಲಿ ಹಾಗೂ ವಿಶ್ವದ ಸಮಸ್ತ ಜೀವರಾಶಿಗಳಲ್ಲಿ ಉಪಸ್ಥಿತನಾಗಿರುವ ಪರಮೇಶ್ವರನೇ. ವಿಶ್ವದಲ್ಲಿ ಅವನನ್ನು ತಡೆಯಬಲ್ಲ, ತಡವಬಲ್ಲ, ನಿರ್ಬಂಧಿಸಬಲ್ಲ, ಸೀಮಿತಗೊಳಿಸಬಲ್ಲ ಬೇರೆ

ಯಾವ ಶಕ್ತಿಯೂ ಪ್ರಪಂಚದಲ್ಲಿ ಇಲ್ಲ. ಸಮಸ್ತ ವಿಶ್ವವು ಅವನ ಮೂಲಕವೇ ಜನಿಸುತ್ತದೆ. ಅಸ್ತಿತ್ವದಲ್ಲಿ ಬರುತ್ತದೆ. ಅವನು ಸಮಸ್ತ ಅಸ್ತಿತ್ವದ ಆಂದೋಲನದ ಸಂಕಲ್ಪ ಕರ್ತೃವೂ ಹೌದು, ಅವನ ಇಚ್ಛಾನುಸಾರವಾಗಿಯೇ ಸಮಸ್ತ ಪ್ರಪಂಚ ಅಸ್ತಿತ್ವದಲ್ಲಿ ಬರುತ್ತದೆ. ಎಲ್ಲದರ ಪರಿಪೋಷಣೆ, ಮುಂದುವರಿಕೆ ಅವನ ಇಚ್ಛಾನುಸಾರವೇ ನಡೆಯುತ್ತದೆ. ಅವನ ಆತ್ಮ ಜ್ಞಾನವೇ ಸ್ವವಿಷಯಕ ಪೂರ್ಣ ಅರಿವು ಈ ಎಲ್ಲ ಆಂದೋಲನದ ಸ್ವರೂಪವನ್ನು ಸಮರ್ಥಿಸುತ್ತದೆ. ಈ ಎಲ್ಲ ಆಂದೋಲನದ ಮೂಲವು ಪರಮೇಶ್ವರನೇ, ಅದರ ಸ್ವರೂಪ ದ್ರವ್ಯವೂ ಪರಮೇಶ್ವರನೇ, ಅದೆಲ್ಲದರ ಪ್ರಾಪ್ತವ್ಯ ಕೂಡ ಪರಮೇಶ್ವರನೇ ಆಗಿದ್ದಾನೆ. ಈ ಜ್ಞಾನವನ್ನು ಅರ್ಜುನನಿಗೆ ಕೃಷ್ಣನು ಮಾಡಿಕೊಡಲಿದ್ದಾನೆ. ಅರ್ಜುನ ಅಥವಾ ಪ್ರತಿ ವ್ಯಕ್ತಿ ಅಥವಾ ಜೀವಿಯು ಅಸ್ತಿತ್ವದಲ್ಲಿರಲು ಕಾರಣ ಆ ಈಶ್ವರೇಚ್ಛೆಯೇ. ಈಶ್ವರನ ಉದರದಲ್ಲಿಯೇ ಅವನೂ ಇದ್ದಾನೆ, ಎಲ್ಲವೂ ಇದೆ, ಪ್ರತಿ ಜೀವಿ ಏನೆಲ್ಲ ಕಾರ್ಯ ಮಾಡುವುದೋ ಅದರ ಮೂಲ ಬಲವು ಈಶ್ವರನದೇ. ಪ್ರತಿ ವ್ಯಕ್ತಿಯ ಕಾರ್ಯವು ಈಶ್ವರನ ಕಾರ್ಯದ ಸಾಧನವೇ ಆಗಿದೆ. ಅವನ ಅಹಂಕಾರ, “ನಾನು” ಎಂಬ ಪರಿಕಲ್ಪನೆಯು ಕೇವಲ ಪರದೆ, ಮುಸುಗು ಇದ್ದ ಹಾಗೆ. ತೀರ ಅಂತರಾಳದಲ್ಲಿರುವ ನಿಜವಾದ ಪುರುಷನಾದ “ಆತ್ಮ” ಇದ್ದಾನೆ, ಅವನ ವಿಕೃತ ರೂಪವನ್ನು ಅಹಂಕಾರವು ನಮಗೆ ತೋರಿಸುತ್ತದೆ. ಈ ಅಹಂ ಜನ್ಯ ಆಭಾಸವೇ ನಿಜವಾದ ಆತ್ಮ ಎಂಬ ಭ್ರಮೆಯನ್ನುಂಟು ಮಾಡುತ್ತದೆ. ಈ ಆಭಾಸವು ಮಿಥ್ಯಾ ಜ್ಞಾನವಾಗಿದೆ. ನಿಜವಾದ ಆತ್ಮನು ಪರಮೇಶ್ವರನ ಅಂಶ ಸ್ವರೂಪನು. ಅವನ ಅಮರ ಸ್ಫುಲಿಂಗವಾಗಿದ್ದಾನೆ.

ಇಷ್ಟಾದ ಮೇಲೂ ಅರ್ಜುನನ ಮನಸ್ಸಿನಲ್ಲಿ ಏನಾದರೂ ಸಂದೇಹ, ಅನುಮಾನಗಳಿದ್ದರೆ ಅವುಗಳನ್ನು ತೊಡೆದು ಹಾಕಲೆಂದೇ ಕೃಷ್ಣನು ಅವನಿಗೆ ವಿಶ್ವರೂಪ ದರ್ಶನ ಮಾಡಿಸುತ್ತಾನೆ. ಅರ್ಜುನನು ಯುದ್ಧ ಕರ್ಮದಿಂದ ದೂರ ಸರಿದಿದ್ದಾನೆ, ಹಿಂಜರಿಯುತ್ತಿದ್ದಾನೆ. ಅವನಲ್ಲಿ ಯುದ್ಧ ಸಾಮರ್ಥ್ಯವನ್ನು ತುಂಬಲು ಕೃಷ್ಣನು ತನ್ನ ವಿಶ್ವರೂಪ ದರ್ಶನ ಮಾಡಿಸುತ್ತಾನೆ. ಅರ್ಜುನನು ಯುದ್ಧ ಮಾಡಲೆಂಬುದನ್ನು ನಿರ್ಧರಿಸಿಯೇ ಯುದ್ಧರಂಗಕ್ಕಿಳಿದಿದ್ದಾನೆ. ಈಗ ನೆಪ ಹೇಳಿ ಹಿಂದೆ ಸರಿಯುವ ಹಾಗಿಲ್ಲ. ಈ ಯುದ್ಧವು ಈಶ್ವರನ ಸಂಕಲ್ಪವಾಗಿದೆ. ಯುದ್ಧದಿಂದ ವಿಮುಖನಾಗುವುದೆಂದರೆ ಈಶ್ವರನ ಸಂಕಲ್ಪವನ್ನು ವಿರೋಧಿಸಿದಂತೆ, ಉಲ್ಲಂಘಿಸಿದಂತೆ. ಯುದ್ಧ ಮಾಡುವಂತೆ ಅರ್ಜುನನಿಗೆ ನೀಡಲಾದ ಆದೇಶವು ವೈಯಕ್ತಿಕ ಅಥವಾ

ಅವನ ವ್ಯಕ್ತಿಗತ ಪ್ರಯೋಜನಕ್ಕಾಗಿ ಮಾತ್ರ ಅಲ್ಲ. ಅದು ಸಮಗ್ರ ಮಾನವ ಕುಲಕ್ಕೆ ಪ್ರಯೋಜನವಾಗಬಹುದಾದ, ಸರ್ವಕಾಲಿಕ ಸಂದೇಶವಾಗಿದೆ. ಅಂತೆಯೇ ಅದು ಓರ್ವ ವ್ಯಕ್ತಿಯ ಪ್ರಜ್ಞೆಗೆ ನೀಡಿದರೂ ಸಹ ಅದು ವಿಶ್ವಾತ್ಮಕ ಸ್ತರದಲ್ಲಿ ಅದು ಪ್ರಕಂಪಿತವಾಗಬೇಕಾಗಿದೆ ಮತ್ತು ಅರ್ಜುನನಿಗೆ ಇದು ಬಹು ಬೇಗನೇ ಅರ್ಥವಾಗಲಿದೆ ಕೂಡ. ವಿಶ್ವ ಪುರುಷನು ಅರ್ಜುನನಿಗೆ ಮೂರ್ತಿಮಂತ ಈಶ್ವರನಾಗಿಯೇ ಕಾಣಿಸುತ್ತಾನೆ. ಈಶ್ವರನ ರೂಪದಲ್ಲಿ ಕಲಾತ್ಮ, ಅನಂತ ಕಾಲ ಪುರುಷನು ಅವನೆದುರು ಪ್ರಕಟನಾಗುತ್ತಾನೆ ಮತ್ತು ತನ್ನ ಭಯಾನಕ ರುದ್ರ ಗಂಭೀರ ಸ್ವರದಲ್ಲಿ ಅರ್ಜುನನಿಗೆ ಯುದ್ಧ ಮಾಡಲು ಆದೇಶ ನೀಡುತ್ತಾನೆ. ಅಷ್ಟೇ ಅಲ್ಲ ಪ್ರಾಕೃತಿಕ ಬಂದನದಿಂದ ಆತ್ಮವನ್ನು ಮುಕ್ತಗೊಳಿಸಿಕೊಳ್ಳಲು ಅರ್ಜುನನಿಗೆ ವಿಶ್ವ ಪುರುಷನು ಆದೇಶ ನೀಡುತ್ತಾನೆ. ವಿಶ್ವದ ಗೂಢ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಕರ್ಮ ನಿಯತವಾಗಿದ್ದು ಪ್ರತಿಯೊಬ್ಬನೂ ತನಗೆ ಬಂಧ ಕರ್ಮವನ್ನು ಶ್ರದ್ಧೆಯಿಂದ ಮಾಡಬೇಕು ಎಂದು ಹೇಳುತ್ತಾನೆ. ಮೋಕ್ಷ ಕರ್ಮ ಹಾಗೂ ವಿಶ್ವ ವ್ಯವಹಾರ ಕರ್ಮ ಎರಡೂ ವಿರುದ್ಧವಲ್ಲ, ಅವು ಒಂದೇ ಕರ್ಮದ ಎರಡು ಮಗ್ಗಲುಗಳು ಎಂಬುದನ್ನು ಅರ್ಜುನನಿಗೆ ಮನದಟ್ಟು ಮಾಡಿಕೊಡುತ್ತಾನೆ. ವಿಶ್ವರೂಪ ದರ್ಶನದ ಮೊದಲು ಅರ್ಜುನನ ಬುದ್ಧಿಯಲ್ಲಿದ್ದ ಅನೇಕ ಸಂದೇಹಗಳು ಈಗ ದೂರವಾಗುತ್ತವೆ. ಆತ್ಮ ವಿಷಯಕ ಜ್ಞಾನ, ಈಶ್ವರನ ಜ್ಞಾನ, ಪ್ರಕೃತಿಯ ರಹಸ್ಯ ಜ್ಞಾನ ಇವೆಲ್ಲವನ್ನೂ ಕೃಷ್ಣನು ವಿವರಿಸಿ ಹೇಳಿದ್ದಾನೆ. ಆದರೆ ಮನಸ್ಸಿಗೆ, ಬುದ್ಧಿಗೆ ಜ್ಞಾನವಾಗಿ ಬಿಟ್ಟರೆ ಸಾಕಾಗದು. ಅರ್ಜುನನಿಗೆ ಇಷ್ಟದಿಂದ ಎಲ್ಲವೂ ಜ್ಞಾನವಾಗಲಿಲ್ಲ. ಬಹಿರ್ಮುಖವಾಗಿ ಅಂತರ್ದೃಷ್ಟಿಯನ್ನು ಕಳೆದುಕೊಂಡ ಅವನ ಬುದ್ಧಿಗೆ ಅಂತರ್ದೃಷ್ಟಿಯೂ ಬೇಕು ಎಂದು ಸ್ಪಷ್ಟವಾಗಿ ಅನಿಸುತ್ತದೆ. ಅವನು ಕೃಷ್ಣನಿಗೆ ಹಾಗೆಯೇ ಹೇಳಿದ. "ಪುರುಷೋತ್ತಮನೇ ನಿನ್ನ ಈಶ್ವರೀ ರೂಪವನ್ನು ನನಗೆ ತೋರಿಸು" ಕೃಷ್ಣನು ಅವನಿಗೆ ಅಂತರ್ದೃಷ್ಟಿಯನ್ನೂ ನೀಡಿ ವಿಶ್ವರೂಪವನ್ನು ತೋರಿಸುತ್ತಾನೆ. ಬೌದ್ಧಿಕ ದೃಷ್ಟಿಯನ್ನು ಸರ್ವದಾ ನಿಸ್ಸಂದೇಹಗೊಳಿಸುವ ಪ್ರಕಾಶವು ಹೀಗೆ ದಿವ್ಯ ದೃಷ್ಟಿಯಿಂದ ಸಾಕ್ಷಾತ್ಕಾರವಾದಾಗ ಅರ್ಜುನನು ಸರ್ವ ಭಾವದಿಂದ ಯುದ್ಧ ಮಾಡಲು ಸಿದ್ಧನಾಗುತ್ತಾನೆ. ತನ್ನ ಎಲ್ಲ ಅಂಗೋಪಾಂಗಗಳ ಮೇಲೆ ಪೂರ್ಣ ಭರವಸೆ ಇಟ್ಟು, ತನ್ನ ಕರ್ತವ್ಯವನ್ನು ಶ್ರದ್ಧೆಯಿಂದ ಮಾಡಲು ಸಿದ್ಧನಾಗುತ್ತಾನೆ. ಅವನ ಅಸ್ತಿತ್ವದ ಪ್ರಭು, ಅವನ ಅಸ್ತಿತ್ವದ ಆತ್ಮನೇ ಸಮಗ್ರ ವಿಶ್ವದ ಆತ್ಮ ಮತ್ತು ಪ್ರಭು.

ಸರ್ವ ಭೂತಗಳ ಒಡೆಯ. ಅವನ ಮೇಲೆ ಭಕ್ತಿ ಇರಿಸಿ ಅರ್ಜುನ ಯುದ್ಧ ಸನ್ನದ್ಧನಾದನು.

ಇದುವರೆಗೆ, ಹಿಂದಿನ 8 ಅಧ್ಯಾಯಗಳಲ್ಲಿ ಹೇಳಿರುವುದೆಲ್ಲವೂ ಜ್ಞಾನ ಯೋಗದ ತಳಹದಿ, ಜ್ಞಾನ ಸೌಧವನ್ನು ನಿರ್ಮಿಸಲು ಬೇಕಾಗಿರುವ ಎಲ್ಲ ಕಚ್ಚಾ ಮಾಲು ಒತ್ತಟ್ಟಿ ಸೇರಿಸಿದಂತೆ. ಈಗ ಜ್ಞಾನದ ಕಟ್ಟಡವನ್ನು ಅರ್ಜುನನ ನಿರ್ಮಲ ದೃಷ್ಟಿಯ ಎದುರಲ್ಲಿ ನಿಲ್ಲಿಸಬೇಕಾಗಿದೆ. ಇದಾದ ನಂತರ ಮಾಡಬೇಕಾದ ಕೆಲಸ ತುಂಬ ಮಹತ್ವದ್ದು, ಏಕೆಂದರೆ ಅದು ಕಟ್ಟಡದ ಎಲ್ಲ ಭಾಗಗಳನ್ನು ಪರೀಕ್ಷಿಸುವುದು, ವಿಶ್ಲೇಷಿಸುವುದು, ಎಲ್ಲೆಲ್ಲಿ ಏನೇನಿದೆಯೋ ಎಲ್ಲವನ್ನೂ ನಿಖರವಾಗಿ ಗುರುತಿಸುವುದು. ಜ್ಞಾನ ಸೌಧ ಅಂದರೆ ಅರ್ಜುನನಿಗೆ ಹೇಳುತ್ತಿರುವ ಪುರುಷೋತ್ತಮನ ಸಂಪೂರ್ಣ ಜ್ಞಾನ – ಇಲ್ಲಿ ಏನಾದರೂ ಸ್ವಲ್ಪ ಹೆಚ್ಚು ಕಡಿಮೆಯಾಗಿ ಕಟ್ಟಡ ವಾಲಿದರೆ ಅರ್ಜುನನ ಭರವಸೆಗೆ ಧಕ್ಕೆಯಾಗಬಹುದು. ಆದ್ದರಿಂದ ಯಾರು ಈ ಜ್ಞಾನವನ್ನು ನೀಡುತ್ತಿರುವುರೋ ಅವರ ಬಗ್ಗೆ ಅರ್ಜುನನಿಗೆ ಮೊದಲು ಪರಿಪೂರ್ಣ ಶ್ರದ್ಧೆ ಮೂಡಬೇಕಾದರೆ ಅವನ ನಿಜ ಸ್ವರೂಪವನ್ನು ದರ್ಶನ ಮಾಡಿಸಲೇಬೇಕು, ಅರ್ಜುನನಿಗೆ ಆಯ್ಕೆ ಇರಕೂಡದು. ಅವನು ಬರೀ ಆಲಿಸಬೇಕು ಮತ್ತು ಹೇಳಿದ್ದನ್ನು ಪಾಲಿಸಬೇಕು ಅನ್ನುವುದಾದರೆ ಅವನಿಗೆ ವಿಭೂತಿ ದರ್ಶನ ಮಾಡಿಸಲೇಬೇಕು. ಇಲ್ಲಿನವರೆಗೆ ಅವನಿಗೆ ಸ್ಪಷ್ಟಪಡಿಸಿದ್ದೇನೆಂದರೆ ಅರ್ಜುನನಾಗಲಿ ಇನ್ನಾರೇ ಆಗಲಿ ಅವಿದ್ಯೆಯಿಂದ ಹಾಗೂ ಅಹಂಕಾರಯುಕ್ತ ಕರ್ಮ ಬಂಧನದಿಂದ ಬಿಗಿಯಾಗಿ ಬಂಧಿಸಲ್ಪಟ್ಟಿಲ್ಲ. ಇಲ್ಲಿಯವರೆಗೆ ಅವನು ಇದೇ ಅವಿದ್ಯೆಯ ವೃತ್ತದಲ್ಲಿಯೇ ಕರ್ಮ ಮಾಡುತ್ತ ನಿಶ್ಚಿಂತೆಯಿಂದ ಇದ್ದನಾದರೂ, ಅವನ ಎಲ್ಲ ಪ್ರಶ್ನೆಗಳಿಗೆ ಸಮಸ್ಯೆಗಳಿಗೆ ಅರ್ಧಮರ್ಧ ನೀಡುವ ಉತ್ತರಗಳಿಂದ ಈಗೀಗ ಸಮಾಧಾನ ಕಾಣಲೊಲ್ಲದಾಗಿದೆ. ಅನೇಕ ವೈರುಧ್ಯಗಳು ದ್ವಂದ್ವಗಳು ಕಾಡುತ್ತ ಅವನ ನೆಮ್ಮದಿಯನ್ನು ಕೆಡಿಸಿದ್ದಲ್ಲದೇ ಅವನಲ್ಲಿ ಒಂದು ರೀತಿಯ ಆತಂಕ, ಭಯವನ್ನು ಹುಟ್ಟು ಹಾಕಿವೆ. ಈ ಜಗತ್ತು ಹಾಗೂ ತಾನು ಮಾಡುವ ನಾನಾ ಬಗೆಯ ಕರ್ಮಗಳ ಫಲಾಫಲಗಳ ಚಿಂತೆಯಿಂದ ಸಹಿತನಾಗಿ, ಏನು ಮಾಡಲೂ ದಿಕ್ಕು ತೋಚದೇ ಜೀವನ ಮತ್ತು ಕರ್ಮ ಸನ್ಯಾಸವೇ ಏಕೈಕ ಮಾರ್ಗವೇನೋ ಎಂದು ಯೋಚಿಸುವಂತಾಗಿದೆ. ಅವನಿಗೆ ಎರಡೇ ಎರಡು ದಾರಿ ಗೊತ್ತು. ಎರಡೂ ಪರಸ್ಪರ ವಿರುದ್ಧವಾಗಿವೆ, ಒಂದು ಅಹಂಮಯ ಅವಿದ್ಯೆಯಲ್ಲಿ ಅಥವಾ ಇನ್ನೊಂದು ನಿರ್ಮಲವಾದ ಆತ್ಮ ಜ್ಞಾನದಲ್ಲಿ ಕೆಲಸ

ಮಾಡುತ್ತ ಜೀವಿಸುವುದು. ಇವೆರಡೂ ವಿರುದ್ಧ ಮಾರ್ಗಗಳಾಗಿ ಅವನಿಗೆ ತೋರಿವೆ. ಒಂದೋ, ಅವನು ವಾಸನಾಯುಕ್ತನಾಗಿ ಉತ್ಸಾಹದಿಂದ ಕೆಲಸ ಮಾಡಬೇಕು. ನಿಮ್ನ ಪ್ರಕೃತಿಯ ಗುಣಗಳಿಂದಾಗಿ (ಸತ್ವ–ರಜ–ತಮ) ಪಾಪಪುಣ್ಯಗಳ ಬಲೆಯಲ್ಲಿ ಸಿಲುಕಿ ಸುಖದುಃಖ, ಸೋಲುಗೆಲುವು, ಸುಕೃತ ದುಷ್ಕೃತ ಫಲ ಹೀಗೆ ದ್ವಂದ್ವಗಳನ್ನು ಅನುಭವಿಸುತ್ತ ಬದುಕಬೇಕು. ಜಗತ್ತೆಂಬ ಬೃಹದ್ ಯಂತ್ರದ ಭಾಗವಾಗಿ ಒಳ್ಳೆ ಚಲನೆ, ಕೆಟ್ಟ ಚಲನೆ, ಎಂದೆಲ್ಲ ಪುಂಖಾನುಪುಂಖವಾಗಿ ಮಾತನಾಡುತ್ತ, ಕರ್ಮ–ಅಕರ್ಮಗಳ ಬಲೆಯಲ್ಲಿ ಕಿಂಕರ್ತವ್ಯ ಮೂಢನಂತೆ ಪ್ರವೇಶಿಸಿ, ಮೇಲೆ ಏನು ತೋರುತ್ತದೇ, ಕಾಣುತ್ತದೋ ಅದನ್ನೇ ಸತ್ಯವೆಂದು ಭ್ರಮಿಸಿ ಒದ್ದಾಡುತ್ತ ಜೀವಿಸಬೇಕು. ಆದರೆ ಮಾನವನು ಸಂಪೂರ್ಣವಾಗಿ ಅವಿದ್ಯೆಯ ಕಾರ್ಯಗಳಿಗೆ ಬಂಧಿಯಾದವನಲ್ಲ. ಅವನು ಮನಸ್ಸು ಮಾಡಿದರೆ, ಸಂಕಲ್ಪ ಮಾಡಿದರೆ ಜ್ಞಾನ–ಕರ್ಮಗಳನ್ನು ಮಾಡಬಲ್ಲನು. ಅವನು ಒಳ್ಳೆಯ ವಿಚಾರವಂತನಾಗಿ, ಮನೀಷಿಯಾಗಿ, ಜ್ಞಾನಿಯಾಗಿ, ಯೋಗಿಯಾಗಿ ಮೊದಲು ಮುಮುಕ್ಷುವಾಗಿ ಆನಂತರ ಮುಕ್ತ ಆತ್ಮನಾಗಿ ಕಾರ್ಯ ಮಾಡಬಹುದು. ಈ ಮಹಾನ್ ಸಾಧ್ಯತೆಯನ್ನು ಮನಸ್ಸಿಗೆ ತಂದುಕೊಂಡು ಜ್ಞಾನ ಯೋಗದ ಮೇಲೆ ಚಿತ್ತವನ್ನು ಕೇಂದ್ರೀಕರಿಸಿ ಆತ್ಮ ದರ್ಶನಕ್ಕಾಗಿ ಪ್ರಯತ್ನ ಮಾಡುವುದು ಮಾನವನ ಶ್ರೇಯಸ್ಸು. ಆಗ ಅವನು ದುಃಖಾದಿ ಕ್ಲೇಶಗಳಿಂದ ಬಿಡುಗಡೆ ಹೊಂದುವುನು, ಮಾನವನ ಜನ್ಮದ ರಹಸ್ಯ ಒಗಟು ಬದಲಾಗುವುದು.

ನಮ್ಮಲ್ಲೊಂದು ಮಹಾನ್ ಆತ್ಮ ಇದೆ, ಅದು ಶಾಂತ, ಸಮಾಧಾನ, ಕರ್ಮಾತೀತ ಸಮವಾದುದು. ಅದು ಈ ಪ್ರಾಪಂಚಿಕ ಜಂಜಡಗಳಲ್ಲಿ ಸಿಲುಕಿರುವುದಿಲ್ಲ. ಬಾಹ್ಯ ಜಂಜಡವನ್ನೆಲ್ಲ ಸುಮ್ಮನೆ ನೋಡುತ್ತದೆ, ಅವುಗಳಿಗೆಲ್ಲ ಆಧಾರವಾಗಿರುತ್ತದೆ. ಅವೆಲ್ಲವೂ ಉಗಮವಾಗುವುದು ಇದರಿಂದಲೇ. ಆದರೆ ಆತ್ಮ ಮಾತ್ರ ಈ ಯಾವ ಗೊಂದಲದಲ್ಲಿಯೂ ಸಿಕ್ಕಿಹಾಕಿಕೊಳ್ಳುವುದಿಲ್ಲ. ಅದು ಅನಂತ, ಅದರಲ್ಲಿ ಎಲ್ಲವೂ ಸಮಾವಿಷ್ಟವಾಗಿದೆ. ಅದು ಎಲ್ಲದರಲ್ಲಿಯೂ ಆತ್ಮ ಭಾವೇನ ಇದೆ. ಎಲ್ಲ ಕೃತಿ–ಕಾರ್ಯಗಳು ಪ್ರಕೃತಿಯವೇ, ತಾನು ಅದರಲ್ಲಿ ಭಾಗಿಯಲ್ಲ ಎಂಬುದನ್ನು ಅದು ಬಲ್ಲದು. ಅಹಂಕಾರ, ಅಹಂನ ಇಚ್ಛೆ, ಅದರ ಬುದ್ಧಿ ಎಲ್ಲವೂ ಪೃಕೃತಿ ನಿಯೋಜಿತವೇ ಎಲ್ಲವೂ ಯಾಂತ್ರಿಕವಾಗಿ ತಾನಾಗಿಯೇ ನಡೆದುಕೊಂಡು ಹೋಗುವುದು ಎಂಬುದನ್ನು ಅದು ಬಲ್ಲದು. ಈ ಆತ್ಮವು ಪ್ರಕೃತಿಯ ತ್ರಿಗುಣಗಳಿಂದ ದೂರವಾಗಿದೆ. ಏಕೆಂದರೆ ಈ ಪ್ರಕೃತಿ, ಈ ಅಹಂ, ಈ ಜೀವಿಗಳು ಎಲ್ಲ ಸೇರಿದರೂ ವಿಶ್ವದ ಅಸ್ತಿತ್ವದ

ಒಂದು ಭಾಗವೂ ಆಗುವುದಿಲ್ಲ ಎಂಬುದನ್ನದು ಬಲ್ಲದು. ಅಸ್ತಿತ್ವ ಅಥವಾ ಸೃಷ್ಟಿ ಅನ್ನುವುದು ಕೇವಲ ಒಂದು ಭವ್ಯ, ನಿರರ್ಥಕ, ಅದ್ಭುತ ಅಥವಾ ರೂಪಾಂತರ ಹೊಂದುತ್ತಲೇ ಇರುವ ಭೂತಗಳ ತೋರಿಕೆಯಲ್ಲವೆನ್ನುವುದು ಅದಕ್ಕೆ ಗೊತ್ತು. ಶಾಶ್ವತವಾದ, ಅವ್ಯಯವಾದ, ಅವಿನಾಶಿಯಾದ ಕಾಲಾತೀತವಾದ ಸ್ವಯಂ ಸೃಷ್ಟಿಯೇ ಆತ್ಮ. ಅದು ಪ್ರಕೃತಿಯ ರೂಪಾಂತರ, ಅವಸ್ಥಾಂತರಗಳಿಂದ ಅಬಾಧಿತವಾಗಿದೆ, ಅದು ಪ್ರಕೃತಿಯ ಎಲ್ಲ ಆಗುಹೋಗುಗಳನ್ನು ಸುಮ್ಮನೇ, ನಿಷ್ಪಕ್ಷಪಾತ ಸಾಕ್ಷಿಯ ಹಾಗೆ ವೀಕ್ಷಿಸುತ್ತದೆ. ಅದು ಯಾವುದರಲ್ಲೂ ಹಸ್ತಕ್ಷೇಪ ಮಾಡುವುದಿಲ್ಲ. ತನ್ನನ್ನು ಯಾವುದೂ ಮುಟ್ಟುಗೊಡುವುದಿಲ್ಲ. ಅದು ಪಾಪ ಪುಣ್ಯಗಳಿಗೆ ಕೂಡ ಸಂಬಂಧಪಟ್ಟಿಲ್ಲ. ಅದು ಸದಾ ವಿಶುದ್ಧ, ಪೂರ್ಣ, ಮಹಾನ್, ಅಕ್ಷುಣ್ಣ ತತ್ತ್ವವಾಗಿದೆ. ಅದಕ್ಕೆ ಸುಖವೂ ಇಲ್ಲ, ದುಃಖವೂ ಇಲ್ಲ. ಅಹಂ ವೃತ್ತಿಯ ಯಾವ ಕೃತಿಗಳೂ ಚಲನೆಗಳೂ ಆತ್ಮನನ್ನು ಆಕರ್ಷಿಸುವುದೂ ಇಲ್ಲ. ವಿಕರ್ಷಿಸುವುದೂ ಇಲ್ಲ. ಅದು ಯಾರಿಗೂ ಪ್ರಿಯವಲ್ಲ, ಅಪ್ರಿಯವಲ್ಲ, ಸ್ನೇಹಿತನಲ್ಲ, ವೈರಿಯಲ್ಲ, ಎಲ್ಲದಕ್ಕೂ ಎಲ್ಲೆಡೆಯಲ್ಲೂ ಸಮವಾಗಿರುವ ತತ್ತ್ವ ಅದು. ಮಾನವನಿಗೆ ತನ್ನೊಳಗೆ ಇಂಥ ಆತ್ಮ ಇದೆ ಎಂಬುದು ಗೊತ್ತಿಲ್ಲ. ಕೇವಲ ಬಹಿರ್ಮುಖವಾದ ಮನಸ್ಸಿನ ಚಟುವಟಿಕೆಗಳಿಂದ ಅದು ಮುಚ್ಚಿ ಹೋಗಿದೆ. ಮಾನವನಿಗೆ ಅಂತರ್ಮುಖಿಯಾಗಿ ಬದುಕುವುದು ಗೊತ್ತಿಲ್ಲ. ತನ್ನನ್ನು ಈ ಎಲ್ಲ ಬಾಹ್ಯ ಜಂಜಡಗಳಿಂದ ಬಿಡಿಸಿಕೊಂಡು, ತಾನು ಮಾಡುವ ಕೆಲಸಗಳಿಂದ ಕೂಡ ಬೇರೆ ಬೇರೆಯಾಗಿ ಪ್ರತ್ಯೇಕವಾಗಿ ನಿಂತು ನೋಡುವುದು, ಇದೆಲ್ಲವೂ ಪ್ರಕೃತಿಯ ಆಂದೋಲನ ಎಂಬುದನ್ನು ನೋಡುವ ಸಾಮರ್ಥ್ಯ ಇಲ್ಲ. ಅಹಂ ವೃತ್ತಿಯೇ ನಿಜವಾಗಿ ದೊಡ್ಡ ಅಡಚಣೆ, ಎಲ್ಲ ಮೋಹಮಾಯೆ ಭ್ರಮೆಗಳ ಕೀಲಿಯೇ ಅದು. ತನ್ನ ಆತ್ಮ ಸ್ಥಾಯಿಯಲ್ಲಿ ಈ ಅಹಂ ವೃತ್ತಿಯಿಂದ ಕಳಚಿಕೊಳ್ಳುವುದೇ ಸ್ವಾತಂತ್ರ್ಯದ, ಮುಕ್ತಿಯ ಮೊದಲ ಹೆಜ್ಜೆ. ಮನ ಮತ್ತು ಅಹಂ ಇವಷ್ಟೇ ನನ್ನ ಸ್ವರೂಪ ಅಲ್ಲ. ನನ್ನ ಆತ್ಮವೇ ನನ್ನ ನಿಜ ಸ್ವರೂಪ ಎಂದು ಅರಿತುಕೊಳ್ಳುವುದನ್ನೇ ಗೀತೆಯು ಮುಕ್ತಿ ಎಂದು ಹೇಳುತ್ತದೆ. ಇದೇ ಗೀತೆಯ ಸಂದೇಶದ ಮೊಟ್ಟ ಮೊದಲ ಸನ್ನೆಯಾಗಿದೆ.

ಅರ್ಜುನನಿಗೆ ಈ ದೃಷ್ಟಿಯಿಂದ ನಿಷ್ಕಾಮ ಕರ್ಮ ಮಾಡುವಂತೆ ಕೃಷ್ಣನು ಆದೇಶಿಸುತ್ತಾನೆ. ಎಲ್ಲ ಕರ್ತವ್ಯ ಕರ್ಮಗಳನ್ನೂ ನಿಷ್ಪಕ್ಷಪಾತತನದಿಂದ, ಸಮಭಾವದಿಂದ, ಯಾವುದೇ ಫಲಾಪೇಕ್ಷೆ ಇಲ್ಲದೇ ಮಾಡಲು ಅರ್ಜುನನಿಗೆ

ಹೇಳುತ್ತಾನೆ. ವಿಶ್ವದೊಡೆಯನಾದ ಪರಮೇಶ್ವರನಿಗೆ ಸರ್ವ ಕರ್ಮಗಳ ಫಲವನ್ನು ಸಮರ್ಪಿಸಿ, ಅವನೇನು ಪ್ರಸಾದಿಸುತ್ತಾನೋ ಅಷ್ಟರಿಂದ ತೃಪ್ತನಾಗಿರುವಂತೆ ಕೃಷ್ಣನು ಹೇಳುತ್ತಾನೆ. ಯಾವ ಜೀವಿಯೂ ತನ್ನ ಕೃತಿಗಳಿಗೆ ಪ್ರಭುವಲ್ಲ. ಯಾರ ತೃಪ್ತಿ ಅಥವಾ ಅಹಂ ತೃಪ್ತಿಗಾಗಿಯೂ ಪ್ರಕೃತಿಯು ವಿಶ್ವ ಯೋಜನೆಯನ್ನು, ಕರ್ಮ ವಿಧಿಯನ್ನು ನಿಯೋಜಿಸಿಲ್ಲ. ಯಾವುದೇ ಜೀವಿಯ ವೈಯಕ್ತಿಕ ಇಚ್ಛೆಗಳಿಗೂ ಇಲ್ಲಿ ಮಹತ್ವ ಇಲ್ಲ. ಮಾನವನ ಬೌದ್ಧಿಕ ಹಾಗೂ ನೈತಿಕ ಮಾದರಿಯ ಪ್ರಕಾರ ಪ್ರಕೃತಿ ಕೆಲಸ ಮಾಡುವುದಿಲ್ಲ. ಯಾವ ನಿರ್ದಿಷ್ಟ ಪಂಗಡ, ಜಾತಿ, ವರ್ಣ, ಧರ್ಮಗಳಿಗಾಗಿಯೂ ಈ ಜಗತ್ತು ಮಾಡಲ್ಪಟ್ಟಿಲ್ಲ. ಯಾವುದೇ ನೀತಿ, ನಿಯಮ ಮಾನವ ಕಲ್ಪಿತ ವಿಧಿ ವಿಧಾನಗಳನ್ನು ವಿಶ್ವ ಮಾನಸದ ಕಾರ್ಯಕ್ಕೆ ಅನ್ವಯಿಸಲು ಬರುವುದಿಲ್ಲ. ಅವಿಧ್ಯಾಜನ್ಯ ಜನರು ಮಾತ್ರ ಈ ರೀತಿ ಅಂದರೆ ತಮ್ಮ ತಮ್ಮ ಅನುಕೂಲಕ್ಕಾಗಿ ಜಗತ್ತು ಹೀಗೆ ಮಾಡುತ್ತದೆ, ಹಾಗೆ ಮಾಡುತ್ತದೆ ಎಂದು ಹೇಳಬಹುದು, ತಮ್ಮ ಸಂಕುಚಿತ ದೃಷ್ಟಿಯ ಮೂಲಕ ಹೇಳಬಹುದು. ಆದರೆ ವಾಸ್ತವಿಕತೆ ಹಾಗಿಲ್ಲ. ಮಾನವನು ತನ್ನ ಅಹಂ ಪ್ರವೃತ್ತಿಯ ಬೇಡಿಕೆ(ಹೇಳಿಕೆ)ಗಳಿಂದ ದೂರವಿರಬೇಕು. ಲಕ್ಷಾವಧಿ ಜನರೆಲ್ಲ ಹೇಗೆ ಕೆಲಸ ಮಾಡುತ್ತಾರೆಯೋ, ಹಾಗೆ ಅವರಂತೆ ಅವರಲ್ಲೊಬ್ಬನಾಗಿ ಕೆಲಸ ಮಾಡಬೇಕೇ ವಿನಃ ತನ್ನ ಕರ್ಮ ಮತ್ತು ಕರ್ಮ ಫಲಗಳನ್ನು ನಿರ್ಧರಿಸಲು ಹೋಗಬಾರದು. ಇಷ್ಟೇ ಅಲ್ಲ, ಇದಕ್ಕಿಂತ ಇನ್ನೂ ಹೆಚ್ಚಿನ ನಿಃಸ್ವಾರ್ಥ ನಡೆಯನ್ನು ಅವನಿಂದ ನಿರೀಕ್ಷಿಸಲಾಗಿದೆ, ಅವನು ನಾನು ಮಾಡುತ್ತೇನೆ. ಅಹಂ ಕರ್ತಾ ಎಂಬ ಭಾವವನ್ನು ಕೂಡ ತ್ಯಜಿಸಬೇಕು.

ಯಾವುದೇ ಕರ್ಮವಿರಲಿ ನಾನು ಮಾಡುತ್ತೇನೆ ಎಂಬ ಮೂಲ ಭಾವವೇ ನಾಶವಾಗಬೇಕು. ವೈಯಕ್ತಿಕತೆಯ ಭೇದವನ್ನೇ ಅವನು ಮರೆಯಬೇಕು. ಏಕೆಂದರೆ ವಿಶ್ವಾತ್ಮಕವಾದ ಬುದ್ಧಿ (ಅಥವಾ ಜ್ಞಾನವೇ) ಅವನಲ್ಲಿ, ಎಲ್ಲರಲ್ಲಿ ಸಮಸ್ತ ಪ್ರಕೃತಿಯಲ್ಲಿ ಕಾರ್ಯಶೀಲವಾಗಿರುತ್ತದೆ. ನಿಜವಾಗಿ ಪ್ರಕೃತಿಯೇ ವಿಶ್ವಾತ್ಮಕ ಕರ್ಮಚಾರಿ (ಕೆಲಸಗಾರ) ಎಲ್ಲರ ಕೆಲಸಗಳೂ ಪ್ರಕೃತಿಯವೇ ಹೀಗಾಗಿ ಎಲ್ಲ ಕರ್ಮಗಳ ಫಲವು ಕೂಡ ತನಗಿಂತ, ಎಲ್ಲರಿಗಿಂತ ಹಿರಿದಾದ ತತ್ತ್ವವಾದ ಪ್ರಕೃತಿಯ ಶಕ್ತಿಗೇ ಸಲ್ಲತಕ್ಕದ್ದು. ಇಡೀ ಜಗದ ಕರ್ಮ, ಕರ್ಮ ಫಲ ಹಾಗೂ ಮುಂದಿನ ಪರಿಣಾಮದ ಹೊಣೆ ಎಲ್ಲವೂ ಪ್ರಕೃತಿಯದೇ ಆಗಿರುತ್ತದೆ. ಮಾನವನಿಗೆ ಇದು ತಿಳಿದು, ಇದರಂತೆ ನಡೆಯಲು ಸಾಧ್ಯವಾದರೆ, ಆಧ್ಯಾತ್ಮಿಕವಾಗಿ ಈ ಎರಡು ಸಂಗತಿಗಳನ್ನು ಪಾಲಿಸಲು

ಸಾಧ್ಯವಾದರೆ, ಕರ್ಮ ಬಂಧನದ ಗಂಟು ಅವನಿಂದ ಬಹು ದೂರ ಕಳಚಿ ಹೋಗುವುದು. ಏಕೆಂದರೆ ಕರ್ಮದ ಗಂಟು ಸಂಪೂರ್ಣವಾಗಿ ಮಾನವನ ಅಹಂ ಪ್ರವೃತ್ತಿ ಮತ್ತು ಅದರ ಚಲನೆಗಳನ್ನು ಆಧರಿಸಿರುವುದು. ಆವೇಶ, ಉದ್ವೇಗ, ಪಾಪಕರ್ಮ, ವೈಯಕ್ತಿಕ ಸುಖದುಃಖಗಳೆಲ್ಲವೂ ಅವನಿಂದ ದೂರಾಗುವುವು. ಅವನು ಅಂತರ್ಮುಖಿಯಾಗಿ ಶಾಂತನಾಗಿ, ಪರಿಶುದ್ಧನಾಗಿ, ಪ್ರತಿ ಜೀವ ಜಂತುಗಳಲ್ಲಿ ಏಕೋ ಭಾವದಿಂದ ಜೀವನ ನಡೆಸುವುನು. ಕರ್ಮಗಳು ಅವನ ಮಟ್ಟಿಗೆ ಯಾವ ವ್ಯಕ್ತಿಗತ ಫಲವನ್ನೂ ಉಂಟು ಮಾಡುವುದಿಲ್ಲ ಯಾವ ಕರ್ಮಗಳೂ ಅವನ ಆತ್ಮದ ಮೇಲೆ soul ಯಾವುದೇ ಕಲೆಯನ್ನು ಉಳಿಸುವುದಿಲ್ಲ. ಅವನಿಗೆ ಆಂತರಿಕ ಆನಂದ, ಶಾಂತಿ, ಸಮಾಧಾನ, ಅಕ್ಷುಣ್ಣ ಆನಂದ ದೊರೆತಿರುವುದು. ಅವನು ಮುಕ್ತನಾಗಿರುತ್ತಾನೆ. ಅವನ ಅಂತರಂಗದಲ್ಲಿಯೇ ಆಗಲಿ, ಬಹಿರಂಗದಲ್ಲಿಯೇ ಆಗಲಿ ಯಾವುದೇ ತೆರವಾದ ನಿಮ್ನ ವ್ಯಕ್ತಿತ್ವದ ಅಂಶಗಳು ಇರುವುದಿಲ್ಲ. ಅವನು ಎಲ್ಲರ ಜೊತೆ, ಎಲ್ಲದರ ಜೊತೆ ಪ್ರಜ್ಞಾಯುಕ್ತವಾಗಿ ಒಂದಾಗಿರುತ್ತಾನೆ. ಅವನ ಬಾಹ್ಯ ಮನಸ್ಸು, ಪ್ರಾಣ, ಶರೀರ ಎಲ್ಲವೂ ವಿಶ್ವ ಪ್ರಜ್ಞೆಯ ಜೊತೆ ಒಂದಾಗಿ ವಿಶ್ವಾತ್ಮಕವಾಗಿರುವುವು. ಅವನ ಭೇದ ಪ್ರಕೃತಿಯ ಮೂಲವಾದ ಅಹಂಕಾರವು ಆಧ್ಯಾತ್ಮಿಕ ಸತ್ತೆಯ ಜೊತೆ ಒಂದಾಗಿರುವುದು. ಅವನ ಅಹಂ ಪ್ರವೃತ್ತಿಯು ವಿಶ್ವ ಕಾರ್ಯದಲ್ಲಿ ಒಂದಾಗಿ ಸೇರಿ ಹೋಗಿರುವುದು.

ಆದರೆ ಈ ಮುಕ್ತಿಯು ಎರಡು ಏಕ ಕಾಲಕ್ಕೆ ಆಗುವ ಆದರೆ ಇನ್ನೂ ಪೂರ್ತಿಯಾಗಿ ಸಮನ್ವಯವಾಗದಿರುವ ಸಂಗತಿಗಳ ಮೇಲೆ ನಿರ್ಭರವಾಗಿದೆ. ಆತ್ಮದ ಸ್ಪಷ್ಟ ದರ್ಶನ ಹಾಗೂ ಪ್ರಕೃತಿಯ ನೈಜ ದರ್ಶನ ಇವೆರಡೂ ಸಂಗತಿಗಳ ಮೇಲೆ ಅದು ಸಾಪೇಕ್ಷವಾಗಿ ಅವಲಂಬಿಸಿದೆ. ಇದನ್ನು ವೈಜ್ಞಾನಿಕ ಮತ್ತು ಬೌದ್ಧಿಕ ಅಸಂಗತ್ವದ ಜೊತೆ detachment ಹೋಲಿಸಬಾರದು. ಈ ರೀತಿಯ ಅಸಂಗತ್ವವು ಓರ್ವ ಕಟ್ಟರ್ ಭೌತಿಕವಾದಿಯೂ ಸಹ ಸಾಧಿಸಬಹುದು. ಅವನಿಗೆ ಪ್ರಕೃತಿಯ ಸಖೋಲ (ಆಳವಾದ) ಜ್ಞಾನ ಇರುತ್ತದೆ. ಇಷ್ಟೇ ಅವನಿಗೆ ತನ್ನ ಆತ್ಮದ, ತನ್ನ ಅಸ್ತಿತ್ವದ ಬಗ್ಗೆ ಅರಿವು ಇರುವುದಿಲ್ಲ. ಇನ್ನು ಇದನ್ನು ಆದರ್ಶ ಚಿಂತನೆಯ ಮನೀಷಿಯ ನಿರ್ಲಿಪ್ತತೆಯ ಜೊತೆಗೂ ಹೋಲಿಸಲಾಗದು. ಏಕೆಂದರೆ ಅವನು ತನ್ನ ವಿಶಾಲವಾದ ಪ್ರಕಾಶಮಾನವಾದ ತರ್ಕದ ಮೂಲಕ ತೊಂದರೆದಾಯಕ ಅಹಂನ ಎಲ್ಲ ಪ್ರಕಾರಗಳನ್ನು ಮೀರಬಹುದಾದರೂ ಅದಕ್ಕಿಂತ ಹೆಚ್ಚಿನ ಸಾಧನೆ ಇರುವುದಿಲ್ಲ.

ಆದರೆ ಇದು ಹೆಚ್ಚು ವಿಶಾಲವಾದುದು, ಹೆಚ್ಚು ಪರಿಪೂರ್ಣವಾದುದು, ಜೀವಂತವಾದುದು, ಆಧ್ಯಾತ್ಮಿಕ ನಿರ್ಲಿಪ್ತತೆ ಇದು. ಇದು ಮನಸ್ಸು ಮತ್ತು ತರ್ಕಗಳಿಗಿಂತ ಶ್ರೇಷ್ಠವಾದ, ಅವುಗಳಿಗೆ ನಿಲುಕದ ಹಾಗೂ ಪ್ರಕೃತಿಗಿಂತ ಉನ್ನತನಾದ ಪುರುಷೋತ್ತಮನ ದರ್ಶನದ ಮೂಲಕ ಸಿದ್ಧಿಸುವಂಥದು. ಆದರೆ ಇಂಥ ಅಲಿಪ್ತತೆಯು ಕೂಡ ಕೇವಲ ಆರಂಭಿಕ ಹೆಜ್ಜೆ ಎಂಬುದನ್ನು ಮರೆಯಬಾರದು. ಸಂಪೂರ್ಣ ಮುಕ್ತಿಯ ಹಾಗೂ ಆಧ್ಯಾತ್ಮಿಕ ಜ್ಞಾನ ರಹಸ್ಯದ ಪ್ರಾರಂಭಿಕ ಹಂತವಷ್ಟೇ ಹೊರತು ದೈವೀ ರಹಸ್ಯಕ್ಕೆ ಪೂರ್ಣ ರೂಪದ ಬೀಗದ ಕೈ ಎಂದು ಭಾವಿಸಬಾರದು. ಏಕೆಂದರೆ ಇಷ್ಟರಿಂದಲೇ ಪ್ರಕೃತಿಯ ಎಲ್ಲ ರಹಸ್ಯ ಬಯಲಾಗಿ ಬಿಡುವುದಿಲ್ಲ. ಸತ್ತೆಯ ಪ್ರಾಕೃತಿಕ ಕ್ರಿಯಾಶೀಲ ಅಂಗವು ಆಧ್ಯಾತ್ಮಿಕ ಮತ್ತು ಸ್ವಂತ ಅಸ್ತಿತ್ವದಲ್ಲಿ ಪ್ರಕೃತಿಯಿಂದ ಬೇರೆಯಾಗಿ ಉಳಿದು ಪ್ರಕೃತಿಯ ಕ್ರಿಯೆಗಳಲ್ಲಿ ಭಾಗವಹಿಸದೇ ನಿಷ್ಕ್ರಿಯವಾಗಿ ಉಳಿಯುವುದು. ದೈವೀ ನಿರ್ಲಿಪ್ತತೆಯು ದೈವೀ ಕ್ರಿಯೆಯಿಂದ ದೂರ ಉಳಿಯಬಾರದು, ಪ್ರಕೃತಿಯ ಕ್ರಿಯೆಗಳಲ್ಲಿ ಪಾಲ್ಗೊಳ್ಳಬೇಕು, ಅಹಂನ ಭಾಗವಹಿಸುವಿಕೆಯಿಂದ ಅಲಿಪ್ತವಾಗುಳಿದು, ದೈವೀ ನಿರ್ಲಿಪ್ತತೆಯ ಮೂಲಕ ದೈವೀ ಕಾರ್ಯಶೀಲತೆಯನ್ನು ಪಡೆಯಬೇಕು. ದೈವೀ ಗುರುವಾದ ಕೃಷ್ಣ ಮನದಲ್ಲಿದ್ದುದು ಈ ರೀತಿಯ ದಿವ್ಯ ಸತ್ಯ, ಅಂತೆಯೇ ಅವನು ಎಲ್ಲ ಪ್ರಕಾರದ ಅಹಂಕಾರಕ ಕರ್ಮಗಳಿಂದ ನಿರ್ಲಿಪ್ತತೆಯನ್ನು ಹೇಳಿದ್ದಾನೆ. ಪುರುಷೋತ್ತಮನೇ ನಿಜವಾಗಿ ನಮ್ಮೆಲ್ಲರ ಕರ್ಮಗಳ ಒಡೆಯನೆಂಬ ಹಾಗೂ ಅವತಾರ ವಿಷಯಕ ಸಂಪೂರ್ಣ ತಾತ್ವಿಕ ಅರಿವು ಅತ್ಯಂತ ಪ್ರಾಥಮಿಕ ಅವಶ್ಯಕತೆ ಎಂದು ಅವನು ಹೇಳುತ್ತಾನೆ. ಆಧ್ಯಾತ್ಮಕ ಶಾಂತಿ, ನಿರ್ಲಿಪ್ತತೆ, ಸಮತ್ವ, ಏಕತೆಗಳಿಗೆ ಕರೆದೊಯ್ಯುವ ಸತ್ಯಗಳನ್ನು ಮಾತ್ರ ಕೃಷ್ಣ ಪ್ರತಿಪಾದಿಸುತ್ತಾನೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಅವಿಕಾರಿಯಾದ ಪುರುಷನ ಅರಿವು, ಆತ್ಮ ಜ್ಞಾನ, ಇವುಗಳನ್ನೇ ಕೃಷ್ಣನು ಅಗತ್ಯವಾದ ಸಂಗತಿಗಳು ಎಂದು ಹೇಳುತ್ತಾನೆ. ಇವುಗಳಿಗೆ ಅವನು ವಿಶಿಷ್ಟ ಮಹತ್ವದ ಸ್ಥಾನ ನೀಡಿರುತ್ತಾನೆ. ಇದಕ್ಕೆ ಪೂರಕರವಾದ ಇನ್ನೊಂದು ಅವಶ್ಯಕ ಮಹಾ ಸತ್ಯವನ್ನು ಇಲ್ಲಿ ಪೂರ್ಣವಾಗಿ ವಿವರಿಸದೇ, ಅಸ್ಪಷ್ಟವಾಗಿ ಸೂಚಿಸುತ್ತಾನೆ. ಮುಂದಿನ ಅಧ್ಯಾಯಗಳಲ್ಲಿ ಆ ಅವಶ್ಯಕ ಸತ್ಯವನ್ನು ವಿಸ್ತಾರವಾಗಿ ವಿವರಿಸುತ್ತಾನೆ.

(ಸಶೇಷ...)

## ಶ್ರೀ ಅರವಿಂದರ
## ‘ಊರ್ವಶಿ’

**– ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ), ಕಲಬುರ್ಗಿ**

**6**

### ಅಧ್ಯಾಯ 2

ಆಷಾಡದಲಿ ಅಂಕೆಯಿಲ್ಲದೆ ಅಲೆದು ಅಂತರಿಕ್ಷದಾ ಬೆಳ್ಮುಗಿಲನು ಬರಿದಾಗಿಸಿದ
ದಟ್ಟಮೋಡಗಳೆಲ್ಲ
ಗ್ರೀಷ್ಮರಥವನೇರಿ ಗೊತ್ತುಗುರಿಯಿಲ್ಲದಾ ಗಾಳಿ ಗೊಂಡಾರಣ್ಯದೊಳಗೆ ಗಮಿಸಿ
ಗೌಪ್ಯವಾಗಿದ್ದು,
ಶ್ರಾವಣಸಂತೆಯು ಸೇರುವ ಸಮಯದಲಿ ಸಿಡಿಲುಗುಡುಗೆಂಬ ಸಹಚರರೊಡನೆ
ಸುಳಿದು,
ಅಂಬರವನೆಲ್ಲ ಶಂಬರದೈತ್ಯರಿಂದ ಸಿಂಗರಿಸಿ, ಅಬ್ಬರಿಸುತಿಹ ಅಭ್ರವಾರಿದರಿಂದದನು
ಅಲಂಕರಿಸಿರಲು,
ಸಿಡಿಲುಶಕ್ತ್ಯಾಯುಧವದು ಸಿಡಿದು, ಕವಲುಗೋಲ್ಮಿಂಚದು ಕಡಿದು,
ಕಾರ್ಮೋಡಗಳನೆಲ್ಲ ಕರಗಿ ಕಣ್ಣೀರಾಗಿಸಿತ್ತು.
ವರ್ಷಾಲಾಪವದು ವರ್ತ್ಮಬಂಧದಲಿ ಒತ್ತೆಯಾಳಾಗಿರಿಸಿದ್ದ ವಾರುಣಿಯರನೆಲ್ಲ
ಧಾರುಣಿಗಿಳಿಸಿತ್ತು.
ಧಾರಾಧರರ ಭಾರದಿಂದ ಬಳಲಿ ಬಾಗಿದ್ದ ಬಾನಂಗಣವದು ನೀರಿಳಿದಿರಲು
ನಿಂತು ನಲಿಯುವೊಂತೆ,
ಮಹೇಂದ್ರೋಕ್ತಿಯಿಂದ ಮುನಿಸೆಲ್ಲ ಮರೆಯಾಗಿ ಮುನಿಯ ಮನವದು
ಮಾಲಿನ್ಯಮುಕ್ತವಾಗಿರಲು,
ಕವಿಯೋರ್ವ ಕಾವ್ಯದಲಿ ಕಾರಂಜಿಯನೆ ಕರೆವಂತೆ, ನುಡಿದನವ
ನಾಟ್ಯಾಚಾರ್ಯ ನಾಕವೆಲ್ಲ ನಲಿವಂತೆ:
“ನಾಕನಿಲಿಂಪರಿಗೆಲ್ಲ ನೃಪನಿರುವ ನಮುಚಿಸೂದನನೇ, ನನ್ನೀ ನಾಲಿಗೆಯೊರೆದ
ನುಡಿಗಳೆಂದೂ ನಿಷ್ಫಲವಲ್ಲ

ಓಷ್ಠದಿಂದೊಗೆತಂದ ಗೋಷ್ಠವಿದು ವಿಧಾತೃಗಳೊರೆದ ವಿಧಿವಾಙ್ಮಯದಂತೆ
 ವಜ್ರಾಂಕಿತವಿಹುದು.
ಪ್ರಳಯಾಬ್ಧಿಯಲಿ ಪರಮಾಣು–ಪರತತ್ವಗಳೆಲ್ಲ ಪ್ರಾಣಾಂತಗೊಂಡರೂ
 ಪದವಿದನು ಪ್ರವರ್ತಿಸಲಾಗದು.
ಆಸ್ಥಾಣುವಿರುವಾ ಆನಂದಮಯನ ಆಲಾಪಗಳೇ ಆವಿಷ್ಕರಣಗೊಂಡು
 ಆಮ್ನಾಯಗಳೆನಿಸಿರುವಾಗ
ಪರಮಪೂರುಷನಿಂದ ಪುಟ್ಟಿದ ಪದ್ಯಗಳೇ ಪ್ರಪಂಚವಿದನು ಪಲ್ಲವಿಸಿದ
 ಪಲ್ಲವಿಯಾಗಿರುವಾಗ
ಹರನ ಹಾಡಿನಿಂದಲೇ ಹತ್ತುಜಗತ್ತುಗಳವು ಹೆತ್ತಿರುವ ಹತ್ತಾಳುಗಳ ಹಣೆಬರಹವದು
 ಹುಟ್ಟಿರುವಾಗ
ನಿಯತಿ ನೀಲಿಮದಿ ನಿಂತು ನುಡಿಸಿಹ ನಾಲ್ನುಡಿಗಳಿವನು ನಿರರ್ಥಕವೆಂದು
 ನಿರ್ಲಕ್ಷಿಸಲಾಗದು.
ಪ್ರಕೃತಿಯೆಂದೂ ಪ್ರಾಪಂಚಿಕವಿದನು ಪೊಲ್ಲಮಯವಿಹ ಪಾಪವೆಂಬಾ
 ಪಂಜರದೊಳಗಿಟ್ಟ ಪಕ್ಷಿಯಂತಾಗಿಸಿಲ್ಲ.
ಪಂಚಮಾರ್ಥಿಕವಿದನು ಪುಣ್ಯಮಾರ್ಜನೆಗೈದು ಪಾರಮಾರ್ಥಿಕದಾ
 ಪೂರುಷನಾಗಿಸಲೆಂದು ಪಣತೊಟ್ಟಿಹುದು.
ವಿಧಿಯೆಂದೂ ವಜ್ರಸಂಕೋಲೆಯೊಳು ವ್ಯಾಪ್ಯವಿಶ್ವವಿದನು
 ಒತ್ತೆಯಾಳಾಗಿರಿಸಿಕೊಂಡದನು ವಿಪ್ಲವಗೊಳಿಸಿಲ್ಲ.
ಹದ್ದುಮೀರುವವರ–ಹದ್ದುಪಾರಾಗಿಸುವವರ ಹದ್ದುಬಸ್ತಿನಲಿಡುವ
 ಹುದ್ದೆಗದ್ದುಗೆಯನೇರಿದಾ ದೈವವೇ
ಜಲಜೆಯ ಜೀವನಜಾತಕವನು ಜಪಿಸಿಹುದು, ಅದರೊಲಂತೆ ಅಪ್ಸರಿಯ
 ಅವರೋಹಣವಿದು ಅನಿವಾರ್ಯ.
ಮಾನವರನು ಅತಿಮಾನವರಾಗಿಸಿ, ಮರ್ತ್ಯವನು
 ಮಹಾಕಾರಣಮಯವಾಗಿಸುವ ಮುನ್ನೆಲೆಯಲಿ
ನರ–ನಿಲಿಂಪರ ನಿಯೋಗವನು ನಿಶ್ಚೈಸಿ, ಸುರ–ಸಾಮಾನ್ಯರ ಸಂಸರ್ಗವನು
 ಸಮನ್ವಯಿಸಿ,
ಬರಲಿರುವ ಭವ್ಯಭವಿಷ್ಯದೊಳು ದೇವ–ಜೀವರುಗಳ ಸ್ವಪ್ನ ಸಂಪರ್ಕವನು
 ಸಾಧುಗೊಳಿಸಿ

ದ್ಯಾವಾಪೃಥಿವಿಯರ ದುರ್ಬರ ದಾರಿಯೊಳು ದಿವ್ಯದ್ವಾರವೊಂದನಿಡಲೆಂದದು ಧೇನಿಸಿಹುದು.
ಜೀವನಸ್ವರ್ಗದ ಜೀವನಾಡಿಯಾಗಿಹ ಜಲಕನ್ಯೆಯವಳು ಜರ್‍ರನೆ ಜರಿದು ಜಡಜಗತ್ತಿಗಿಳಿಯಲೇಬೇಕು.
ಊರ್ವಶಿಯವಳು ಉಚ್ಚಮನರಾಜ್ಯದಿಂದ ಉದುರಿ, ಜಲಪಾತದೊಳು ಉರ್ವಿತಲಕಿಳಿಯಲೇಬೇಕು.
ಅಪ್ಸರಿಯವಳು ಅಗ್ನಿದಿವ್ಯದೊಳು ಹಾದು ಹೊನ್ನಾಗಬೇಕು. ಭವಾಂತರದೊಳು ಬದುಕಿ ಬಂಗಾರವಾಗಬೇಕು
ಭಾಮಿನಿಯ ಬದುಕು ಭಾಮಂಡಲಕಷ್ಟೇ ಸೀಮಿತವಾಗಿಲ್ಲ. ನೂರುನಕ್ಷತ್ರಗಳಿಗವಳು ನಿಯಂತೃವಾಗಬೇಕು.
ಮೃಣ್ಮಯದೊಳಗಾಣ್ಮನಿಗಾಗಿ ಅಲೆದಲೆದು ಹಣ್ಣಾಗಬೇಕು, ಕೋಟಿಕಾಣ್ಕೆಗಳಿಗವಳು ಕಣ್ಣಾಗಬೇಕು.
ಮನೋಕೋಶವದು ಮುದುರಿ ಮಣ್ಣಾಗಬೇಕು, ಅನ್ನಮಯದೊಳು ಅನ್ನವದು ಬನ್ನವಾಗಬೇಕು.
ಮನಃಶಾಂತಿಯ ನೀಲಖಂಡಗಳ ಕೊನ್ನಾರದಲಿ ಬೆಳಕುಮಳೆ ಕರೆಯುತಿಹ ಕೆನ್ನೀಲ ನೇಸರರನೇ
ಆನಂದೋಧದಿಯೊಳು ಪ್ರವಹಿಸುತಿಹ ಜಲರಾಶಿಯಿಂದ ಜೀವನದಿಯಾಗಿ ಜರಿದು ಜ್ಯೋತಿತೀರವನರಸಿ,
ಗುಂಭಗಂಭೀರವಿಹ ಗಂಗಾದ್ವಾರದೆಡೆ ಗಮಿಸುತವಳು ಪುಣ್ಯಪಾತ್ರದೊಳು ಪವಿತ್ರಳಾಗಿ ಪ್ರವಹಿಸಲಿ.
ಆನಂದಸ್ರೋತವನು ಬಿಟ್ಟು ಬೆಳೆದಿಹ ಬೆಟ್ಟದಲಿ ದೇವಹಾಸದ ರತ್ನಛಂದದೊಲು ಸ್ವಚ್ಛಂದವಿಹ
ಕಂದರದಲಿ ಜೀರಂಗಿಜಲಪಾತದಿಂದಲೂ, ಕುಂಕುಮೇಕಾಂತಗಳಿಂದಲೂ ಕಣ್ಕಟ್ಟಿ ಕುಳಿತಿರುವ
ಕಾನನದಲಿ ನಂದನವನದ ನೂರೆಂಟು ನೆನಪುಗಳ ನೇಯ್ದು ವನವಾಸದ ವಸ್ತ್ರವನಲ್ಲಿ ವಿಸ್ತರಿಸಲಿ.

ಸೃಷ್ಟಿಯಾದಿಯಿಂದಲೂ ಅಜ್ಞಾನದಲೇ ಅಲವತ್ತುಕೊಂಡ ಅವನೀತಲಕೆ
ಅವತರಿಸುವ ಅಪ್ಸರಿಯು
ಪರಿವರ್ತನೆಯ ಪಥದೊಳಗೆ ಪದವಿಟ್ಟು ಪೃಥಿವಿಗೆ ಪೂರ್ಣತೆಯ ಪಾಠವನು
ಪಠಿಸಿ ಪ್ರವರ್ತಿಸುವಳು.
ಬುವಿಯ ಬೆಚ್ಚಗಿನ ಬಾಂಧವ್ಯದ ಬಾಹುಬಂಧನದೊಳು ಬಳಲಿ, ಪೃಥಿವಿಪತಿಯ
ಪ್ರೇಮದೊಳು ಪಳಗಿ,
ತಾಯಿಯೆಂದು ತೆಗೆದಪ್ಪಿ ಮುತ್ತಿಡುವ ಮುದ್ದುಮಕ್ಕಳ ಮಾತಾಯಿಯಾಗಿಲ್ಲಿ ಮತ್ತೆ
ಮಾನಸಕೆ ಮರಳುವಳು.
ಅವರೋಹಣದಿಂದ ಅವನಿಯದು ಅರಳುವದು, ಬಳಿಸಾರುವ ಭವಚರಣದಿಂದ
ಭೂಮವಿದು ಬೆಳಗುವುದು."
ಅಚ್ಯುತನ ಅಮರಮೂರ್ತಿಯನು ಪ್ರತಿಷ್ಠಾಪಿಸಿದಾ ಪುಣ್ಯಸ್ಥಾನದಲಿ ಮಂತ್ರಗಳೆಲ್ಲ
ಮುಗಿದು ಮೌನವಾಗಿರಲು
ಬಾರಿಸಿದ ಬಂಗಾರದ ಗಂಟೆಯದು ಗಣಗುಟ್ಟುತ್ತ ಗುಡಿಗೋಪುರವನೇ ಗಡಚಿಕ್ಕಿ
ಗಾಳಿಗುಂಯ್ಗುಡಿಸುವೊಂತೆ,
ಭರತನ ಶಾಪದಿಂದ ಸ್ತಬ್ಧವಾಗಿದ್ದ ಸ್ವರ್ಗಪ್ರಾಂಗಣದಲಿ ಸಹಸ್ರಾಕ್ಷ' ಸ್ವರವದು
ಸುಳಿದು ಸೆಳೆಮಿಂಚಾಡಿಸಿತ್ತು.
ಪುರಂಧರನಾಜ್ಞೆಯನು ಪಡೆದು ಪೃಥಿವಿಯೆಡೆಗೆ ಪಯಣಿಸಲೆಂದು ಪದವಿಟ್ಟ
ಪುಣ್ಯವತಿಯು,
ಮಾನಸಾಧಿಪತಿಗಳ ಮೈಕಾಂತಿಯಿಂದ ಮಿಂಚಿ ಮಿನುಗುತ್ತಿರುವ
ಮೌನಮಂದಿರದಿಂದ ಮುನ್ನಡೆದು,
ಪರಾತ್ಪರನ ಪುಣ್ಯದುಸಿರೇ ಪಾವನಪವನವಾಗಿ ಪರ್ವತದೆದೆಗೆ ಪ್ರೇಮಮಂತ್ರವನು
ಪ್ರೋಕ್ಷಿಸುತ
ಮೆಲುಗಾಳಿ–ಮಂದಾನಿಲಗಳ ಕರೆದು ಕಂಪಿಸಿದ–ತಂಪಿಸಿದ ತೀರ್ಥವನದೊಳು
ತಿರುಗಿದಳು.
ಮನೋಮಯದಾ ಮದ್ಯಾಹ್ನದಲಿ ಮಂಜುಲಗಾನದಿಂದ ಮೈಮರೆತು ಮಲಗಿ
ನಿದ್ದೆಹೋಗಿರುವಾ

ನೀಲಖಂಡಗಳ ನಡುಗಡ್ಡೆಗಳಲಿ ನೀಲಶರಧಿಗಳಿಂದ ಸುತ್ತಿವರೆದು
ಸುಂದರವಿರುವಾ ನಂದನಾರಣ್ಯದಲಿ
ಹರಿದ್ವರ್ಣವನು ಹೊದ್ದು ಹಾಯಾಗಿರುವ ಕಲ್ಪವೃಕ್ಷಗಳ ಮುಗಿಲಕೊಂಬೆಯನೇರಿ
ಕುಳಿತು ಕೂಗುತಿಹ ವಸಂತಕೋಕಿಲದ ಕುಕಿಲಿನಲಿ ಭಾವಸಮಾಧಿಯೆಂಬಾ
ಬಾವಿಯಾಳವ ಮುಟ್ಟಿ ಮೇಲೆದ್ದಿಹಳು.
ಸೊಂಪುವಡೆದು ಸುತ್ತಿರುವಾ ತಪ್ಪಲುವೀಡಿನಲಿ ತುಂಬಿರುವ ತಂಪುವೃಕ್ಷಗಳವು
ತರುಣಿಗೆಂದು
ಹೆಸರಿಲ್ಲದ ಹಣ್ಣುಗಳು ಸುರಿಸಿತ್ತು, ಕಾಡುಕುಸುಮಗಳರಳಿ ಕಾಂತೆಯನು ಕೈಬೀಸಿ
ಕರೆದಿತ್ತು.
ಬೆಟ್ಟದಂಚಿನ ಹೂವುಗಳು ಪರಿಪೂರ್ಣಪುಷ್ಪಗಳಾಗಿ ಪಲ್ಲವಿಸಿ ಪರಿಮಳವ
ಪಸರಿಸಿತ್ತು.
ನಿಲಿಂಪರ ನಿತಾಂತ–ನಿಲಯವಾಗಿರುವಾ ನಂದನೋದ್ಯಾನದಿಂದ ನಡೆದ
ನಿರ್ಮಲೆಯವಳು
ಪರ್ವತದಂಚಿನಲಿ ಪುಟ್ಟಿ ಪುಷ್ಕರಾದಿ–ಪುಂಡರೀಕಗಳನು ನೀಲಗೋಳವಾಗಿ
ನಿರ್ಮಿಸಿದ ನೀರ್ಝರಿಯ ನೂರೆಂಟು ನೆಲೆಸೆಲೆಗಳವು ನೆಲಕಿಳಿದು
ನದಿಯಾಗಿ ನಡೆದಿರುವಾ ನೀರದಾರಿಯೊಳು ನಿಂದಳು.
ಭೂಮದಿಂ ಬುವಿಯೆಡೆಗೆ ಭವಿಸುವ ಭಾಗೀರಥಿಯಳಿಹ ಸ್ವರ್ಗಂಗೆಯ
ಸನಿಹದೊಳು ಸಂದಳು.
ಮೋಡಗಳಿಂದ ಮುಸುಕಿ ಮಾಯಾಜಾಲದ ಜಾಲಂಧ್ರದೊಲಿಹ ಜಲಜಂಜರದೆಡೆ
ಜರಿದಿಹಳು.
ನದಿನೀರಿಗೆಂದು ನಡೆದ ಮಾತೆಯೊಡನೆ ಮುನ್ನಡೆದ ಮುದ್ದುಮಗುವೊಂದು
ಮೊಳಕಾಲೆತ್ತರದ ಮುನ್ನೀರನಲಿ, ಲಂಗವದು ತೊಯ್ದು ಒದ್ದೆಯಾಗದೊಲದನು
ಮುದ್ದೆಯಾಗಿ ಮೇಲೆತ್ತಿ ನಡೆದು ನೀರಾಟದಿ ನಲಿಯುವೊಂತೆ,
ಸ್ವರ್ಗಂಗೆಯ ಸೆಳೆವಿಗಿಳಿದ ಸ್ವರ್ಣೀಮಬಾಲೆಯವಳು ಸ್ವರ್ಣಹಸ್ತದಿಂದ
ವಸ್ತ್ರವನಿಡಿದು ನಡೆದು ನಾಕದಂಚಿಗೆ ನಿಂದಳು.
ಹರಿದಂತದಿ ಹರನ ಹಣೆಗಣ್ಣು ಹೊಳೆದಂತೆ, ದಿವದ ದಿಕ್ತಟದಲಿ
ದಿಟ್ಟಿಗೋಚರವಿರದ ದಿಡ್ಡಿಬಾಗಿಲೊಂದು ದೂಡಿತ್ತು.

ನೆಲದಡಿಯಲಿ ನಿಂತು ನೋಡಿರಲು ಭದ್ರಸ್ಥ ಗಹ್ವರವೊಂದು
ಗಗನಗೂಢದೊಳಗಿಂದ ಗಡಿತೆರೆದು ನಿಂತಂತಿರುವ
ಸ್ವರ್ಲೋಕದ ಸ್ವರ್ಣಿಮದ್ವಾರದಿಂದ ಸುಳಿವುಕೊಡದಂತೆ ಸುಳಿದು ಇಳಿದು
ಇಳೆಯೊಳಗೆ ಇಂಗುತಿಹ
ಗುಪ್ತಗಾಮಿನಿ ಗಂಗೆಯೊಡನೆ ಗಮಿಸಿದ ಗನ್ಧರ್ವಳು ಗಹ್ವರಿ–ಗಂಧವತಿಯಳಿಹ
ಮಹಿತಲಕೆ ಮುಂಬರಿವ ಇಳಿಜಾರಿನೆಡೆಗಿಳಿದು, ಇಕ್ಕೆಲದಲೂ ಕಡಿದಿರುವ
ಘಟ್ಟಮಾರ್ಗದಂಚಿನಲಿ
ಗಟ್ಟಿಯಾಗಿ ನಿಂತಳು.
ಮುಗಿಲ ಗೂಢದಲಿ ಗೌಪ್ಯವಿರುವ ಗಾಳಿಸೇತುವೆಯ ಗಡಿಯೊಳಗವಳ
ಅವರೋಹಣವ ಅಂತ್ಯಗೊಳಿಸಿದಳು.
ನೆಲಮುಗಿಲಿನ ನಡುಮಂತರದಿ ನೀರದದೊಲು ನಿಂತು ನಿರುಕಿಸಿದಳವಳು
ನಿರ್ವಯಲದ ನಿರಾಳವನು.
ಹೆಣ್ಣವಳ ಹಿಮ್ಮೇಳದಲಿ ಹರ್ಷವರ್ಷವನೇ ಹರಿಸುತಿಹ ಹಂತಹಂತದ
ಹಸಿರುಗೋಪುರಗಳವು
ನೀರದ–ನಾರದರಿಲ್ಲದೆ ನಲಿಯುತಿಹ ನೀಲಿಮದಾ ಶುಭ್ರನಿರಭ್ರಕಾಂಡಪಟದಿ
ಅಚ್ಛಾದಿಸಿರಲೊಂದು ಅಪೂರ್ವಕಾಂತಿ.
ಆ ಉತ್ತುಂಗ ಪರ್ವತರಾಜರುಗಳ ವಕ್ಷಸ್ಥಲದ ಮೇಲೆ ಮೆಟ್ಟಿ ಮೂಡಿರುವ
ಗಭೀರತೆಯ ಗುಂಭದೊಳಗಿಂದ
ಸಹಸ್ರಸ್ರೋತಗಳವು ಹುಟ್ಟಿ ಹರಿದು ಬರಿದಿರುವ ಬೆಟ್ಟದಡಿಯ ಬಯಲುಗಳನೆಲ್ಲ
ಬಂಗಾರಮಯವಾಗಿಸಿತ್ತು.
ಆ ಮನಃದಪ್ಪಲಿದೊಳು ಮಾನಂದವೇ ಗೋವಳನಾಗಿ ಗೋಮಂಡಲಾದಿ
ಚಂದ್ರಮೇಘವೃಂದಗಳನು ಮೇಯಿಸಿತ್ತು.
ಆ ನೀಲಖಂಡಗಳ ನಡುವೆ ನೇರಿಳೆಬಣ್ಣದ ನೂರುಬನಗಳನು ಬಳಸಿ
ಬೆಳೆದಿತ್ತೊಂದು ಭವದ ಬೃಹದಾರಣ್ಯ.
ಯಕ್ಷ–ವೃಕ್ಷಾದಿಗಳಿಂದಲೂ–ಗಂಧರ್ವನಗರಗಳಿಂದಲೂ ಗೋಮಂತವಿಹ–
ಶ್ರೀಮಂತವಿಹ
ಉಚ್ಛಮನರಾಜ್ಯದ ಉತ್ತುಂಗತುಂಗವದು ಉಪ್ಪರಿಗೆಯಲಿ, ಉರ್ವಶಿಯವಳು

ಕಾಲಶನಿಸಂತಾನವು ಕಾಲಿಟ್ಟು ಕುಲಗೆಡಿಸಲಾಗದಾ ಶಾಶ್ವತ ಸ್ವರ್ಗಸುಹಾಸಗಳ
ಸನ್ನಿಗೊಳಗಾಗಲಿಲ್ಲ.
ಸೂರ್ಯಹಾಸದ ಕಿರಣಕಾಂತಿಗಳ ಕೆಳಗೆ ದೈವತಂದ ಪ್ರಗಾಢದೊಲು
ಪವಡಿಸಿದ ಪರ್ವತರಾಜರುಗಳು ಶ್ವೇತದ್ರಾಪಿಯ ವಸನದೊಳಗೆ
ಒಪ್ಪಿತರಾಗಿ, ಹಿಮದ ಹತ್ತುರಾಜ್ಯಗಳನು ಹತ್ತುಮಕ್ಕಳಿಗೆಂದು ಹಂಚಿ
ಸ್ವಗತತೃಪ್ತದಲಿ ಸಮಾಧಿಯಾಳವ ಸೇರಿ ಸ್ತಬ್ಧವಿರಲು, ಪರ್ವತಪುತ್ರಿಯರಾಗಿ
ಪಟ್ಟವೇರಿದ ಕಿರುಬೆಟ್ಟಗಳವು ಶೈಶವದಲಿಹ ಸ್ರೋತಸಹಸ್ರಗಳಿಗೆ
ಮಲೆಮಂಜಿನ ಮೊಲೆಹಾಲನೂಡಿ ಮಂದಾಕಿನಿಯರ ಮೈದುಂಬಿರಲು,
ತಮ್ಮ ನೀರಸೆಳವಿನಲಿ ತಾವೆ ಮುಳುಗಿ ಮೈದೋಯಿಸಿಕೊಂಡ ಮುನ್ನೂರು
ಮಲಯಮಾನಿನಿಯರು, ನದಿನಾರಿಯರೆಂಬ ನೂರೆಂಟು ನಾಮಗಳ
ಹೊತ್ತು ಹರಿದು
ಬರಿದಿರುವ ಭೂವಿಸ್ತಾರವನು ಬೆಳಗಿಸಿದರು.
ಬಾನೆತ್ತರಕೇರಿ ಬೆಳೆದ ಬೆಟ್ಟದೋರೆಕೋರೆಗಳ ಬದಿಗೆ ಭೂರುಹಗಳಿಂದ
ಭಾರವಾಗಿ ಬಿಡಾರಹೂಡಿದ
ಕನ್ಯೆ ಬನಶಂಕರಿಯರು ಸಂಕ್ರಾಂತಿಯು ಬಂತೆಂದು ಬಣ್ಣಬಣ್ಣದ ಬಳೆಯ
ತೊಟ್ಟು, ಹಸಿರಸೀರೆಯನುಟ್ಟು, ಕೆಂಪುಕಿರೀಟವನಿಟ್ಟು, ಕಿವಿಯೋಲೆ–
ಕಂಠೀಹಾರಗಳೆಂಬ ಕುಂಕುಮೇಕಾಂತಗಳಿಂದ ಕಣ್ಮನ ಸೆಳೆಯುತ್ತ,
ಮರಕತ–ಮೌಕ್ತಿಕ–ಮಾಣಿಕ್ಯಾದಿ ಮಡುವುಗಟ್ಟಿದ ತಾವರೆಕೊಳಗಳ ತಮ್ಮ
ತೋರೆದೆಯ ಮೇಲೆ ತೊಟ್ಟು, ಮೇಲಿಂದ ಮುಗಿಲಿಳಿದು ಬರುವ
ಮದುಮಗನಿಗಾಗಿ ನೆಲದಾಹಿಯನ್ನೇ ನವವಧುವಾಗಿ ಸಿಂಗರಿಸಿಹರು.
ಅನಿತರೊಳು ಅರಣ್ಯದೇವಿಯರ ಕಂದರಾದ ಕಲ್ಪವೃಕ್ಷಗಳ
ಕೋಟಿಮೂಲಗಳನೆಲ್ಲ ಕಿತ್ತೆಸೆದ ಕಾರ್ಮಣರು, ದಂಡಕಾರಣ್ಯದ ಮೇಲೆ
ದಂಡೆತ್ತಿ ಬಂದು ಅಟವಿಯನೇ ಅಟ್ಟಾಡಿಸಿದರು, ಕಟ್ಟಡವಿಯನೇ
ಕಟ್ಟಿಹಾಕಿದರು. ಗೊಂಡಾರಣ್ಯವನೆಲ್ಲ ಗುಡಿಸಿ ಗೊತ್ತಲಿಗೊತ್ತಿದರು.
ನಾಗರೀಕತೆಯ ನಿರ್ಮಿಸುವ ಹುನ್ನಾರದಲಿ ಹೊನ್ನಮಯವಿಹ
ಹರಿದ್ವರ್ಣವನೇ ಹಾಳುಗೆಡವಿದರು.
ಕೊನೆಗೆ ಕಿರುಬೆಟ್ಟಗಳ ಕೂಟದಲಿ ಪರ್ವತರಾಜ್ಯಗಳ ಕಟ್ಟಿದರು.

ಗಂಧರ್ವಗೋಪುರಗಳೇ ಬಾಯ್‌ಮೇಲೆ ಬೆರಳಿಟ್ಟು ಬಿಲ್ಲುಂಬೆರಗಾವಂತೆ
ಭವ್ಯನಗರಗಳ ಬೆಳೆಸಿದರು.
ನೂರ್ಮಾನದೊರೆಗೆ ನಿರ್ನಾಮವಾಗದೆ ನಿಂತಿರುವ ಮಲಯಮಹಾತ್ಮರುಗಳೆಲ್ಲ
ಮೆಟ್ಟಿದ ಮಾನವನಡಿಗೆ ಮಣ್ಣಾದರೂ, ಶಿಖರಶೈಲಾಗ್ರಗಳವು ಮಾನುಷರ
ಮಹಾಸಾಹಸಕೆ ಮೈವೆತ್ತ ಮಹಾನಗರಿಗಳಾಗಿ ಮೆರೆದವು.
ಬಾನಬಿತ್ತರದಲಿ–ಬಾನಿನೆತ್ತರದಲಿ ನಿಂತವಳು ಬುವಿಯ ಭೂತ–ಭವಾಂತರದ
ಕಥನ–ಕಾರಂಜಿಯನಿಂತು ಕಂಡಳು.
ಅನಿಮೇಷಳ ದಿಟ್ಟಿಯದು ನಿರಾಳದೆಡೆ ನೋಡುತ ನಿಂದಿರಲು, ನೀಲಿಮದಿಂದ
ನೇಹಿಗಳಾಗಿ ನಡೆತಂದ ತಿಲೋತ್ತಮೆಯು ತೈಜಸದಿಂದಾದ
ತನುರಾಶಿಯೊಂದಿಗೆ ತೋರಿ ತಾರಕೆಯೊಲಿಹ ತನ್ನ ತೋರುಗೈಯೆತ್ತಿ
ತಟ್ಟುತ್ತ ನುಡಿದಿಹಳು,
"ಸೋದರಿಯೇ, ನಾವಿನ್ನು ತೆರಳೋಣ. ಭೂತಲಕೆ ಭವಿಸೋಣ"ವೆನ್ನುತ್ತ
ನಡೆದಿಹಳು.
ಕೈ–ಕೈಹಿಡಿದು ಕೆಳಗಿಳಿದ ಕಾಂತೆಯರು ಕಾಲಾಂತರದಿಂದಲೂ ಕಾಯುತ್ತಿದ್ದ
ಕಾರ್ಮಣಲೋಕದೆಡೆ ಕಾಲಿಟ್ಟಿಹರು.

ಉಷೆಯ ಉದರದೊಳಗಿಂದ ಉತ್ಪನನಗೈದ ಉತ್ಕೃಷ್ಟನಿಧಿಯೊಲಿಹ
ಉಚ್ಛಮನದ ಉರ್ವಶಿಯನು
ಪಡೆದು ಪ್ರತಿಷ್ಠಾನದೆಡೆ ಪಯಣಿಸಲೆಂದು ಪಣತೊಟ್ಟ ಪುರೂರವನವ
ಪರಂಧಾಮದ ಪ್ರಭಾವತಿಯಳಿಹ ತಿಲೋತ್ತಮೆಯ ತೀರ್ಥನುಡಿಗಳಿಗೆ
ತಲೆಬಾಗಿ, ತೇರನೇರಿ ತೆಂಕಣದೆಡೆಗೆಗಿಳಿದು ತನ್ನೂರಿಗೆ ತೆರಳಿದರೂ,
ನೂರುನಗರಗಳಿಗೆ ನಾಯಕನಿಹ ನೃಪನವ ನಿದ್ದೆ–ನೀರಡಿಕೆಗಳಿಲ್ಲದೆ
ನರಳಾಡಿದನು. ಪೃಥಿವಿಪತಿಯಾಗಿ ಪುರಜನರನು ಪೊರೆಯಬೇಕಿರುವ
ಪುರೂರವನವ ಪ್ರೇಯಸಿಗಾಗೆಂದು ಪರಿತಪಿಸಿದನು. ಪರದಾಡಿದನು.
ಅರಿಗಳು ಧ್ವಂಸನದಿ–ಪ್ರಜೆಗಳಾಶಂಸನದಿ ಕೈಗಳೆರಡನು ಕಲಂಕರಹಿತವಾಗಿಸಿದ
ಕಾರ್ಮಣನವ

ಸಪ್ತಸೈಂಧವದ ಸಪ್ತಶತಾನಿಕರೆಲ್ಲ ಸ್ತಬ್ದವಿರುವಂತೆ ಪುರಗಳನು ಕಟ್ಟಿಹನು,
ಅರಿಗಳನು ಮೆಟ್ಟಿಹನು.
ದಾನಧರ್ಮದಿಂದಲೂ–ದಯಾಕರ್ಮದಿಂದಲೂ ದಿನಗಳ ದೂಡಿಸಿಹ
ದಣಿವರಿಯದ ಧರಣಿಪತಿಯಿಂದು ಕುಶಲವಿಲ್ಲದೆ ಕೊರಗಿಹನು,
ಮನಶ್ಯಾಂತಿಯಿಲ್ಲದೆ ಮರುಗಿಹನು, ಒಂಟಿಯಾಗುತಲಿ ಒರಗಿಹನು.
ಅಂದೊಮ್ಮೆ–ಹಿಂದೊಮ್ಮೆ ಪುರಾತನರ ಪುಣ್ಯಭಾರತವೆಂದು ಕರೆದೊರೆದು
ಕಾಂತಿಮಯವಿಹ
ರಾಷ್ಟ್ರವಂದು ಅಲೆಮಾರಿ ದಂಡುದಾಳಿಗೋರರ ಕಾಲಡಿಗೆ ಸಿಕ್ಕು ಸತ್ತೊರಗಿತ್ತು,
ಸೋತು ಸುಣ್ಣವಾಗಿತ್ತು.
ರಣಭೀಕರ ರಾಹುರಕ್ಕಸರಿಂದ ರಚಿತವಿಹ ರಕ್ತಸಿಕ್ತ ರೋಚಕತೆಯನು
ಬಂಡೆಗಲ್ಲುಗಳಡಿ ಬರೆದು ಬಸವಳಿದಿತ್ತು.
ಸಾವುನೋವುಗಳ ಸಹಸ್ರಾವಧಿಯದು ಸೂತಕದ ಸುಳಿಯೊಳಗೆ ಸರಿದು
ಸದ್ದಿಲ್ಲದೆ ನಿದ್ದೆಹೋಗಿತ್ತು.
ಕಾಲಚಕ್ರದಲಿ ಕಳೆದುಹೋಗಿದ್ದ ಕುಲಪ್ರದೀಪರ ಕಲ್ಯಾಣಪುಟಗಳಿಗೆ ಕಾಯಕಲ್ಪವನಿತ್ತು
ಕಣ್ತೆರೆಸಿದ,
ಪುರೂರವನವ ಒಂದುಕೈಯಿಂದ ಪ್ರಜೆಗಳನು ಪೊರೆದಿಹನು, ಇನ್ನೊಂದರಿಂದ
ಅರಿಗಳನು ತರಿದಿಹನು.
ಅವನಾಳ್ವಿಕೆಯಲಿ, ಅಮರಲೋಕದಾ ಅಚ್ಯುತಪುರವನ್ನೇ ಅವುಡುಗಚ್ಚುವೊಲು
ಅಚ್ಚುಕಟ್ಟಾಗಿರುವ
ಇಲಾನಗರವದು, ಎತ್ತರೆತ್ತರಕೆ ಬೆಳೆದ ಭವ್ಯಸೌಧಗಳಿಂದಲೂ, ಅಮೃತಶಿಲೆಯಿಂದ
ಕಟೆದು ಕೆತ್ತಿರುವ
ಬೃಹತ್ ವಿಗ್ರಹಗಳಿಂದಲೂ ಹೊನ್ನಮಯವಿಹ ಹಾದಿಬೀದಿಗಳನೆಲ್ಲ ಬೆಳಗಿ
ಬಂಗಾರಮಯವಾಗಿಸಿತ್ತು.
ನಗರದ ನೆತ್ತಿಮೂಲೆಯದು ನೂರು ನೋವುಗಳನು ನಿರ್ಮೂಲಿಸುವಾ
ನೃಪನರಮನೆಯಿಂದ ನಲಿದಿತ್ತು.
ಪುರದ ಪುಣ್ಯಸ್ಥಾನವದು ಮುಕ್ಕೋಟಿ ಮಂದಿರಗಳಿಂದ ಮೂಡಿ ಧರೆಗಿಳಿದ
ದೇವನೆಲೆಯಂತೆ ಧೇನಿಸಿತ್ತು:

ಸ್ವರ್ಗದೊಂದು ಸ್ವರ್ಣರಥವೇ ಸುಳಿದು ಇಳೆಗಿಳಿದಿಹುದೋ? ಇಲ್ಲ ಅರುಣನೇ
ಸಪ್ತಾಶ್ವನಿಯುಕ್ತ
ಸೂರ್ಯರಥವನಿಲ್ಲಿ ನಿಲ್ಲಿಸಿ ನಡೆದಿಹನೋ? ಎಂಬಂತಿರುವ
ಸೂರ್ಯಮಂದಿರವದು ಸುತ್ತೇಳು
ಕೋಟೆಯಿಂದ ಕವಿದು ಕೇಂದ್ರದಲಿ ಕುಳಿತಿಹುದು, ಏಳುಬಣ್ಣದ
ವರ್ಣಾಂಶುನೀತಿಯನಿಲ್ಲಿ ನೆನೆದಿಹುದು.
ದ್ವಾದಶಮಾಸಗಳ ಹಿಡಿಗಂಬಿಗಳಿಂದ ಹಿಡಿದು, ಅರ–ನಾಭಿಗಳಿಂದ ಜಡಿದು
ಜತನದಿಂದಿಹ
ರಥಚಕ್ರದ ಹನ್ನೆರಡು ಗಾಲಿಗಳವು ಮಂದಿರದ ಮೂರು ಮಗ್ಗುಲಿನಲಿ ಮೂಡಿ
ಮೆರೆದಿಹವು.
ಸಂವತ್ಸರವೊಂದರಲಿ ಸಂಖ್ಯಾಗುಣಿತವಿಹ ದಿನಲೆಕ್ಕದ ಮುನ್ನೂರರವತ್ತೈದು
ಮೆಟ್ಟಿಲುಗಳಲ್ಲಿ
ಏದುಸಿರನಿಡುತ ಏಳುಬೀಳುತ ಏರುವ ಸರ್ವ ಭಕ್ತರ ಭವಪಾಪಗಳನೆಲ್ಲ
ಬಗೆಹರಿಸಿಹುದು.
ಚೌಕ–ಚಚ್ಚೌಕದಿ ಎಳೆದ ಗೀಟುಗಳಂತೆ ನೇರಾರೇರವಿಹ ಉದ್ದಗಲದ
ರಾಜಬೀದಿಗಳವು
ಸಾರ್ಥವಾಹನರಿಗೆಂದೇ ಸಿದ್ಧವಿರಿಸಿಹ ಸಾಧುಮಾರ್ಗದಂತೆ ಸರಕು
ಸಾಗಣೆಗೆಂದು ಸಹಕರಿಸಿತ್ತು.
ಗಗನಚುಂಬಿ ಕಂಬಗಳ ಮೇಲೆ ತೊಲೆಗಳನಿರಿಸಿ, ಗಚ್ಚು–ಗಾರೆಗಳಿಂದ
ಗೋಡೆಗಳ ಭರಿಸಿ,
ಥಳಗುಟ್ಟುವ ನೆಲೆಗಟ್ಟನು ನಿರ್ಮಿಸಿ, ಸ್ವರ್ಣದ್ವಾರಗಳಿಂದ ಸೌಧವದನು
ಸಿಂಗರಿಸಿ, ಶಿಖರವಿರಿಸಿ
ಒಳಗೆ ಪುರಾಣಪುಣ್ಯ ಪುರುಷರ ಪ್ರತಿಮೆಗಳನಿರಿಸಿ, ಕಳೆದುಹೋದ ಕಾಲವನು
ಕಲ್ಲಿನಲಿ ಕೆತ್ತಿಹರು.
ಸೋಮಯಜ್ಞದೊಳು ಸಾಮಗಾನವ ಸುರಿಸಿ ಸುರರ ಸಂಪ್ರೀತಿಯನು
ಸಂಪಾದಿಸಲೆಂದು

ಯಜ್ಞಶಾಲೆಯೊಳು ಅಗ್ನಿದೇವನಿಗೆ ನಮಿಸಿ ನೂರೆಂಟು ವೇದಮಂತ್ರಗಳ
ಮಂತ್ರಿಸುವರು.
ಪರ್ವತಾಗ್ರವನೇರಿ ಪುರಗಳನು ಕಟ್ಟುವ ಕಟ್ಟಾಳುಗಳಿಗಾಗಿ ಕೈಚಳಕ–ಕಾಲ್ಪುಟಿಗೆಯ
ಕಲಿಸಿ,
ಕೋಟಿಕಲಿಗಳಿಗೆಂದು ಧನುರ್ವಿದ್ಯೆಯ ಧಾರೆಯೆರೆದು ಸಿದ್ಧರಿಹ
ಸಿದ್ಧಪಡೆಗಳಿಗೆಂದು ಸಿದ್ಧಪಡಿಸಿಹರು
ಮಾರಕವಿಹ ಮಂತ್ರಾಸ್ತ್ರಗಳ, ತಾರಕವಿಹ ತಂತ್ರಾಸ್ತ್ರಗಳ, ಭೀಕರವಿಹ ಬ್ರಹ್ಮಾಸ್ತ್ರಗಳ.
ಕಮ್ಮಾರನ ಕುಲುಮೆಯದು ಕಾದು ಕೆಂಪಾಗಿರಲು ಬಡಿವ ಸುತ್ತಿಗೆಯ ಸದ್ದು
ಖಣಿಲ್ಲೆಂದು ಖಣಗುಟ್ಟಿತ್ತು.
ದೇವಮಂದಿರದ ದುಂದುಭಿಯಾಗಿ ದಿಕ್ಕನೆಲ್ಲ ದುಮುಗುಟ್ಟುವ ಘಂಟಾನಾದವದು
ಘಣಿಲ್ಲೆಂದು ಘಣಗುಟ್ಟಿತ್ತು.
ನಗರದ ಪಡಿಮೂಲೆಯೊಂದರಲಿ ಜಾಗತಿಕ ಪೇಟೆಯೊಂದು ವಣಿಕರ
ವಾಣಿಜ್ಯನೆಲೆಯಾಗಿ ವಂದಿತವಾಗಿತ್ತು.
ಸಾವಿರಸಾರ್ಥಮಂಡಲಗಳಲೂ ಸಿದ್ಧವಿರದ ಸರಕುಗಳಲ್ಲಿ ಸರ್ವೇಸಾಮಾನ್ಯದೊಲು
ಸರಬರಾಜಾಗುತ್ತಿಹವು.
ನಗರದ್ವಾರದಿಂದ ನೂರಡಿ ದೂರದಲಿ ದಟ್ಟವಿಹ ದಂಡಕಾರಣ್ಯದ ಈಚೆಯಲಿ
ಸೂಚ್ಯವಾಗಿ
ಬೆಳೆದ ಬಯಲು ಬೆಟ್ಟಗಳೆಲ್ಲ ಬಿತ್ತಿದ ಬೀಜವನು ಬಂಗಾರಮಯವಾಗಿಸುವ
ಬೇಸಾಯದ ಭೂಮಿಯಾಗಿರಲು
ಕೃಷಿವಲರು ಕೈಗೊಂದು ಕುಡುಗೋಲನಿತ್ತು, ಹೆಗಲಿಗೊಂದು ನೇಗಿಲನಿತ್ತು,
ಉತ್ತು–ಬಿತ್ತಲೆಂದು
ಉಷೆಯಿಂದ–ನಿಶೆಯೊರೆಗೆ ದುಡಿಯುವರು, ದಣಿಯುವರು, ಮರುದಿನ
ಮತ್ತದೇ ಮಣ್ಣಿನೊಳು ಮಣಿಯುವರು.
ಚತುರ್ವಿಧದಿಂದಲೂ–ಚತುರ್ವರ್ಣದಿಂದಲೂ ಚೆಲುವ ಚಿತ್ತಾರವಿಹ ನಗರದಲಿಂದು
ನೃಪನಿಗೆ ನಲಿವಿರಲಿಲ್ಲ.
ಪುರದ ವಾಸ್ತುಶೈಲಿಯದು ಪುರಾಧಿಪತಿಯ ವಸ್ತುಸ್ಥಿತಿಯನು ಒನಪುಗೊಳಿಸುವಲ್ಲಿ
ವಿಫಲಗೊಂಡಿತ್ತು.

ಆರ್ಯನೆಲೆಯನ್ನೇ ಆಪೋಶನಗೈಯ್ವಂತೆ ಆಚರಿಸಿದ್ದ ಆಡಳಿತವಿಂದು
ಆರಾತಿಯಂತೆ ಆವರಿಸಿಕೊಂಡಿತ್ತು.
ಮನೆಯ ಮೂವತ್ತು ಮಂದಿಯೆಲ್ಲ ಮಳೆಯಿಲ್ಲದೆ ಮುಗ್ಗರಿಸಿರುವಾ
ಮುರುಕುನಾಡನು ಮರೆತು
ಮುಂದೋಡಿರಲು, ಮಕ್ಕಳಿರದೆ ಮಸಣವಟ್ಟಿಗೆಯಾಗಿರುವಾ ಮನೆಯ
ಮೂಲೆಯೊಂದರೊಳಗೆ
ಅಡ್ಡಕುದ್ದಕ್ಕೆ–ಮೇಲುಕೆಳಗಾಗಿ ಚಿತ್ರವಿಚಿತ್ರವಿಹ ಚಿತ್ತಾರವ ಬಿಡಿಸಿದೊಲು ಬಲೆಹೆಣೆದು
ಬಲಿಗಾಗಿ ಬಾಯ್ತೆರೆದು ಬಿದ್ದಿರುವ ಊರ್ಣನಾಭವೊಂದು ಊಟ
ಉಪಚಾರವಿಲ್ಲದೆ
ತನ್ನ ಬದುಕಬಟ್ಟೆಯಂತಿದ್ದ ಬಲೆಯೊಳಗೆ ತಾನೇ ಬಲಿಯಾಗಿ ಬದುಕ
ಬವಣೆಗೆಡುವೊಂತೆ,
ಚಾಂದ್ರ–ಪಾರ್ಥಿವ ವ್ರತವ ಕೈಗೊಂಡು ರಾಜ್ಯವನು ಪೊರೆಯಲೆಂದು
ಪ್ರಮಾಣಿತನಾದ ಪುರೂರವನು
ಉದ್ದಂಡ–ದೋರ್ದಂಡನಾಗಿ ದಿಕ್ಕು–ದಾರಿಗಳೆಲ್ಲ ದುರ್ಭೇದ್ಯವಿರಲೆಂದು ತಾನೇ
ಕಟ್ಟಿ ಬೆಳೆಸಿದ
ಗಿರಿದುರ್ಗಗಳ–ಮಹಿದುರ್ಗಗಳ ಮಡುವಿನೊಳಗೆ ಮೂರುಸುತ್ತಾಗಿ ಮಣಿದು
ಮೈಮುರಿದು
ಮಲಗಿರುವ ಮಹಾನಾಗರದಂತೆ, ಕೊತ್ತಲದೊಳಗಿನ ಒತ್ತೆಯಾಳಾಗಿ
ಒರಗಿಹನು.
ರಾಣಿಯಂತಃಪುರದಲವಗೆ ರಂಜನೆಯಿಲ್ಲ, ಅಣುಗರಂತಃಕರಣದವಗೆ
ಆನಂದವಿಲ್ಲ.
ತಮಾಲಾದಿ ತರುತೂರ್ಯಗಳಂತೆ ತಂಪೆರೆವ ತಂದೆಯ ತೀರ್ಥವದನದಲವಗೆ
ತನ್ಮಯತೆಯಿಲ್ಲ.
ನಿದ್ದೆಯಿಲ್ಲದಾ ನೂರೆಂಟು ನಿಶಾವಧಿಗಳನು ನೋವಿನಲೇ ನಡೆಸಿಹನು,
ನೋವಿನಲೇ ನುಗಿಸಿಹನು.
ಹತ್ತೆಗೈದ ಹತ್ತಾರು ಹಗಲುಗಳನು ಹೆಗಲಮೇಲೆ ಹೊತ್ತೊಯ್ದಿಹನು,
ಹೊಂಡದೊಳು ಹುಗಿದಿಹನು.

ನೃಪನ ಹೃದಯವದು ರುಧಿರಾಗ್ನಿಕುಂಡವಾಗಿತ್ತು, ಮಸ್ತಿಷ್ಕವದು ಮಾಯೆಯ
ಮಂತ್ರವಶವಾಗಿತ್ತು.
ಕವಲುಗೋಲ್ಮಿಂಚಿನ ಶತಧಾರೆಯಿಹ ತೀಕ್ಷ್ಣಾಯುಧಗಳವು ತಿಂಗಳನೆದೆಯನ್ನೇ
ತಿವಿಯಲಾರಂಭಿಸಿತ್ತು.
ಧರ್ಮಯುದ್ಧದಿ ಸೋತು ಧರಾತಲಕಿಳಿದ ದೈತ್ಯರ ಕಂಕಾಲಕೇತುಗಳ ಕೂಟವದು
ಕಣ್ಮುಂದೆ ಕುಣಿದು ಕಾಲೆಳೆದಿತ್ತು.
ಬ್ರಹ್ಮರಾಕ್ಷಸರ ಬ್ರಹ್ಮೇತಿಗಳೆಂಬ ಭೂತವೃಂದವದು ಬಂದು ಬಾಯ್ಬಿಡಿದುಕೊಂಡು
ಭೀತಿಹುಟ್ಟಿಸಿರಲು,
ಅರಮನೆಯೇ ಸೆರೆಮನೆಯಾಗಿ, ಗೋಡೆ–ತೊಲೆ–ಕಂಬಗಳೇ ಕಂಬಿಗಳಾಗಿ
ಬಂಧನದ ಭಯಹುಟ್ಟಿಸಿರಲು,
ಎದ್ದ! ಎದ್ದೇ ಎದ್ದ! ಇದ್ದಲ್ಲೇ ಬಿದ್ದ ಮೆದ್ದ ಹಾವಿನಂತಿದ್ದವ ಮಡುವಿನೊಳಗಿಂದ
ಕೊಡವಿಕೊಂಡೆದ್ದ!
ಅವನಾಜ್ಞೆಗೆಂದು ಮಣಿದು ಮುಂದೆಲೆಯ ಮಣ್ಣಿಗೆನುತಿದ್ದ ಗ್ರಾಮ ನಗರಾದಿ
ಖೇಟಗಳನು ಬಿಟ್ಟೋಡಿದನು.
ಒಂದು ಕಾಲಕ್ಕೆ ಅವನ ಪ್ರೀತಿಪಾತ್ರವಾಗಿದ್ದ ಪುರವಂದು ಪ್ರೇತಪಾತ್ರವಾಗಿ
ಪರಿಗಣಿತವಾಗಿತ್ತು.
ಮುನ್ನೂರು ಮಂಡಲಗಳನಾಳ್ವ ಮಹಾಜನಪದರ ಮೋಹ–ಮಮತೆಗಳೆಲ್ಲ
ಮಂಜಿನೊಲು ಮರೆಯಾಗಿತ್ತು.
ಏಕೋಣಅರ್ಧಶತ ರಾಜರನು ಏಕಚಕ್ರಾಧಿಪತ್ಯದಡಿಗೆ ತಂದ ಚಕ್ರವರ್ತಿಯನು
ಏಕಾಂಗಿ
ಬೆಟ್ಟಗಳವು ಕೈಬೀಸಿ ಕರೆದಿರಲು, ನೃಪನವ ನಡೆದಿಹನು. ನಿತಾಂತ
ನಿಲಯದೆಡೆಗೋಡಿ ನಿಂದಿಹನು.

(ಸಶೇಷ)

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

ದಿನಾಂಕ 1ನೇ ಸೆಪ್ಟೆಂಬರ್ 2025ರ ಸೋಮವಾರ ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್ ವತಿಯಿಂದ ಬೆಳಿಗ್ಗೆ 10.30 ರಿಂದ 12.00 ಗಂಟೆಯವರಗೆ "The True Child and The Young in Us" ಎಂಬ ವಿಷಯವಾಗಿ ಡಾ||ಅಲೋಕ್ ಪಾಂಡೆ (ಶ್ರೀ ಅರವಿಂದೋ ಆಶ್ರಮ, ಪುದುಚೇರಿ) ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಸಹ ಪ್ರಸ್ತುತ ಪಡಿಸಲಾಯಿತು.

ದಿನಾಂಕ 19ನೇ ಸೆಪ್ಟೆಂಬರ್ 2025ರ ಶುಕ್ರವಾರ ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್ ವತಿಯಿಂದ "ಶ್ರೀ ಅರವಿಂದೋ ಸೊಸೈಟಿ ಸ್ಥಾಪನ ದಿನ"ವನ್ನು ಆಚರಿಸಲಾಯಿತು. ಬೆಳಿಗ್ಗೆ 7.30 ರಿಂದ 7.50 ರವರೆಗೆ ಸಾಮೂಹಿಕ ಧ್ಯಾನ ಏರ್ಪಡಿಸಲಾಯಿತು. "Sri Aurobindo Society" ವಿಷಯ ಕುರಿತು ದಿನಾಂಕ 5ನೇ ಸೆಪ್ಟೆಂಬರ್ 2025 ರಿಂದ 25ನೇ ಡಿಸೆಂಬರ್ 2025 ವರೆಗೂ ಶ್ರೀಅರವಿಂದ ಸಂಕೀರ್ಣದ ಸಾಂಸ್ಕೃತಿಕ ಸಭಾ ಭವನದಲ್ಲಿ ಫೋಟೋ ಚಿತ್ರ ಪ್ರದರ್ಶನ ಆಯೋಜಿಸಲಾಗಿದೆ.

ದಿನಾಂಕ 25ನೇ ಅಕ್ಟೋಬರ್ 2025ರ ಶನಿವಾರ ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್ ವತಿಯಿಂದ "ಸಾವಿತ್ರಿ ದಿನ"ವನ್ನು ಆಚರಿಸಲಾಯಿತು. ಬೆಳಿಗ್ಗೆ 10.00 ರಿಂದ 10.20 ರವರೆಗೆ ಸಾಮೂಹಿಕ ಧ್ಯಾನ ಏರ್ಪಡಿಸಲಾಯಿತು. ತತ್ಸಂಬಂಧ 10.30 ರಿಂದ 12.00 ಗಂಟೆಯವರಗೆ "On Savitri" ಎಂಬ ವಿಷಯ ಕುರಿತು ಪ್ರೊ. ಪಿ.ಕೆ. ನಂದೀಶ (ಶ್ರೀ ಅರವಿಂದೋ ಸೊಸೈಟಿ, ತುಮಕೂರು ಕೇಂದ್ರ) ಇವರು ಕನ್ನಡದಲ್ಲಿ ಉಪನ್ಯಾಸ ನೀಡಿದರು. ಉಪನ್ಯಾಸ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಭಾಗವಹಿಸಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಆಸಕ್ತರು ಭಾಗವಹಿಸಿದ್ದರು.



**ಶೀಲಾ ದೇವಿ**

(ನರ್ಮದಾ ನದಿ ತೀರದ ಕರ್ನಾಲಿ ಎನ್ನುವ ಊರಿನಲ್ಲಿ ಇರುವ ಮಹಾಕಾಳಿ ಮಂದಿರ)

**RNI No. 22511/1971**
No. of Pages **72 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.